

# ANTARANGA

# ನಮ್ಮಲ್ಲಿ

## — ಕನ್ನಡ ಪುಸ್ತಕಗಳು —

| | | | |
|---|---|---|---|
| ಶಾಂತಿ ಪುರಾಣ .... .... | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ .... | 1 | 0 | 0 |
| ಸರಸ್ವತಿ .... .... (ಸಾಮಾಜಿಕ ನಾಟಕ) | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... (ಇಂಗ್ಲಿಷ್ ಸ್ವಯಂ ಬೋಧಿನಿ) | 0 | 2 | 0 |
| ಸಾಮುದ್ರಿಕ ಶಾಸ್ತ್ರ .... | 0 | 8 | 0 |
| ಹೊಂದೊವಲು ಹಂಬಲು .... | 0 | 6 | 0 |
| ವೀರಭೂಮಿ (ಕತೆ) .... | 0 | 1 | 6 |
| ಗೀತೆಯ ಕೈಗನ್ನಡಿ .... | 0 | 4 | 0 |
| ಗೀತೆಯ ಮೂಲ .... (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | 0 | 1 | 0 |
| ಶ್ರೀಪದ್ಯರತ್ನಾಕರ ಭಾಗ I | 0 | 1 | 0 |
| ಡಿ II | 0 | 1 | 0 |
| ಡಿ III | 0 | 1 | 0 |
| ಡಿ IV | 0 | 1 | 0 |
| ಪುರಂದರ ದಾಸರ ಪದ ಭಾಗ I | 0 | 4 | 0 |
| ಡಿ II | 0 | 4 | 0 |
| ಡಿ III | 0 | 4 | 0 |
| ಡಿ. IV | 0 | 4 | 0 |
| ಮಧುವನ .... .... | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | 0 | 4 | 0 |
| Gouthama the Buddha | 0 | 8 | 0 |
| ಭಗವದ್ಗೀತೆ .... .... | 0 | 2 | 0 |
| ಕುಕ್ಕುಟ ಪಂಚಾಂಗ ... | 0 | 1 | 0 |
| ಮಗ್ಗಿ .... .... | 0 | 0 | 6 |
| ತುಳುನಾಡ್ ತಿಲಕ ಪಂಚಾಂಗ | 0 | 1 | 0 |
| ವೈಜಯಂತಿ ಪಂಚಾಂಗ .... | 0 | 2 | 6 |
| ಜಯಪಾಂಡ್ಯ ವಿಜಯ .... | 0 | 2 | 0 |

## — ತುಳು ಪುಸ್ತಕಗಳು —

| | | | |
|---|---|---|---|
| ಕೃಷ್ಣ ಸಂಧಾನ (ಪ್ರಸಂಗ) ... (ಕನ್ನಡ ಕೃಷ್ಣ ಸಂಧಾನವನ್ನೊಳಗೊಂಡಿದೆ.) | 0 | 8 | 0 |
| ಬಲೀಂದ್ರ (ಕತೆ .... | 0 | 2 | 0 |
| ಅಳಿಯ ಸಂತಾನ ಕಟ್ಟ್ವದ ಗುಟ್ಟು (ವಿಮರ್ಶಾತ್ಮಕ ಲೇಖನ) | 0 | 4 | 0 |
| ಕಾಸಿಗ್ (ಕತೆ) .... | 0 | 4 | 0 |
| ತುಳು ವ್ಯಾಕರಣ .... | 0 | 8 | 0 |
| ಜನಮರ್ಲ್ (ನಾಟಕ) .... | 0 | 6 | 0 |
| ಮದ್ ಮಾಳತ್ ಮುಪ್ ಮಾಯೊ (ಕತೆ) | 0 | 2 | 0 |
| ಬಂಗಾರ್ ದಂಗಿದ ಕತೆ ... | 0 | 1 | 0 |
| ಪದ್ಯಮಾಲಿಕೆ .... | 0 | 1 | 0 |
| ಸತ್ಯನಾರಾಯಣ ಕತೆ .... | 0 | 8 | 0 |
| ಸತಿ ಕಮಲೆ .... | 0 | 6 | 0 |
| ಕನ್ಯೋಪದೇಶ .... | 0 | 2 | 0 |
| ಕನ್ನಡಕೊ .... | 0 | 0 | 6 |
| ವಾಲಿಸುಗ್ರೀವರ ಕಾಳಗ .... | 0 | 3 | 0 |
| ಬೊಬ್ಬರ್ಯೆ (ಪಾಡ್ದನ .... | 0 | 2 | 0 |
| ತೊಡಕಿನಾರ್ ,, .... | 0 | 2 | 0 |
| ಮುಂಡತ್ತಾಯ ,, ... | 0 | 2 | 0 |
| ವಿಶ್ವರೂಪ ದರ್ಶನ .... (ಗೀತೆಯ 11ನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | 0 | 1 | 0 |
| ಭಗವದ್ಗೀತೆ .... | 0 | 5 | 6 |

ತುಳುನಾಡ್ ಪ್ರೆಸ್, ಉಡುಪಿ

ಸಂಪುಟ ೫

# ಅಂತರಂಗ

ಸಂಚಿಕೆ ೧೦೮

ಆಗೋಸ್ತು ೧೧, ೧೯೪೦

## ANTARANGA-WEEKLY, UDIPI.

ಪ್ರಧಾನ ಸಂಪಾದಕ: **ಮಿಯಾಳ ನರಸಿಂಹಾಚಾರ್.**

ಸಂಪಾದಕ: **ಕೆ. ಹೈದರ್.**

**ಸಹ-ಸಂಪಾದಕರು:**

ಪಿ. ವಿ. ಆಚಾರ್ಯ. ಪಿ. ಎಲ್. ಅಡಿಗ.

**ಸಲಹೆಗಾರರ ಮಂಡಲ:**

ಶ್ರೀ ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಆರ್. ಆರ್. ಕುಂಜೂರ್.
,, ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ

ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್, ಗ್ರಂಥಕರ್ತ
,, ಪಿ.ವಿ.ಉಪಾಧ್ಯಾಯ, ಬಿ.ಎ., ಎಲ್.ಎಲ್.ಬಿ.
,, ಆರ್. ಎಸ್. ಶೆಣೈ, ಸಂಪಾದಕ, ಧುರೀಣ

ಶ್ರೀ ಬನ್ನಂಜೆ ರಾಮಾಚಾರ್ಯ, ಸಂಪಾದಕ, ಧುರೀಣ

**PROPRIETORS:**

**GENERAL SUPPLIES LTD, UDIPI.**



**Our Advertising Agent & Representative at Bombay:**

**Sri. K. K. HEBBAR, 12, Wallace Street, Fort, Bombay.**

### ADVERTISEMENT RATES

PER INSERTION

| | | | | |
|---|---|---|---|---|
| Full page | Rs. | 15 | 0 | 0 |
| Half page | ,, | 8 | 0 | 0 |
| Quarter page | ,, | 5 | 0 | 0 |
| 1/8 page | ,, | 3 | 0 | 0 |
| Cover back | ,, | 30 | 0 | 0 |
| Cover inside | ,, | 22 | 8 | 0 |
| Sq. inch | As. | 0 | 8 | 0 |

A commission 6¼% will be allowed on contracts for above 3 months and below 6 months & 12½% for above 6 months & within a year.

All previous rates are cancelled.

14-4-1940

### ADVERTISERS PLEASE NOTE:

- Advertisement Charges are payable in advance.
- Any change in the advertisement should be intimated a fortnight in advance.
- Blocks, if any will be returned at the cost of the advertiser.
- The management reserves the right to reject advertisements, which may be deemed objectionable.

Advertisement Manager,
ANTARANGA, UDIPI.

Bangalore Chief Agency Office: 45 A. S. Street, Bangalore City.

# ಶ್ರೀ ಚಂದ್ರಕಲಾ ಸ್ಪರ್ಧೆ ನಂ. 45.

**ಬೆಂಗಳೂರು ಸಿಟಿ.**

ಎಂಟಾಣೆಗೆ 3 ಕೂಪನ್‌ಗಳು | **170 ರೂಪಾಯಿಗಳ ಬಹುಮಾನ!** | ಒಂದು ರೂಪಾಯಿಗೆ 7 ಕೂಪನುಗಳು

**ಪ್ರಥಮ ಬಹುಮಾನ ರೂ. 80** ಇತರ ಬಹುಮಾನ ರೂ. 80 **ಸ್ಪೆಷಲ್ ರೂ. 10.**

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರವನ್ನು ಕಳುಹಿಸಿದವರಿಗೆ ಹತ್ತು ರೂಪಾಯಿ ಕೊಡಲಾಗುತ್ತೆ.

ಸೂಚನೆ – ಈ ಸ್ಪರ್ಧೆಯ ಸರಿಯಾದ ಉತ್ತರವನ್ನು 'ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್' ಬೆಂಗಳೂರು ಸಿಟಿ ಇವರಲ್ಲಿ ಮೊಹರು ಮಾಡಿಡಲ್ಪಟ್ಟಿರುತ್ತದೆ. ಆದಕ್ಕೆ ಪ್ರತ್ಯಕ್ಷರವೂ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ ೧ ಮತ್ತು ೨ ತಪ್ಪಿನ ಉತ್ತರಗಳಿಗೆ ಇತರ ಬಹುಮಾನವೂ, ಕೊಡಲ್ಪಡುವದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತಲೂ ಹೆಚ್ಚಾಗಿದ್ದಲ್ಲಿ, ಬಹುಮಾನವು ಎಲ್ಲರಿಗೂ ಸಮನಾಗಿ ಹಂಚಲ್ಪಡುತ್ತದೆ. ಬಹುಮಾನದ ಹಂಚಿಕೆಯು ವಿಚಾರ ಸ್ಪರ್ಧೆಯ ಮ್ಯಾನೇಜರರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ವಿಧವಾದ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಎಂಟಾಣೆಗಳಿಗೆ 3 ಉತ್ತರಗಳನ್ನೂ 1 ರೂ. ಗೆ 7 ಉತ್ತರಗಳನ್ನೂ ಕಳಿಸಬಹುದು. 3ಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ ಪ್ರವೇಶ ಧನವನ್ನು ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ಕಳುಹಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಈ ಕೆಳಗಿನ ಕೂಪನ್ನಿನಲ್ಲಾಗಲೀ ಬರಿಯ ಕಾಗದದಲ್ಲಾಗಲಿ, (ಶಾಯಿಯಿಂದ ಚಿತ್ತಿಲ್ಲದಂತೆ) ಬರೆದು ಕಳಿಸತಕ್ಕದ್ದು. ಉತ್ತರಗಳು ತಲಪಲು 3-9-40ನೇ ಮಂಗಳವಾರ ಕೊನೆಯ ದಿನ. ನಂತರ ಬರುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಇದರ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರ ಹೆಸರೂ ಸಹ 15-9-40ರ ಅಂತರಂಗದಲ್ಲಿ ಪ್ರಕಟಿಸಲ್ಪಡುತ್ತದೆ. ಉತ್ತರಗಳನ್ನು ಕೆಳಗಿನ ವಿಳಾಸಕ್ಕೆ ಕಳಿಸತಕ್ಕದ್ದು. ಪೋಸ್ಟು ಮೂಲಕ ಕಳುಹಿಸುವವರು 3-9-40ನೇ ತಾರೀಕು ಕೂಡಾ ಕಳುಹಿಸಬಹುದು.

| | | | | | | |
|---|---|---|---|---|---|---|
| 1 ಸು | ಧಾ | ಕ | 2 ರ | ■ | 3 | ತಿ |
| | ■ | 4 ಆ | | ■ | 5 | ದ್ಯ |
| ■ | 6 | ಕ್ರಿ | ■ | 7 | ಟ್ಟ | ■ |
| 8 | ■ | ■ | 9 | ತ | ■ | 10 ಆ |
| ಳು | ■ | 11 | ತಾ | ಚಾ | ರ | |
| ■ | 12 | ■ | ■ | ■ | 13 | ರ |
| ■ | ದು | ■ | 14 ಒ | | ವು | ■ |

**ಎಡದಿಂದ ಬಲಕ್ಕೆ:**–1 ಚಂದ್ರ; 3........ಇಲ್ಲದ ಕೆಲಸವು ಕೆಡುವುದು. 4 ಒಂದು ಪ್ರಾಣಿ. 5 ಕೆಲವರು ರಸವಿಲ್ಲದ ಇದನ್ನು ರಚಿಸುತ್ತಾರೆ. 6 ಕೆಲವರು ಇದಕ್ಕಾಗಿ ದೇವರನ್ನು ಧ್ಯಾನಿಸುತ್ತಾರೆ. 7 ಅನೇಕ ವೇಳೆ ಇದರಿಂದ ಕೆಡುಕುಂಟಾಗಿರುವುದು. 9 ಬಹುಜನರ ಇದಕ್ಕೆ ವಿರೋಧವಾಗಿ ನಡೆಯಬಾರದು. 11........ಗಳನ್ನು ಬಿಟ್ಟು ನಡೆಯಬಾರದು. 13 ಕಳ್ಳ 14 ಪ್ರೀತಿ.

**ಮೇಲಿನಿಂದ ಕೆಳಕ್ಕೆ:**– 1 ಪಾನವು ಒಳ್ಳೆಯದಲ್ಲ. 2 ಈತೆಯ ಅನುಗ್ರಹದಿಂದ ಎಲ್ಲರಿಗೂ ಮಂಗಳವಾಗಲಿ. 8 ಇಂತಹ ಭೂಮಿಯಲ್ಲಿ ಚೆನ್ನಾಗಿ ಬೆಳೆಯಾಗುವುದಿಲ್ಲ 10 ಪ್ರಾಣಧಾರಣೆಗೆ ಇದು ಒಂದು ಮುಖ್ಯವಾದ ವಸ್ತು. 12 ಗಾರಿಕೆಯು ಕೆಟ್ಟದ್ದು.

ನಮ್ಮ ಏಜಂಟರು:—**1** ಬೆಂಗಳೂರು:-ಮ. ರಾ. H. K. ಮೂರ್ತಿ, ತೆಂಗಿನಕಾಯಿ ವ್ಯಾಪಾರಿ ಮತ್ತು ನ್ಯೂಸ್ ಏಜಂಟ್. 55 ನ್ಯೂಮಾರ್ಕೇಟ್. ಸೇತೂರಾವ್ ಸ್ಟ್ರೀಟ್. **2.** ಎ. ಎ. ಗುಂಡಪ್ಪ S/o M.A. ಆನಂದಾಳ್ವಾರ್, ಜವಳಿವ್ಯಾಪಾರಿ, ಮಂಡ್ಯ. ಇವರಲ್ಲಿ ಕೂಪನನ್ನು ಮತ್ತು ಪ್ರವೇಶಧನವನ್ನು ಕೊಟ್ಟು ರಶೀದಿ ಪಡೆಯಬಹುದು.

**Wanted Agents, Apply for terms.**

ಮ್ಯಾನೇಜರ್: **ಶ್ರೀಚಂದ್ರಕಲಾಸ್ಪರ್ಧೆ,** ೫೫ ನ್ಯೂಮಾರ್ಕೆಟ್, ಸೇತೂರಾವ್‌ಸ್ಟ್ರೀಟ್,
**ಬೆಂಗಳೂರು ಸಿಟಿ.**

# ಸಿಂಹಾವಲೋಕನ



## ಚಿನ್ನದ ತತ್ತಿ

ಇಂಡಿಯಾ ಸರಕಾರದವರು ಪೋಸ್ಟ್ ಮತ್ತು ತಂತೀ ದರಗಳನ್ನು ಇನ್ನಷ್ಟು ಹೆಚ್ಚಿಸುವರೆಂಬ ವಾರ್ತೆಯು ನಿಜವಾಗಿಯೂ ಶೋಚನೀಯವಾಗಿದೆ. ಬಹುಕಾಲದಿಂದ ಪೋಸ್ಟಲ್ ದರಗಳು ಭಾರತದಲ್ಲಿ ಹೆಚ್ಚಿಸಲ್ಪಟ್ಟವೆಯೆಂದು ಎಲ್ಲರಿಗೂ ತಿಳಿದಿದೆ. ಪುನಃ ಯುದ್ಧದ ದೆಸೆಯಿಂದಾಗಿ ಅಧಿಕ ಲಾಭವನ್ನು ಪಡೆಯುವುದಕ್ಕಾಗಿ ಸರಕಾರದವರು ದರಗಳನ್ನು ಹೆಚ್ಚಿಸಲಿದ್ದಾರೆಂಬುದನ್ನು ಕೇಳುವಾಗ ನಮಗೆ ಚಿನ್ನದ ತತ್ತಿಯಿಡುತ್ತಿದ್ದ ಹೇಂಟೆಯ ಬಸಿರನ್ನು ಅತ್ಯಾಸೆಯಿಂದ ಬಿಚ್ಚಿದ ರೈತನ ಕತೆಯು ನೆನಪಾಗುತ್ತದೆ. ಅಂಚೆಯು ದರಗಳನ್ನು ಹೆಚ್ಚಿಸಿದರೆ ಜನರು ಹೆಚ್ಚು ಪತ್ರಗಳನ್ನು ಬರೆಯದಿರುವುದು ಸ್ವಾಭಾವಿಕವಾಗಿದೆ. ಈ ವಿಷಯವು ಕೇಂದ್ರ ವಿಧಾಯಕ ಸಭೆಯಲ್ಲಿ ಪ್ರತಿವರ್ಷವೂ ಚರ್ಚಿಸಲ್ಪಟ್ಟಿದೆ. ಪೋಸ್ಟಲ್ ದರಗಳನ್ನು ಹೆಚ್ಚಿಸಿರುವುದರಿಂದಾಗಿ ಸರಕಾರದವರು ಬಡವರಿಗೆ ತುಂಬಾ ಹಾನಿ ಮಾಡಿದಂತಾಗುತ್ತದೆ.

## ಸ್ವಾರ್ಥತ್ಯಾಗ

ಭಾರತಕ್ಕೆ ಬ್ರಿಟನು ಏನುಮಾಡಲಿದೆ? ಕಾಂಗ್ರೆಸು ಬ್ರಿಟನಿಗೆ ಪೂರ್ಣ ಸಹಕಾರವನ್ನೀಯುವ ವರೆಗೆ ತಲೆಬಾಗಿದರೂ ಬ್ರಿಟಿಷರು ತಮ್ಮ ಧೋರಣೆಯನ್ನು ಬದಲಾಯಿಸುವಂತಿಲ್ಲನೆಂದು ತೋರುತ್ತದೆ. ಹೊಗಳಿಕೆಯ ಹಲಕೆಲವು ಮಾತುಗಳಿಂದಲೇ ಭಾರತೀಯರನ್ನು ಮರುಳುಗೊಳಿಸಿ ಪೂರ್ಣ ಬೆಂಬಲವನ್ನು ಪಡೆಯಲು ಶಕ್ಯವಿದೆಯೆಂದು ಬ್ರಿಟಿಷ್ ರಾಜಕೀಯ ಮುತ್ಸದ್ದಿಗಳ ಅಭಿಪ್ರಾಯವಾಗಿರಬೇಕು. ಭಾರತದ ಪೂರ್ಣ ಬೆಂಬಲವು ದೊರಕುವುದರಿಂದ ಸ್ವಾಭಾವಿಕವಾಗಿ ಬ್ರಿಟಿಷರ ಕುರಿತು ಸದಭಿಪ್ರಾಯವುಂಟಾಗದಿರದು. ಏನಾದರೂ ಸಾಮ್ರಾಜ್ಯಶಾಹೀ ಧೋರಣೆಯ ಸವಿಯನ್ನು ಬ್ರಿಟಿಷರು ಮರೆಯುವುದಾದರೂ ಹೌದೆ?



ಬ್ರಿಟಿಷರು ನಮ್ಮನ್ನು ತಿರಸ್ಕರಿಸಿದರೆ ಆಂತರಿಕ ಅವ್ಯವಸ್ಥೆಯನ್ನು ಲೆಕ್ಕಿಸದೆ ಸತ್ಯಾಗ್ರಹವನ್ನು ಪ್ರಾರಂಭಿಸುವೆವೆನ್ನುವ ಗಾಂಧಿಜಿಯವರು

○ ○ ○

## ದಬ್ಬಾಳಿಕೆ

ದಬ್ಬಾಳಿಕೆಯಿಂದ ಯಾವ ಕೆಲಸವನ್ನೂ ಸಾಧಿಸಲಾಗುವುದಿಲ್ಲವೆಂಬುದು ಅಕ್ಷರಶಃ ಸತ್ಯ. ಜನಪ್ರೀತ ಚಟುವಟಿಕೆಗಳನ್ನು ತತ್ಕಾಲಕ್ಕೆ ದಬ್ಬಾಳಿಕೆಯಿಂದ ತಡೆಯಬಹುದಾದರೂ ನಂತರ ಅವುಗಳು ದ್ವಿಗುಣಿತ ಶಕ್ತಿಯಿಂದ ತಲೆದೋರುವುವೆಂಬುದು ನಿಜವಾಗಿದೆ. ಹಿಂದಿನ ಅನುಭವದಿಂದಲಾದರೂ ಈಗಿನ ಸರಕಾರದವರು ಈ ವಿಷಯದಲ್ಲಿ ಬೇರೆ ಧೋರಣೆಯನ್ನು ಅನುಸರಿಸುವರೆಂದು ಬುದ್ಧಿವಂತರು ನಿರೀಕ್ಷಿಸಿದ್ದರು. ಆದರೆ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳನ್ನು ನೋಡುವಾಗ ಸರಕಾರವು ತನ್ನ ದೃಷ್ಟಿ ಕೋನದಲ್ಲಿ ಎಳ್ಳನಿತು ಬದಲಾವಣೆಯನ್ನೂ ಮಾಡಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಭಾರತ ಸಂರಕ್ಷಣಾ ಕಾಯಿದೆಯನ್ವಯ ನೂರಾರು ಮಂದಿ ಸೆರೆಮನೆಯನ್ನು ಸೇರುತ್ತಿದ್ದಾರೆ. ಇತ್ತೀಚೆಗೆ ಪೂನಾದಲ್ಲಿ ಸಭೆ ಸೇರಿದ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಕಾರ್ಯಕಾರೀ ಸಮಿತಿಯವರು ಈ ಕುರಿತು ಮಾಡಿದ ನಿರ್ಣಯದಲ್ಲಿ "ದಬ್ಬಾಳಿಕೆಯಿಂದ ರಾಷ್ಟ್ರದ ನಿರ್ಧಾರವು ಶಿಥಿಲವಾಗುವ ಬದಲು ಇನ್ನಷ್ಟು ಬಲವಾಗುವದು" ಎಂದು ಹೇಳಿರುವುದು ಸತ್ಯವಾಗಿದೆ. ಆದರೆ ನಮ್ಮ ಸರಕಾರಕ್ಕೆ ಈ ವಿಷಯವು ಹೊಳೆಯದಿರುವುದು ಬೇಸರದ ಸಂಗತಿಯಲ್ಲವೆ?

# ಅಂತರಂಗ

**ಆಗೋಸ್ತು ೧೧, ೧೯೪೦.**

## ವೈಸರಾಯರ ಕೆಬಿನೆಟ್

ಭಾರತದ ವಿವಿಧ ಪಕ್ಷಗಳ ಪ್ರತ್ಯಕ್ಷ ವಿರೋಧದ ದೆಸೆಯಿಂದಾಗಿ ಬ್ರಿಟಿಷ್ ಸರಕಾರದವರು ಒಂದೆರಡು ವಾರಗಳಲ್ಲಿಯೇ ಒಂದು ಪ್ರಾಮುಖ್ಯ ಹೇಳಿಕೆಯನ್ನು ಹೊರಡಿಸುವರೆಂಬ ವಾರ್ತೆಯು ಆಶಾಜನಕವಾಗಿದೆ. ಬ್ರಿಟಿಷ್ ಪ್ರಧಾನರಾದ ಮಿ. ಚರ್ಚಿಲ್‌ರವರು ಸ್ವತಃ ಆ ಹೇಳಿಕೆಯನ್ನು ತಯಾರಿಸುತ್ತಿದ್ದಾರೆಂಬುದನ್ನು ನೋಡುವಾಗ ಬ್ರಿಟಿಷರು ಭಾರತೀಯ ಪ್ರಶ್ನೆಯ ಮಹತ್ವವನ್ನು ಕಟ್ಟಕಡೆಗೆ ಮನಗಂಡಿದ್ದಾರೆಂದು ವಿಶದವಾಗುತ್ತಿದೆ. ಆದರೆ ಆ ಹೇಳಿಕೆಯ ಸ್ವಭಾವವು ಹೇಗಿರಬಹುದೆಂಬುದರ ಮರ್ಮ ಈಗಾಗಲೆ ಸ್ವಲ್ಪಮಟ್ಟಿಗೆ ತಿಳಿದುಬಂದಿದೆ. ಭಾರತದಲ್ಲಿಯ ಜಾತೀಯ ವ್ಯತ್ಯಾಸಗಳ ಪ್ರಶ್ನೆಯನ್ನೂ ಅಲ್ಪಸಂಖ್ಯಾಕರಿಗೆ ಅಧಿಕ ಸಂರಕ್ಷಣೆಯನ್ನೀಯುವ ವಿಷಯವನ್ನೂ ಆ ಹೇಳಿಕೆಯಲ್ಲಿ ಒತ್ತಿ ಹೇಳಲಾಗುವುದಂತೆ! ಪ್ರಾಯಶಃ ವೈಸರಾಯರು ಮುಂಬಯಿ ಮತ್ತು ಮದ್ರಾಸಿನಲ್ಲಿ ವಿವಿಧ ಧುರೀಣರೊಡನೆ ನಡೆಸಿದ ಮಾತುಕತೆಯ ಪರಿಣಾಮವೂ ಆ ಹೇಳಿಕೆಯಲ್ಲಿ ಕಾಣಿಸಿಕೊಳ್ಳಬಹುದು.

ಭಾರತವು ಬ್ರಿಟನಿಗೆ ಪೂರ್ಣ ಸಹಕಾರವೀಯುವುದಿದ್ದರೆ ಯುದ್ಧ ಮುಗಿದ ಒಂದು ವರ್ಷದ ಬಳಿಕ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಕೊಡಲ್ಪಡುವುದೆಂದೂ ಭಾರತೀಯ ಧುರೀಣರೆಲ್ಲರೂ ಒಂದಾಗಿ ಮಾಡಬಹುದಾದ ನಿರ್ಣಯಕ್ಕನುಸಾರವಾಗಿ ಹೊಸ ರಾಜ್ಯಾಂಗರಚನೆಯನ್ನು ಮಾಡಲು ಬ್ರಿಟಿಷ್ ಸರಕಾರವು ಒಪ್ಪುವುದೆಂದೂ ಊಹಿಸಲಾಗಿದೆ. ಕಟ್ಟಕಡೆಗೆ ಬ್ರಿಟಿಷರು ಶುಷ್ಕ ವಿಷಯಗಳಿಗೆ ಪ್ರಾಮುಖ್ಯತೆಯನ್ನೀಯದೆ ಭಾರತೀಯರ ಆಶಾಕಾಂಕ್ಷೆಗಳನ್ನು ನೆರವೇರಿಸುವಂತಾದರೆ ಎರಡೂ ರಾಷ್ಟ್ರಗಳಿಗೆ ಹಿತವಾಗುವುದೆಂದು ಬೇರೆ ಹೇಳಬೇಕೆ?

## ರಾಜತಂತ್ರದ ಚಕ್ರವ್ಯೂಹದಲ್ಲಿ.

ಯುರೋಪಿನ ವಿವಿಧ ರಾಷ್ಟ್ರಗಳ ಮುತ್ಸದ್ದಿಗಳು ರಾಜತಂತ್ರದ ಚಕ್ರವ್ಯೂಹದಲ್ಲಿ ಸಿಲುಕಿ ಎಲ್ಲರು ಎಲ್ಲರಿಗಿಂತಲೂ ಮಿಗಿಲಾಗಬೇಕೆಂಬ ಆಶೆಯಿಂದ ತೊಳಲಾಡುತ್ತಿದ್ದಾರೆ. ರಷ್ಯವು ಜರ್ಮನಿಗೆ ಬೆಂಬಲದ ಒಂದು ಕೈಯ್ಯನ್ನು ಕೊಟ್ಟಿದ್ದರೆ ಇನ್ನೊಂದು ಕೈಯ್ಯಿಂದ ತನ್ನ ಸ್ವಾರ್ಥವನ್ನು ಸಾಧಿಸುತ್ತಿದೆ. ಬ್ರಿಟನು ಸಿಕ್ಕಸಿಕ್ಕವರನ್ನೆಲ್ಲಾ ಒಲಿಸಿ, ಬದುಕಿ ಬಾಳಬೇಕೆಂಬ ಆಶೆಯಿಂದ ಏನನ್ನೂ ಮಾಡಲು ಸಿದ್ಧವಾಗಿದೆ. ಅಮೇರಿಕವು ಹಣದ ಪೆಟ್ಟಿಗೆ ಮಾರುವ ವ್ಯಾಪಾರಿಯ ಧೋರಣೆಯನ್ನನುಸರಿಸಿದೆ. ಟರ್ಕಿಯು ಗಾಳಿ ಯಾವ ಕಡೆಗೆ ಬೀಸುತ್ತಿದೆಯೆಂದು ಬಹು ಜಾಗ್ರತೆಯಿಂದ ನಿರೀಕ್ಷಿಸುತ್ತಿದೆ. ಮಿಕ್ಕುಳಿದ ರಾಷ್ಟ್ರಗಳು ಅಲ್ಲೊಮ್ಮೆ ಇಲ್ಲೊಮ್ಮೆ, ಅತ್ತೊಮ್ಮೆ ಇತ್ತೊಮ್ಮೆ ಎಂಬಂತೆ ಸುತ್ತಿ ಸುಳಿದು ಬೆಂಡಾಗುತ್ತಿವೆ. ಮುಂದೇನು? ಜರ್ಮನಿ ಸಾಧ್ಯವಾದಷ್ಟುಮಟ್ಟಿಗೆ ಚಕ್ರವ್ಯೂಹದಲ್ಲಿ ಯಶಸ್ವಿಯಾಗಲು ಯತ್ನಿಸುತ್ತಿದೆ. ಜಪಾನು ಬ್ರಿಟನನ್ನು ದೂರ ಪ್ರಾಚ್ಯ ಪ್ರದೇಶಗಳಲ್ಲಿ ವಿರೋಧಿಸಿದರೆ, ರಷ್ಯವು ಜರ್ಮನಿಯನ್ನು ಒಂದು ಕೈಯ್ಯಿಂದೆತ್ತಿ ಹಿಡಿದು ಬ್ರಿಟನನ್ನು ನಗು ಮುಖದಿಂದ ನೋಡುತ್ತಾ ಬಂದರೆ, ಟರ್ಕಿ ತಾಟಸ್ಥ್ಯವನ್ನು ಚಾಚೂ ತಪ್ಪದೆ ಪಾಲಿಸಿದರೆ, ಬ್ರಿಟನು ಅಮೇರಿಕದ ಬೆಂಬಲವು ಸಿಗಬಹುದೆಂಬ ಸವಿಯಾಸೆಯಿಂದ ಏಕಾಂಗಿಯಾಗಿ ಹೋರಾಡಬೇಕಾಗುತ್ತದೋ ಎಂಬಂತಿದೆ— ಚಕ್ರವ್ಯೂಹದೊಳಗಿನ ಪರಿಸ್ಥಿತಿ! ಅಭಿಮನ್ಯುವಿನಂತೆ ಬ್ರಿಟನು ಚಕ್ರವ್ಯೂಹದಲ್ಲಿ ಹೋರಾಡುತ್ತಿದೆ. ಒಂದೆರಡು ವಾರಗಳಲ್ಲಿ ಪರಿಸ್ಥಿತಿ ಹೇಗಿದೆಯೆಂದು ಜಗತ್ತಿಗೆ ಸ್ಪಷ್ಟವಾಗಿ ತಿಳಿಯಲಿದೆ. ಆದರೆ ಜಪಾನು ಒಂದೇ ಸವನೆ ನಾಝೀ ಆರಾಧನೆಯನ್ನು ಮಾಡತೊಡಗಿರುವುದರಿಂದ ಬಡ ಭಾರತಕ್ಕೆ ಆದರಿಂದಾಗಿ ಯಾವ ಅನ್ಯಾಯವಾಗಲಿದೆಯೆಂದು ಈಗ ಹೇಳುವುದು ಪ್ರಯಾಸವಾಗಿದೆ.

# "ಅಹಿಂಸೆ ಒತ್ತಟ್ಟಿಗಿರಲಿ- ನಾವು ಪ್ರವೇಶಿಸುತ್ತೇವೆ"



"ಹಿಂಸೆಯಿಂದ ಹಿಂಸೆಯನ್ನು ತಡೆಯಲಾಗುವದಿಲ್ಲವೆಂದು ಜನರಿಗೆ ತಿಳಿದಿದ್ದರೂ ಹಿಂಸೆಯಲ್ಲವರಿಗೆ ಪೂರ್ಣ ವಿಶ್ವಾಸವಿದೆ"ಯೆನ್ನುವ

**ರಾಷ್ಟ್ರಪತಿ ಅಜಾದ್**

## ಒಂದೆಡೆಯಲ್ಲಿ ಹಿಂಸೆ—ಮತ್ತೊಂದೆಡೆಯಲ್ಲಿ ಅಹಿಂಸೆ.


### ಕಾಂಗ್ರೆಸಿನ ಅನುಕೂಲ ಶಾಸ್ತ್ರದ ವೈಶಿಷ್ಟ್ಯ

ಬಾಹ್ಯ ಮತ್ತು ಆಂತರಿಕ ದಬ್ಬಾಳಿಕೆಗಳನ್ನು ಇದಿರಿಸಲು ಅಹಿಂಸಾ ತತ್ತ್ವದಿಂದ ಸಾಧ್ಯವಿಲ್ಲವೆಂದು ಕಾಂಗ್ರೆಸ್ ಒಪ್ಪಿಕೊಳ್ಳುವುದಿದ್ದರೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆ ತತ್ತ್ವವೇ ಅತ್ಯುಚ್ಚವಾದುದೆಂದು ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯವರು ಹೇಳಿ ಭಾರತದಲ್ಲಿ ವಿಲಕ್ಷಣ ಪರಿಸ್ಥಿತಿಯೊಂದನ್ನು ತಂದೊಡ್ಡಿದ್ದಾರೆ.

ಇದಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು ಹಿಂಸೆಯಿಂದ ಹಿಂಸೆಯನ್ನು ತಡೆಯಲು ಸಾಧ್ಯವಿಲ್ಲವೆಂಬುದಕ್ಕೆ ಇಂದಿನ ಯುರೋಪೇ ಸಾಕ್ಷಿಯೆಂದು ಬೆಟ್ಟುಮಾಡಿ ತೋರಿಸಿ ಹೇಳಿದ್ದಾರೆ. ಶಾಶ್ವತ ಶಾಂತಿಯು ಸ್ಥಾಪನೆಯಾಗಬೇಕಾದರೆ ಎಲ್ಲ ಸಂದರ್ಭಗಳಲ್ಲಿ ಅಹಿಂಸಾತ್ಮಕ ದಾರಿಯನ್ನೇ ಅನುಸರಿಸಬೇಕೆಂದು ಮಹಾತ್ಮರು ಹೇಳಿದ್ದಾರೆ.

ಮೇಲಿನ ವಾದಕ್ಕೆ ಉತ್ತರವಾಗಿ ಮೌಲಾನಾ ಅಬುಲ್ ಕಲಮ್ ಅಜಾದರು-ಯುರೋಪಿನ ಕತೆಯು ನಿಜವಾದರೂ, ಹಿಂಸೆಯಿಂದ ಹಿಂಸೆಯನ್ನು ಅಳಿಸುವುದು ಅವಶ್ಯವಾದರೂ ಜನರಿನ್ನೂ ಅಹಿಂಸೆಯನ್ನು ನಂಬುವ ಪರಿಸ್ಥಿತಿಯಲ್ಲಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಕಾಂಗ್ರೆಸ್‌ಅಧ್ಯಕ್ಷರ ಈ ಮಾತಿನಿಂದ ಸ್ಪಷ್ಟವಾಗುವ ಅಂಶವೆಂದರೆ ಮಾನವ ಜಾತಿಯು ಈ ದುರ್ಬುದ್ಧಿಯ ಪರಿಣಾಮವಾಗಿ ರಾಷ್ಟ್ರವು ಸ್ವತಂತ್ರವಾದರೆ ಸ್ವರಕ್ಷಣೆಗೆ ಹಾನಿಕರವಾಗಿರುವ ಆಂತರಿಕ ಮತ್ತು ಬಾಹ್ಯ ದಬ್ಬಾಳಿಕೆಗಳನ್ನು ಇದಿರಿಸಲು ಹಿಂಸೆಯೇ ತನ್ನ ಧೋರಣೆಯೆಂದು ಒಪ್ಪಿರುವುದು. ರಾಷ್ಟ್ರಪತಿ ಅಜಾದರು ಈ ವಿಷಯವನ್ನು ಮತ್ತಷ್ಟು ವಿವರಿಸುತ್ತಾ 'ಗಾಂಧಿಜಿಯವರು ಜಗತ್ತಿಗೆ ಶಾಂತಿಸಂದೇಶವನ್ನೀಯುವ ಪ್ರವಾದಿ. ಆದರೆ ಕಾಂಗ್ರೆಸು ಭಾರತೀಯ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕಾಗಿ ಹೆಣಗಾಡುತ್ತಿರುವಸಂಸ್ಥೆ' ಯೆಂದು ಹೇಳಿದ್ದಾರೆ.



ಕಾಂಗ್ರೆಸ್ ಕೇಳಿಕೆಗಳನ್ನು ಬ್ರಿಟಿಷರು ಮನ್ನಿಸುವುದೂ ನಿಶ್ಚಯ; ನಾವು ಮಂತ್ರಿ ಮಂಡಲಗಳನ್ನು ಪ್ರವೇಶಿಸುವುದೂ ಖಂಡಿತವೆಂದು ಭಾವಿಸುವ

**ರಾಜಾಜಿ**

## ನಟನೆ!

ರಾಷ್ಟ್ರಪತಿ ಅಜಾದರು ತಾವನ್ನುವುದನ್ನು ದ್ರಾವಿಡ ಪ್ರಾಣಾಯಾಮದಂತೆ ಹೇಳಿದ್ದಾರೆ. ಜನರು ಹಿಂಸೆಯ ದಾರಿಯನ್ನು ಬಿಡದಿರುವುದೇಕೆಂದರೆ ಉತ್ತಮ ಯುದ್ಧ ಸಾಧನಗಳು ಅಧಿಕ ಸಂಖ್ಯೆಯಲ್ಲಿದ್ದರೆ ವೈರಿಗಳನ್ನು ಸದೆಬಡಿಯಬಹುದೆಂಬ ವಿಶ್ವಾಸದಿಂದ. ಆದರೆ ವರ್ಕಿಂಗ್ ಕಮಿಟಿಯವರು ಹಿಂಸೆಯ ದಾರಿಯನ್ನು ಸಮರ್ಥಿಸಿರುವುದು ಈ ತರದ ವಿಶ್ವಾಸದಿಂದಲ್ಲ; ಪರಂತು "ಜನರು ಅಹಿಂಸಾತ್ಮಕ ದಾರಿಯನ್ನು ಅನುಸರಿಸಲು ತಯಾರಾಗಿಲ್ಲದಿರುವುದರಿಂದ". ಇದೀಗ ಯಾರಿಗೂ ಅರ್ಥವಾಗದ ರೀತಿಯಲ್ಲಾಡುವ ಮಾತುಗಳು. ಗಾಂಧಿಜಿಯವರ ತತ್ವಗಳಿಗೆ ನಾವು ಸೊಪ್ಪು ಹಾಕುವುದಿಲ್ಲವೆಂದು ಹೇಳಲಿಚ್ಛೆಯಿಲ್ಲದೆ ಕಾಂಗ್ರೆಸ್ ಅಧ್ಯಕ್ಷರು ಈ ರೀತಿ ಹೇಳಿರುವುದಾಗಿದೆ. ಸ್ಪಷ್ಟವಾಗಿ ಹೇಳುವುದಿದ್ದರೆ ಕಾಂಗ್ರೆಸಿಗೆ ಮಹಾತ್ಮಜಿಯವರ ಅಹಿಂಸಾ ದಾರಿಯು ಸರಿಬೀಳುವುದಿಲ್ಲ. ಆದುದರಿಂದ ಅವರು ಢಿಲ್ಲಿಯ ಠರಾವಿನ ಸಹಾಯದಿಂದ ಆ ತತ್ತ್ವವನ್ನು ಸಮಾಧಿಯಲ್ಲೊರಗಿಸಿದ್ದಾರೆ.

ಸರಿ. ಕಾಂಗ್ರೆಸು ಲೋಕಶಾಂತಿಯ ಸ್ಥಾಪನೆಗೆ ಹೆಣಗಾಡುವ ಸಂಸ್ಥೆಯಲ್ಲ; ಆದರೆ ಭಾರತ ಸ್ವಾತಂತ್ರ್ಯವನ್ನು ಪಡೆಯಲಿಕ್ಕಾಗಿ ಯತ್ನಿಸುವ ಸಂಸ್ಥೆಯೆಂದು ಅಜಾದರು ಎಲ್ಲರೂ ಮರೆಯದಂತೆ ಹೇಳಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮವಿರಬೇಕಾದರೆ ಅದರ ಸಂಪಾದನೆಗೆ ತೊಡಕನ್ನುಂಟುಮಾಡುವ ಒಂದು ಪಕ್ಷವಿರಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕು. ಅಂತರಿಕ-ಬಾಹ್ಯ ದಬ್ಬಾಳಿಕೆಗಳನ್ನು ಇದಿರಿಸಲು ಹಿಂಸೆಯ ದಾರಿಯು ಆಗಬಹುದಾಗಿದ್ದರೆ ಸ್ವಾತಂತ್ರ್ಯ ಸಾಧನೆಗೂ ಅದೇ ದಾರಿಯನ್ನು ಉಪಯೋಗಿಸಿಕೊಳ್ಳಬಾರದೇಕೆ? ಇದಕ್ಕೆ ಕಾಂಗ್ರೆಸ್ ತಯಾರಿಲ್ಲ. ಸ್ವಾತಂತ್ರ್ಯ ಚಳವಳಕ್ಕೆ ಅಹಿಂಸೆಯೇ ನಮ್ಮ ದಾರಿಯಾಗಿರಬೇಕು. ಎ. ಐ. ಸಿ. ಸಿ. ಯ ಈ ನಿರ್ಧಾರದಲ್ಲಿ ಜಾಣ್ಮೆಯಿದೆಯೆನ್ನಿ. ಆದರೆ ಈ ತತ್ತ್ವವನ್ನು ಕಾಂಗ್ರೆಸ್ ಮನ್ನಿಸಿರುವುದು ಬೇರಾವ ಉದಾತ್ತ ಧೋರಣೆಯಿಂದಲ್ಲ; ಅನುಕೂಲ ಶಾಸ್ತ್ರಕ್ಕಾಗಿ! ಇಲ್ಲಿ ಕೂಡಾ ಗಾಂಧಿಜಿಯವರ ಧೋರಣೆಯಿಂದ ಕಾಂಗ್ರೆಸು ಬಹುದೂರ ಸರಿದಿದೆ.



ಅನುಕೂಲ ಶಾಸ್ತ್ರವನ್ನು ಚರಿಸುವ ಕಾಂಗ್ರೆಸಿನಿಂದ ದೂರವಾದ ಶುದ್ಧ ಗಾಂಧಿವಾದಿ
**ಗಫಾರ್ ಖಾನರು**


## ಸಮಸ್ಯೆ!

ಮೇಲಿನ ವಿಷಯಗಳಂತಿರಲಿ. ಭಾರತವು ಸ್ವತಂತ್ರವಾದ ಬಳಿಕ ವಿದೇಶೀಯ ದಬ್ಬಾಳಿಕೆಗಾರರನ್ನು ಹಿಂಸಾತ್ಮಕ ದಾರಿಯಿಂದ ವಿರೋಧಿಸುವುದಾಗಿದ್ದರೆ ಈಗಲೇ ಕಾಂಗ್ರೆಸು ತನ್ನ ಎಂದಿನ ಧೋರಣೆಯಲ್ಲಿ ಬದಲಾವಣೆಗಳನ್ನು ಮಾಡಿದ್ದೇಕೆ? ಭಾರತವು ಕೂಡಲೇ ಸ್ವಾತಂತ್ರ್ಯವನ್ನು ಪಡೆಯುವುದೆಂಬ ಆಶೆಯು ಕಾಂಗ್ರೆಸ್ ಮುತ್ಸದ್ದಿಗಳ ಅಭಿಪ್ರಾಯದಲ್ಲಿ ಬದಲಾವಣೆಗಳನ್ನು ತಂದೊಡ್ಡಿತೆ? ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಪಡೆಯಬೇಕಾದರೆ ಶ್ರೀ. ರಾಜಗೋಪಾಲಾಚಾರ್ಯರವರನ್ನು ಕೇಳಬೇಕು. ಅವರ ಅಭಿಪ್ರಾಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸ್ ಕೇಳಿಕೆಯನ್ನು ಮನ್ನಿಸುವುದೊಂದಲ್ಲದೆ ಬೇರಾವ ದಾರಿಯೂ ಇಲ್ಲವಂತೆ. ಇದು ನಿಜವಾಗಿದ್ದರೆ ಕಾಂಗ್ರೆಸ್ ಧುರೀಣರು ಗಾಂಧಿಜಿಯವರಿಂದ ದೂರವಾಗಿ ಬ್ರಿಟಿಷ್ ಸರಕಾರಕ್ಕೆ ಪೂರ್ಣ ಬೆಂಬಲವೀಯಲು ಬದ್ಧಕಂಕಣರಾಗಿದ್ದಾರೆ. ಬ್ರಿಟಿಷರಿಗೆ ಯುದ್ಧದಲ್ಲಿ ಸಹಕಾರವೀಯುವುದಕ್ಕಾಗಿ ಅವರು ಭಾರತಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಒಂದು ಬಹುಮಾನವಾಗಿ ಕೊಡಲಿದ್ದಾರೆ. ಈ ಅಭಿಪ್ರಾಯಕ್ಕೆ ಡಿಲ್ಲಿಯ ಠರಾವೇ ಜೀವಂತ ಸಾಕ್ಷಿಯಾಗಿದೆ. ಮಂತ್ರಿಮಂಡಲಗಳಿಗೆ ಸುಲಭವಾಗಿ ಪ್ರವೇಶಿಸಲು ರಾಜಾಜಿಯವರು ತೋರಿಸಿರುವ ದಾರಿಗಿಂತ ಉತ್ತಮವಾದುದು ಬೇರಾವುದೂ ಇಲ್ಲವೆಂದು ಪಂಡಿತ ಜವಾಹಿರಲಾಲರು ಹೇಳಿರುವುದರಿಂದ ಮದ್ರಾಸಿನ ಧುರೀಣರಿಗೆ ಬಹಳ ಸಿಟ್ಟಾಗಿದೆಯಂತೆ. ಆದರೆ ಜವಾಹರಲಾಲರು ಹೇಳಿರುವ ಮಾತಿಗೆ ಬೆಂಬಲವೀಯದ ಜನರಾರೂ ಇರಬಹುದೆ?

## ಎರಡು ಪಕ್ಷ

ಮೇಲಿನ ಘಟನೆಗಳ ಪರಿಣಾಮವಾಗಿ ಕಾಂಗ್ರೆಸಿನಲ್ಲಿ ಪ್ರಬಲವಾದ ಎರಡು ಪಕ್ಷಗಳು ತಲೆದೋರುವುದು

(೩೧ನೇ ಪುಟ ನೋಡಿರಿ.)



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ.

## ಮರ್ಕಟ ಬುದ್ಧಿ

"ನಮ್ಮ ಕರ್ನಾಟಕದಲ್ಲಿ ಬಾವಲಿಗಳಂತೆ ಸರ್ವರ ಮನ್ನಣೆಗಾಗಿ ಹೊಡೆದಾಡುವ ಜನರೇ ಹೆಚ್ಚುತ್ತಿದ್ದಾರೆಂದು ಜಯಂತಿಯಲ್ಲಿ ಮಂಗರಾಯನು ಬರೆದಿದ್ದಾನೆ. ಇದಕ್ಕೆ ಕಾರಣವೇನಿರಬಹುದು?" ಕೇಳುತ್ತಾರೆ ಶ್ರೀ. ಕೆ. ವಿ. ಆರ್ (ಧಾರವಾಡ)

ಕೆಲಸಮಾಡಲಿಕ್ಕಾಗಿ ಯಾರಾದರೂ ಮುಂದೆ ಬಂದರೆ ಹಲ್ಲು ಕಿರಿದು ಮಂಗರಾಯನಂತೆ ಮರದಿಂದ ಮರಕ್ಕೆ ಹಾರಾಡಿದರೆ ಬೇರೇನಾದೀತು? ಮಂಗನಿಗೆ ಹೇಗೆ ಒಂದೇ ಬುದ್ಧಿಯಿರುವುದಿಲ್ಲವೊ ಹಾಗೆಯೆ ನಮ್ಮ ಧುರೀಣರಿಗೂ ಕೈಗೊಂಡ ಕಾರ್ಯವನ್ನು ಪೂರೈಸುವ ಬುದ್ಧಿಯಿರುವುದಿಲ್ಲ. ಇರಲಿ, ಡಾರ್ವಿನನ ತತ್ತ್ವವನ್ನು ನೆನಸಿ ಸಮಾಧಾನ ಮಾಡಿಕೊಳ್ಳಿ.

○ ○ ○

## ಬದಲಾವಣೆ

"ನಿಮ್ಮ ಅಂತರಂಗದಲ್ಲಿ ಅನಿರೀಕ್ಷಿತವಾದ ಬದಲಾವಣೆಗಳು ಪ್ರತಿವಾರದಲ್ಲಿಯೂ ಆಗುತ್ತಿರಲು ಕಾರಣವೇನು?" ತಿಳಿಯಲಾಶಿಸುತ್ತಾರೆ ಶ್ರೀ. ಯಂ. ವಿ. ಯಸ್ (ಮಂಗಳೂರು)

ಯುರೋಪಿನ ರಾಜಕೀಯ ಪರಿಸ್ಥಿತಿಯ ಪ್ರಭಾವದಿಂದ.

○ ○ ○

## ಮತ್ತೇನಾಗಬೇಕು?

"ಭಾರತದ ಪರಿಸ್ಥಿತಿಯು ಕಠಿನವಾಗಿಲ್ಲವೆಂದು ಇಂಡಿಯದ ಸೆಕ್ರೆಟರಿ ಆಫ್ ಸ್ಟೇಟರಾದ ಮಿ॥ ಏಮರಿಯವರು ಹೇಳಿದ್ದಾರೆ. ಈಗಿನದಕ್ಕಿಂತಲೂ ಪರಿಸ್ಥಿತಿ ಕಠಿನವಾಗಬೇಕಾದರೆ ಮತ್ತೇನಾಗಬೇಕು" ಅನ್ನುತ್ತಾರೆ ಶ್ರೀ. ಜಿ. ಬಿ. ಬಿ (ಮೈಸೂರು)

ಜಪಾನಿನವರು ಭಾರತಕ್ಕೆ ಬಂದು ಬೋಂಬೆಸೆಯಬೇಕು!

○ ○ ○

## ದೊಡ್ಡ ಸೂಚನೆ

"ಹೆರ್ ಹಿಟ್ಲರನನ್ನು ಯಾರಾದರೂ ಹಿಡಿದು ಮದುವೆಮಾಡಿಬಿಟ್ಟರೆ ಆ ತುಂಟಾಗ್ರಣಿಯು ಈಗಿನಂತೆ ಗೊಂದಲವೆಬ್ಬಿಸುತ್ತಿರಲಿಲ್ಲವಲ್ಲ?" ಸೂಚಿಸುತ್ತಾರೆ. ಶ್ರೀ. ಕೆ. ಯಸ್. ಕೆ (ಬಾಳೆಹೊನ್ನೂರು)

ನೆಪೋಲಿಯನನಿಗೆ ಇಬ್ಬರು ಮಡದಿಯರಿದ್ದರೂ ರಾಷ್ಟ್ರಗಳನ್ನು ನುಂಗುವ ರೋಗ ಅವನನ್ನು ಪೀಡಿಸುತ್ತಿರಲಿಲ್ಲವೆ?

○ ○ ○

## ಗಾಳಿಯ ಕೋಳಿ!

"ನಿಜವಾಗಿ ಹೇಳುವುದಿದ್ದರೆ ಈಗ ಕಾಂಗ್ರೆಸ್ ಸಂಸ್ಥೆಗೆ ಯೋಗ್ಯವಾದ ಧುರೀಣತ್ವವಿಲ್ಲವೆಂಬುದು ಸರಿಯಲ್ಲವೆ? ರಾಜಾಜಿಯವರ ಸಹಕಾರ ಘೋರಣೆಯೂ ಒಂದು ಘೋರಣೆಯೆ?" ಮರುಗುತ್ತಾರೆ ಶ್ರೀ. ಆರ್. ಆರ್. ಯಸ್ (ಕುಂದಾಪುರ)

ಕಾಂಗ್ರೆಸ್ ಧುರೀಣರು ವಾಯುದೇವನಿಗೆ ಶರಣುಹೋಗಿದ್ದಾರೆ!

○ ○ ○

## ಪೂರ್ಣ ಶಾಂತಿ!

"ಮನುಷ್ಯನಿಗೆ ಪೂರ್ಣಶಾಂತಿ ದೊರಕಬೇಕಾದರೇನು ಮಾಡಬೇಕು?" ಪ್ರಶ್ನಿಸುತ್ತಾರೆ ಶ್ರೀ. ಜಿ. ಬಿ (ಮೈಸೂರು) [redacted]

ಕೊನೆಯ ಉಸಿರನ್ನು ಬಿಟ್ಟುಬಿಡಬೇಕು!

○ ○ ○

## ನವೀನ ತತ್ತ್ವ!

"ಎಲ್ಲಾ ಜಾತಿಯವರು ತಂತಮ್ಮ ಜಾತಿಯ ಉದ್ಧಾರಕ್ಕಾಗಿ ಹೋರಾಡಿದರೆ ಸಮಸ್ತರಾಷ್ಟ್ರ ಹಾಗು ಪ್ರಪಂಚದ ಉದ್ಧಾರವಾದೀತಲ್ಲ?" ಹೇಳಲಾಶಿಸುತ್ತಾರೆ ಶ್ರಿ. ಟಿ. ಪಿ. ಕೆ (ಬೆಂಗಳೂರು)

ಜಾತಿಯ ಉದ್ಧಾರಕ್ಕಾಗಿ 'ಹೋರಾಡಿ' ಹೋರಾಟವನ್ನು ಇನ್ನಷ್ಟೂ ಹೆಚ್ಚಿಸಿದರೆ?

○ ○ ○

## ನಡು-ಮಡದಿ

"ಏಕಪತ್ನೀ ಪದ್ಧತಿಯು ಕೆಲವು ದೃಷ್ಟಿಗಳಿಂದ ಒಳ್ಳೆದಾದರೆ ಹಲವು

ದೃಷ್ಟಿಗಳಲ್ಲಿ ಕೆಟ್ಟದು. ಗರ್ಭಧಾರಣೆ ಇವೇ ಮೊದಲಾದ ನೈಸರ್ಗಿಕ ಏರ್ಪಾಡುಗಳ ಕಾಲದಲ್ಲಿ ಪುರುಷರು ಏಕಪತ್ನೀ ವ್ರತವನ್ನು ಮುರಿಯಬೇಕಾಗುತ್ತದಲ್ಲ" ಕೇಳುತ್ತಾರೆ ಶ್ರೀ. ಬಿ. ವಿ. ಆರ್ (ಪಣಂಬೂರು)

ಜಾನುವಾರುಗಳು ಕೂಡಾ ಸಂತಾನೋತ್ಪತ್ತಿಯ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವಾಗ ಮನುಷ್ಯನಿಗೆ ಸಾಧ್ಯವಾಗಲಾರದೆ? ಆಗದಿದ್ದರೆ ಅಂಥವರು ಹಟ್ಟಿಯಲ್ಲಿ ಉಳಕೊಳ್ಳಲಿ; ಹಟ್ಟಿಯಲ್ಲಿ ವಾಸಿಸುವ ಪಶು—ಮಾನವರನ್ನು ಮನೆಗಳಲ್ಲಿರುವಂತೆ ಮಾಡಲಿ!

೦ ೦ ೦

**ನಾಗರಿಕರೆ?**

"ಉದಿತೋದಿತ ಪಟ್ಟಣವಾದ ಉಡುಪಿಯಲ್ಲಿ ವ್ಯಭಿಚಾರವು ದಿನಹೋದಂತೆ ಹೆಚ್ಚುತ್ತಿದೆ. ಸಾವಿರಾರು ಯುವಕರ ಭವಿಷ್ಯವು ಹತೋಟಿಯಲ್ಲಿಡಲಾಗದೆ ಕಾಮಾಗ್ನಿಯಲ್ಲಿ ಸುಟ್ಟು ಭಸ್ಮವಾಗುತ್ತಿದೆ. ನಗರ ಸಭೆಯವರು ವ್ಯಭಿಚಾರೀ ವೃತ್ತಿಯನ್ನು ನಿಲ್ಲಿಸಬೇಕೆಂಬ ನಿಯಮವಿದ್ದರೂ ಉಡುಪಿಯಲ್ಲಿ ಆ ಕಡೆಗೆ ದೃಷ್ಟಿಯನ್ನು ಇತರ ರೀತಿಗಳಲ್ಲಲ್ಲದೆ ನಿಷೇಧ ಬುದ್ಧಿಯಿಂದ ಹಾಕುವವರೇ ಇಲ್ಲವಲ್ಲ! ನಮ್ಮ ನಗರ ಪಿತಾಮಹರು ಜನರ ಪ್ರಾತಿನಿಧ್ಯವನ್ನು ವಹಿಸಿ ಈ ಪ್ರಾಮುಖ್ಯ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಳದಿರುವುದು ಅತ್ಯಂತ ಶೋಚನೀಯವಲ್ಲವೆ?" ಕೇಳುತ್ತಾರೆ ಶ್ರೀ. ಯಲ್. ಎಸ್. ಆರ್ (ಉಡುಪಿ)

ಜನರಿಗೆ ಯಾವುದರಲ್ಲಿ ಪ್ರಿಯವೋ ಅದನ್ನು ಅಧಿಕ ಪ್ರಮಾಣದಲ್ಲಿ ಒದಗಿಸಿ ಕೊಡುವುದು ನೈಜ ಪ್ರತಿನಿಧಿಗಳ ಧರ್ಮ. ಆ ಧರ್ಮಕ್ಕನುಸಾರವಾಗಿ ನಿಮ್ಮ ಪ್ರತಿನಿಧಿಗಳು ನಿಮ್ಮ ಆನಂದವನ್ನು ಹೆಚ್ಚಿಸುವುದಕ್ಕಾಗಿ ಅನುಕೂಲ ವಾತಾವರಣವನ್ನು ಒದಗಿಸುತ್ತಿರಬೇಕು. ಗೌರವ ನಾಚಿಕೆಗಳಿಗೆ ಅರ್ಥವನ್ನು ಕಲ್ಪಿಸುವವರು ನಾವೇ. ಆದುದರಿಂದ ಇತರ ನಾಗರಿಕರಿಗೆ ನೀವು ಹೇಳಿರುವ ವಿಷಯವು ಲಜ್ಜಾವಹವಾದರೂ ನಿಮ್ಮವರಿಗೆ ಗೌರವದ ವಿಷಯ. ಮೆಚ್ಚಿದವನಿಗೆ ಮಸಣ ಸುಖವಲ್ಲವೆ?

**ನಾಟಕ**

"ನಮ್ಮ ಧುರೀಣರೆನ್ನಿಸಿಕೊಳ್ಳುವವರು ಹೊರಗೆ ಸಂಭಾವಿತರಂತೆ ನಟಿಸಿ ಗುಟ್ಟಿನಲ್ಲಿ ಅತ್ಯಂತ ಹೇಯವಾದ ಚಟುವಟಿಕೆಗಳನ್ನು ನಡೆಸುತ್ತಿರುವುದೇ ತಕ್ಕೆ? ತಮ್ಮ ನಿಜಬುದ್ಧಿಯನ್ನು ಇದ್ದಂತೆ ತೋರಿಸುವುದೊಂದು ಭೂಷಣವಲ್ಲವೇ?" ಬರೆಯುತ್ತಾರೆ ಮಿ| ಎ. ವಿ. ಆರ್ (ಕಾಸರಗೋಡು)

ಜಗತ್ತೆಂಬುದು ರಂಗಭೂಮಿ, ಮಾನವರೆಲ್ಲ ಅಭಿನಯಕಾರರೆಂದು ಯಾರೋ ಒಬ್ಬ ದುರಾತ್ಮ ಹೇಳಿರುವುದನ್ನು ಕೇಳಿ ನಮ್ಮ ಜನರು ಆ ಮಾತಿನಂತೆ ಅಕ್ಷರಶಃ ನಡೆಯಲು ಪ್ರಯತ್ನಿಸುತ್ತಾರೆ.

೦ ೦ ೦

**ದೊಡ್ಡ ಪೆಟ್ಟು!**

"ಬೇಸರವಾದಾಗ ನಾನು ಮೊದಲು ಸಿಗರೇಟೇ ಸೇದುತ್ತಿದ್ದೆ. ಯುದ್ಧದಿಂದ ಈಗ ಅವುಗಳ ಕ್ರಯವು ಹೆಚ್ಚಿದೆ. ಇನ್ನು ನಿಮಗೆ ಬರೆಯುವುದೊಂದೇ ದಾರಿ." ಕಣ್ಣೀರಿಡುತ್ತಾರೆ ಶ್ರೀ. ಯಂ. ವಿ. ಆರ್. ಪಿ (ಮೈಸೂರು)

ನಮ್ಮ ಕ್ರಯವೂ (ಅಂತರಂಗದ) ಹೆಚ್ಚದಿರುವುದು ನಿಮ್ಮ ಭಾಗ್ಯವಲ್ಲವೆ?

೦ ೦ ೦

**ನಿರ್ಧಾರ!**

"ನಮ್ಮ ಕಾಲೇಜಿನ ಕೆಲವು ವಿದ್ಯಾರ್ಥಿಗಳು ವೈಯ್ಯಾರದ ಮುದ್ದೆಗಳಂತಿರುವ ವಿದ್ಯಾರ್ಥಿನಿಯರಿಲ್ಲದ ಊರಿಗೆ ಹೋಗುವ ನಿರ್ಧಾರ ಮಾಡಿದ್ದಾರೆ. ಹೇಗವರ ಉಪಾಯ ಯಶಸ್ವಿಯಾಗಬಹುದೆ?" ಬರೆಯುತ್ತಾರೆ ಶ್ರೀ. ಬಿ. ಪಿ. ಡಿ (ಬೆಂಗಳೂರು)

ಹೊರಟು ಹೋಗುವಾಗ ಅವರ ಮನಸ್ಸನ್ನು ಆ 'ಮುದ್ದೆ'ಗಳಿಗೆ ಮಾರಿ ಹೋಗಲು ಮರೆಯದಿರಲಿ

೦ ೦ ೦

**ಮಹಾ ಉದ್ಯಮ**

"ಜಗತ್ತಿನಲ್ಲಿ ಪತ್ರಿಕೋದ್ಯಮಿಯಾಗುವುದಕ್ಕಿಂತ ಮಹತ್ವದ ಉದ್ಯಮ ಬೇರಾವುದೂ ಇಲ್ಲವೆಂದು ನನ್ನೆಣಿಕೆ. ಸರಿಯೆ?" ಕೇಳುತ್ತಾರೆ ಶ್ರೀ. ವೈ. ಯನ್. ಜಿ (ಶಿವಮೊಗ್ಗ)

ಹೌದು. ಭಿಕ್ಷಾಟನೆಯನ್ನುಳಿದರೆ ಪತ್ರಿಕೋದ್ಯಮಕ್ಕೇನೇ ಅಗ್ರಸ್ಥಾನ.

೦ ೦ ೦

**"ಬಾಕಿಸ್ತಾನ"**

"ಮಿ| ಜಿನ್ನಾಸಾಹೇಬರು ಮುಸಲ್ಮಾನರಿಗಾಗಿ ಪಾಕಿಸ್ತಾನವನ್ನು ಮಾಡಲಿದ್ದಾರೆ. ಸಾಲಗಾರರನ್ನು ಸಾಲಿಗರು ಬಂದು ಪ್ರತಿ ನಿಮಿಷವೂ ಉಪದ್ರವಿಸುತ್ತಿರುವುದರಿಂದ ಸಾಲ ಬಾಕಿ ಉಳಿದವರಿಗಾಗಿ ಒಂದು "ಬಾಕಿಸ್ತಾನ"ವನ್ನು ಏರ್ಪಡಿಸಿ ಅಲ್ಲಿಯ ಪ್ರಜೆಗಳೊಡನೆ ಯಾರಿಗೂ ಸಾಲಕೇಳಲು ಹಕ್ಕಿಲ್ಲವೆಂದು ಮಾಡಿದರೆ ತುಂಬಾ ಪ್ರಯೋಜನವಾಗುತ್ತಿತ್ತು. ಇದಕ್ಕೆ ಭಾರತದ ೩೬೦ ಮಿಲಿಯ ಜನರ ಪೈಕಿ ೩೫೦ ಜನರು ಬೆಂಬಲವಿತ್ತು "ಬಾಕಿಸ್ತಾನಕೀ ಜೈ" ಎನ್ನುವರಲ್ಲ?" ಮೇಧಾವಿಗಳಾದ ಎಂ. ಆರ್. ಯಸ್ (ಮೈಸೂರು) ಇವರು ಬರೆಯುತ್ತಾರೆ.

ಆದರೆ ಹಣಕೊಟ್ಟವರೆಲ್ಲಾ "ಸಾಲಕೊಟ್ಟವರ ಸ್ತಾನ"ವನ್ನು ಸ್ಥಾಪಿಸಿದರೆ ಘರ್ಷಣೆಯು ತಪ್ಪೀತೆ? ಹಗಲನ್ನು ಮಾಡಿದ ಪರಮಾತ್ಮ ಇರುಳನ್ನು ಮಾಡಿದ್ದಾನಲ್ಲಾ?



ಕಿರುಗತೆ

# ನಾಣಿಯ ಮದುವೆ

ಕತೆಗಾರರು:—
ಶ್ರೀ. 'ಕೆಲಾಕುಮಾರ', ಸಾಗರ

೧

ನಾಣಿಯು ಯಾರನ್ನು ಲಗ್ನವಾಗಬೇಕೆಂದು ಇಷ್ಟಪಡುತ್ತಿದ್ದನೋ ಅವಳು ಪಾದ್ರಿಯ ಮಗಳು. ಪಾದ್ರಿಯು ಫ್ರಾನ್ಸಿನವನು. ಆ ಹುಡುಗಿಯು ಅವರ ರೀತಿಯಂತೆ ಸುಂದರಿಯಾಗಿದ್ದಳು. ಬಿಳಿಯ ಮುಖ, ಉಬ್ಬಿದ ಗುಲಾಬಿ ಕೆನ್ನೆಗಳು. ನೀಲ ನಯನ. ಪಿನ್ ಹಾಕಿ ಕೆದರಿಕೊಂಡಿರುವ ಹೊನ್ನಿನ ಕೇಶರಾಶಿ. ಮೊಣಕಾಲಿನ ವರೆಗೆ ಬಣ್ಣದ ಲಂಗ. ಗುಲಾಬಿ ಬಣ್ಣದ ಮರ್ಸ್ರೈಸಿನ ಕಾಲು ಚೀಲ. ಯೌವ್ವನವು ಆಕೆಯ ಅಂಗಾಂಗಳಲ್ಲಿ ತುಂಬಿಕೊಂಡು ಮೇಲೆದ್ದು ಕಾಣುತ್ತಿತ್ತು. ಅವರಿರುವುದು ನಮ್ಮ ಮನೆಯ ಎದುರಿನ ಬಂಗಲೆಯಲ್ಲಿ. ಬಂಗಲೆ ಸುತ್ತಲೂ ಕಂಪೌಂಡು. ಒಳಗೆ ಉಪವನ. ಪ್ರತಿ ದಿನವೂ ಬೆಳಿಗ್ಯೆ ಪಾದ್ರಿಯು ಬೆಳಗಿನ ಊಟವನ್ನು ತೀರಿಸಿ ಜಗುಲಿಯ ಮೇಲೆ ಚುಂಗಾಣಿಯನ್ನು ಚೀಪುತ್ತ ಪೇಪರು ಓದುತ್ತಿರುತ್ತಾನೆ. ಮಗಳು ತನ್ನ ನಾಯಿಯ ಸಂಗಡ ಹುಲ್ಲಿನ ಮೇಲೆ ಮಾವಿನ ಮರದಡಿ ಆಟವಾಡುತ್ತಾಳೆ. ನಾಣಿಯು ನಿತ್ಯವೂ ನೋಡುತ್ತಿರುತ್ತಾನೆ. ಬೆಳಿಗ್ಗೆ ಅವಳ ದರ್ಶನವಾದರೆ ಅಂದು ಅವನು ಉತ್ಸಾಹಿ, ಇಲ್ಲವೊ ಮುಖವು ಬೆಂದ ಬದನೆಕಾಯಿ.

ನಾಣಿಯು ನಮ್ಮ ನೆರೆಯವನು. ಪ್ರಾಮಾಣಿಕ. ಒಳ್ಳೆಯವನು. ಬಹಳ ಬಡವ. ಅಂಗಡಿಯಲ್ಲಿ ಲೆಖ್ಖ ಬರೆದು, ಬಂದ ಹದಿನೈದು ರೂಪಾಯಿಯಲ್ಲಿ ಜೀವನ. ಮನೆಯಲ್ಲಿ ಮುದಿ ತಾಯಿ ಹೊರತಾಗಿ ಬೇರೆ ಯಾರೂ ಇಲ್ಲ. ಅವಳು ಮಗನ ಸಂಗಡ, "ನಾನು ಕಣ್ಣು ಮುಚ್ಚುವುದರೊಳಗಾಗಿ ಮನೆಗೊಬ್ಬ ಸೊಸೆಯನ್ನು ಕರೆತಾರೊ. ನೋಡಿ ಸಾಯುತ್ತೇನೆ," ಎನ್ನುತ್ತಾಳೆ. ಇವನು ನಿತ್ಯವೂ ಕೇಳುತ್ತಾನೆ. ಅಷ್ಟೆ! ಆರಿಸಿ, ನೋಡಿ ಹುಡುಕಿ ತಂದುಕೊಳ್ಳಬೇಕೆಂಬುದು ನಾಣಿಯ ಇಷ್ಟವಂತೆ! ಹೆಣ್ಣುಗಳಿರಲಿಲ್ಲವೆಂದಲ್ಲ. ಅವನ ಸೋದರತ್ತೆಯ ಮಗಳು ರತ್ನ—ರತ್ನದಂಥ ಹುಡುಗಿ. ಜಾಣೆ. ಸುರೂಪಿ. ಪಟ್ಟಣಕ್ಕೆ ಕರೆತಂದು ಉದ್ದ ಸೀರೆ ಉಡಿಸಿ ಜಾಕೆಟ್, ಗಿಕೇಟ್ ಹಾಕಿದರೆ ಇನ್ನೂ ಸುಂದರಿಯಾದಾಳು! ಅವಳಿಗೆ ನಾಣಿಯಲ್ಲಿ ಪ್ರೇಮ ಬಹಳ. ಆದರೆ ನಾಣಿ......ಇನ್ನೂ ಚೆನ್ನಾದ ಹೆಣ್ಣು ಸಿಗುತ್ತೋ ಏನೋ? ಸಿಕ್ಕಿದರೆ ಒಳ್ಳೆಯದೇ ಆಯಿತು, ಎಂತ ರತ್ನಳನ್ನು ಉದಾಸೀನಮಾಡಿದ್ದ.

೨

ಒಂದು ದಿನ ಕಾಫಿ ತೀರಿಸಿ ಕಟ್ಟೆಯ ಮೇಲೆ ಕುಳಿತಿದ್ದೆ. ನಾಣಿ ಬಂದ. "ಬಾ ನಾಣಿ ಕೂತುಕೊ; ಇದೇನು ಈ ದಿನ ರಜಾನೆ" ಎಂದೆ. "ಹೌದು ನಿನ್ನೆ ಕೆಲಸ ಜಾಸ್ತಿ ಇತ್ತು ಅಂತ ಈ ದಿನ ಸ್ವಲ್ಪ ವಿರಾಮ" ಎಂದ. ಹರಟೆಗೆ ಸುರುವಾಯಿತು. ಆ ಮಾತು ಈ ಮಾತು ಎಲ್ಲಾ ಆಯಿತು. ಯೂರೋಪಿಯನ್ನರ ವಿಚಾರ ಬಂತು. ಆಗ ನಾಣಿ "ನೋಡಿ ಪರಂಗಿಯವರೆಂದರೆ ನಿಜವಾಗಿಯೂ ಮನುಷ್ಯರು ಗಟ್ಟಿಗರು. ಇಲ್ದಿದ್ರ ಇಂಥಾ ದೇಶಾನಾ ಆಳೋಕಾಗ್ತಿತ್ತೆ! ನಮ್ಮೋರೆಲ್ಲಾ ಶುದ್ಧ ಅಪ್ರಯೋಜಕರು. ದಂಡ ನೋಡಿ, ನಮ್ಮ ಆ ಪಾದ್ರಿ ಮಗಳು, ಹೇಗಿದ್ದಾಳೆ. ಆಕೆ ರೂಪೋ! ಆ ಬಣ್ಣವೋ! ಎಂಥಾ ಹುಡುಗಿ. ನಮ್ಮಲ್ಲಾರಿದ್ದಾರ್ರಿ? ಹೀಗೆ. ಮದುವೆಯಾದರೆ ಅಂತಹ ಹುಡುಗೀನ ಮದುವೆಯಾಗಬೇಕು" ಎಂದ. ಮನಸ್ಸಿನಲ್ಲಿ—ಅಯ್ಯೋ ಬೆಪ್ಪೆ, ಎಂದುಕೊಂಡೆ.

"ನಾಣಿ ನಿನಗೆ ಮದುವೆಮಾಡಿಕೊಡುತ್ತಾರೇನೋ ಕೇಳೋ" ಎಂದೆ. ಅವನ ಸಂತೋಷವು ಹೊಟ್ಟೆಯಲ್ಲಿ ಹಿಡಿಸಲಾರದ ಬಾಯಿಯಲ್ಲಿ ಹೊರಹೊಮ್ಮಿತು.

೦ ೦ ೦ ೦

ನಾಣಿಯು ಬಂಗಲೆ ಕಂಪೌಂಡಿನಿಂದ ಬಿಳಿ ನಾಯೊಂದನ್ನು ಹಿಡಿದುಕೊಂಡು ಲಗುಬಗೆಯಿಂದ ಹೊರಟು ಹೊಳೆಯ ಕಡೆ ಹೊರಟದ್ದು ನನ್ನ ಕಣ್ಣಿಗೆ ಬಿತ್ತು. ಹೊರಗೆ ಹೊರಟು ಬಂದು ಕೂಗಿದೆ. ಹಿಂತಿರುಗಿ ಬಂದ ಆಶ್ಚರ್ಯವಾಯಿತು ನನಗೆ.

"ಇದೇನೋ? ಅವಳ ನಾಯಿ! ನಿನ್ನ ಜತೆಯಲ್ಲಿ!!" ಎಂದೆ. "ನಾನು ನಿಮಗೆ ತಿಳಿಸದೆ ಒಂದು ಕೆಲಸಮಾಡಿದೆ."

"ಏನದು, ಆ ಹುಡುಗಿ ಲಗ್ನಮಾಡಿಕೊಂಡೆಯೇನೋ?" ನಾಣಿಯು ಗೇಣುದ್ದ ದೇಹವನ್ನು ಮಾರುದ್ದಮಾಡಿಕೊಂಡು ಹಲ್ಲು ಕಿರಿದ.

"ಅಂಗಡಿ ಕೆಲಸ ಬಿಟ್ಟು ಸಾಹೇಬರಲ್ಲಿ ಕೆಲಸಕ್ಕೆ ಸೇರಿದೆನು."

"ಅದಾವ ಸಾಹೇಬರೊ?"

"ನಮ್ಮ...ನಮ್ಮ...ಪಾ...ಪಾದ್ರಿ ಸಾಹೇಬರು."

"ಸಂಬಳ ಏನು ಕೊಡುತ್ತಾರಂತೆ?"

"ಅಂಗಡಿಯಲ್ಲಿ ಕೊಡುತ್ತಿದ್ದು ದಕ್ಕೂ ಎರಡು ರೂಪಾಯಿ ಕಡಿಮೆ. ಆಮೇಲೆ ಜಾಸ್ತಿಮಾಡ್ತಾರಂತೆ! ಏನೊ ಮನೆಗೆ ಹತ್ತಿರವಾಯ್ತು. ಪರವಾಯಿಲ್ಲ ಎಂತ ಸೇರಿದೆ. ಇದು ನೋಡಿ ಆ ಹುಡುಗಿಯ ನಾಯಿ, ಚೆನ್ನಾಗಿದೆ. ಅವಳೂ ಹಾಗೆ ಚೆನ್ನ. ಆ ಸ್ವರವೊ! ಮುಖವೊ! ನೋಡಿದರೆ ಗ್ಯಾ಼್...ಗ್ಯಾಸ್‌ದೀಪ ಉರಿದಂತೆ ಪ್ರಭೆ!"

"ಅಯ್ಯೋ ಮೂರ್ಖ, ಆ ಪ್ರಭೆಯಲ್ಲಿ ಪತಂಗದಂತೆ ಬಿದ್ದು ಹಾಳಾಗುವೆಯಲ್ಲೋ" ಎಂದುಕೊಂಡೆ.

"ಅದಿರಲಿ, ಅವಳನ್ನ ನಿನಗೆ ಕೊಡುತ್ತಾರಂತೆಯೆ? ಅವರಪ್ಪನ್ನ ಕೇಳಿದೆಯ" ಎಂದೆ.

"ಕೇಳೋದೇನು ಸ್ವಾಮಿ. ಅವಳು ಹೇಳಿದ ಹಾಗೆ ಅವಳಪ್ಪ. ಅವಳಿಗೆ ನನ್ನ ಮೇಲೆ ಬಹಳ ಪ್ರೀತಿ. ದಿನವೂ ಈ ನಾಯಿಯನ್ನು ಹೊಳೆಗೆ ಹೋಗಿ ಮೈತೊಳೆದುಕೊಂಡು ಬಾ ಎಂದು ಹೇಳುತ್ತಾಳೆ. ನಾನೇ ಹೂ ಕೊಯ್ದು ಕೊಡುತ್ತೇನೆ. ಛೆ! ಎಂತಹ ಒಳ್ಳೆ ಹುಡುಗಿ ಸ್ವಾಮಿ! ಇನ್ನು ಹೊತ್ತಾಯ್ತು ಹೊಳೆಗೆ ಹೋಗಬೇಕು" ಎಂದು ಹೊರಟುಹೋದನು. ನನ್ನ ಮನಸ್ಸು ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ಹೊಯ್ದಾಡತೊಡಗಿತು. ಎಂಥವನು ಹೇಗಾದ. ಇವನಿಗೆ ಅವಳು ಅಚ್ಚರಿಸಿ ಇವನು ಅವಳು ಹೇಳಿದ ಹಾಗೆ ಕೇಳಿಕೊಂಡುಬಿದ್ದಿರುವ ಕುನ್ನಿ!"—ನನ್ನ ಕಣ್ಣುಗಳಿಂದ ನನ್ನ ಇಷ್ಟವಿಲ್ಲದೆಯೆ ಎರಡು ತೊಟ್ಟು ನೀರು ಬಿತ್ತು.

೩

ಪಾದ್ರಿಯು ಮತಬೋಧನೆಗೆ ಹೊರಟಾಗಲೆಲ್ಲಾ ಮಗಳನ್ನು ಕರೆದುಕೊಂಡು ಹೋಗುವನು. ನಾಣಿಯು ಪುಸ್ತಕದ ಪೆಟ್ಟಿಗೆಯನ್ನು ಹೊತ್ತುಕೊಂಡು ಹಿಂದೆಯೇ ಹೋಗುತ್ತಾನೆ. ಪಾದ್ರಿ ಹೊರಡುವುದು ಜನರ ಬೇಟೆಗಾಗಿ, ಹುಡುಗಿ ಹೊರಡುವುದು ಚಲುವಿನ ಬೇಟೆಗಾಗಿ, ನಾಣಿ ಹುಡುಗಿಯ ಬೇಟೆಗಾಗಿ. ಪಾದ್ರಿಯು ಜನಸಂದಣಿಯಲ್ಲಿ ಉಪದೇಶಮಾಡುತ್ತಾನೆ. ತನ್ನ ಮತವನ್ನು ಹೊಗಳುತ್ತಾನೆ. ಅನ್ಯಮತವನ್ನು ಜರಿಯುತ್ತಾನೆ. ನಾಣಿಯು ಇದನ್ನು ನಿತ್ಯವೂ ಕೇಳುತ್ತಾನೆ. ಹಾಗೆ ಹೀಗೆ ನಾಣಿಯ ವಿಚಾರ ಪಾದ್ರಿಗೆ ಮುಸುಕುಮುಸುಕಾಗಿ ಗೊತ್ತುಹತ್ತಿತು. ಒಂದು ದಿನ ನಾಣಿಯ ಎದುರಿನಲ್ಲೂ ತನ್ನ ಮತದ ಹೆಚ್ಚಳಿಕೆಯನ್ನು ಬಿಚ್ಚಿದ. "ನಿನಗೆ ಹಣ ಕೊಡುತ್ತೇನೆ, ಯೂರೋಪಿಗೆ ಕರೆದುಕೊಂಡುಹೋಗುತ್ತೇನೆ, ಲಗ್ನಮಾಡಿಸುತ್ತೇನೆ, ನಮ್ಮ ಮತ ಹಾಗೆ ಹೀಗೆ" ಎಂದ.

ದ್ರಾಕ್ಷಿಯನ್ನು ಕಂಡ ನರಿಯಂತೆ ನಾಣಿಯ ಬಾಯಿಯಲ್ಲಿ ನೀರೂರಿತು.

"ನಾನು ಅಂಥ ಇಂಥ ಹುಡುಗಿಯನ್ನು ಲಗ್ನವಾಗುವುದಿಲ್ಲ. ನೋಡಿ ನಿಮ್ಮ ಮಗಳಂತಹ ರುಸ್ತುಂ ಹುಡುಗಿಯಾಗಬೇಕು" ಎಂದ ನಾಣಿ.

ಸಂಶಯ ಸಾಗರದ ಅಲೆಗಳಲ್ಲಿ ತೇಲುತ್ತಿದ್ದ ಪಾದ್ರಿಗೆ ಮುಸುಕು ಮುಸುಕಾಗಿ ಕಾಣುತ್ತಿದ್ದ ದಡವು ಸ್ಪಷ್ಟವಾಗಿ ಕಾಣಿಸಿತು.

"ಅದಕ್ಕೇನಯ್ಯ! ನೀನು ನಮ್ಮವನಾಗುವದಾದರೆ ನನ್ನ ಮಗಳನ್ನೆ ಕೊಟ್ಟು ಲಗ್ನಮಾಡುತ್ತೇನೆ" ಎಂದ ಪಾದ್ರಿ.

ಹುಡುಗಿಯ ತುಟಿಯು ನಸುಬಿರಿದು ಅರಳಿ ಮಾಯವಾಯಿತು. ನಾಣಿಯು ಅದರಲ್ಲಿ ಸ್ವರ್ಗಲೋಕವನ್ನೇ ಕಂಡನೆಂದು ಕಾಣುತ್ತೆ. ಎಂತೂ ಕ್ರೈಸ್ತಿಯನನಾಗಲು ಒಪ್ಪಿಕೊಂಡ.

"ಹಾಗಾದರೆ ನಾಳೆ ಚರ್ಚಿಗೆ ಹೋಗೋಣ" ಎಂದ ಪಾದ್ರಿ. ಸಂತೋಷದ ಭರದಲ್ಲಿ ಹೊಕ್ಕೆ ಹೊರಟು ಹೋದನು. ಪಾದ್ರಿಯು Silly fellow ಎಂದು ನಕ್ಕ.

ಹುಡುಗಿಯು Poor fellow ಎಂದಳು. ಮುಖದಲ್ಲಿ ತಂದೆಯಂತೆ ನಗುವಿನ ಕಡಲು ಉಕ್ಕಿಬರುತ್ತಿರಲಿಲ್ಲ. ವಿಷಾದ ಪಶ್ಚಾತ್ತಾಪಗಳು ಕಣ್ಣು ಮೊಗಗಳಲ್ಲಿ ಮೂಡಿದವು.

ನಾನು ಎಷ್ಟೋ ನೀತಿಯನ್ನು ಬೋಧಿಸಿದೆನು. ಅವರೆದೆಲ್ಲಾ ಬೂಟಾಟಿಕೆ. ಅವನೆಲ್ಲಾದರೂ ನಿನಗೆ ಮಗಳ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಅಶ್ವಗಂಧಾಪಾಕ (ಕಾಫಿ, ಟೀಗಳಿಗೆ ಬದಲಾಗಿ ಉಪಯೋಗಿಸಬಹುದು.)

ಪ್ರಾತಃಕಾಲದಲ್ಲಿ ಹಾಲಿನಲ್ಲಿ ಸೇವಿಸುತ್ತಾ ಬಂದರೆ ನರಗಳಿಗೆ ವಿಶೇಷ ಶಕ್ತಿಯೂ, ಧಾತುವೃದ್ಧಿಯೂ ಆಗುತ್ತದೆ. ಕ್ಷೀಣವಾಗಿರುವ ಮಕ್ಕಳಿಗೆ ಹಾಲಿನಲ್ಲಿ ಕೊಡುತ್ತಾ ಬಂದಲ್ಲಿ ಶರೀರ ಪುಷ್ಟಿಯನ್ನುಂಟುಮಾಡುತ್ತದೆ. ಕೆಟಲಾಗು ಕೇಳಿರಿ. ಬೆಲೆ ೬ ಔನ್ಸು ೦—೧೨—೦

ಸದ್ವೈದ್ಯಶಾಲಾ—ನಂಜನಗೂಡು

ಬ್ರಾಂಚು—ರಥಬೀದಿ, ಮಂಗಳೂರು.

ನ್ನು ಕೊಡುವುದುಂಟೆ, ಎಂದೆನು. ಅವ್ಯೊಂದೂ ಅವನ ತಲೆಯಲ್ಲಿ ಹೋಗಲಿಲ್ಲ. ಅವನ ತಾಯಿಯು ಅತ್ತು ಕೇಳಿದಳು. ಬೇಡಿ ಕೇಳಿದಳು. "ಅಯ್ಯೊ! ನಿನ್ನ ಕಡೆಯಿಂದ ಜಾತಿಕ್ಕೈಲಿ ನೀರು ಕುಡಿಯುವ ಹಾಗಾಯ್ತು." ಎಂದು ಹೊರಳಾಡಿದಳು. ಅವಳ ದುಃಖ ನೋಡಿ ನನ್ನೆದೆಯು ಕರಗಿ ನೀರಾಯಿತು. ನೀರಾಗಿ ಉಕ್ಕಿತು, ಉಕ್ಕಿ ಹರಿಯತೊಡಗಿತು. ಆದರೆ ನಾಣಿಯ ಮೊಗದಲ್ಲಿ ದೃಢನಿಶ್ಚಯವು ಒಡೆದು ಕಾಣುತ್ತಿತ್ತು.

ಮರುದಿನ ಚರ್ಚಿನಲ್ಲಿ ಜ್ಞಾನಸ್ನಾನವಾಯಿತು, ನಾಣಿಗೆ. ಇಂದಿನಿಂದ ಅವನು "Mr. Noyes" (ಮಿ। ನಾಯ್ಸ್) ಆದನು.

೪

ಏಳೆಂಟು ದಿನಗಳಾದವು ನಾಣಿಯನ್ನು ಕಾಣದೆ. ಏನೋ ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ನಮ್ಮಾಕೆ ಬಂದು "ಹೊರಗೆ ಯಾರೋ ಬಂದಿದ್ದಾರೆ ಅಂದ್ರೆ" ಎಂದಳು. ಯಾರು ನೋಡೋಣ ಎಂದು ಹೊರಟೆ. ನಾಣಿ!! ಅಲ್ಲ ಅಲ್ಲ ಮಿ। ನಾಯ್ಸ್ ಸಾಹೇಬರು. ಒಳ್ಳೆ ನೇವಿ ಬ್ಲ್ಯೂ ಸೂಟ್. ಗುಲಾಬಿ ರಂಗಿನ ಕರ್ಚೀಫ್. ಈವ್ನಿಂಗ್ ಹ್ಯಾಟ್. ನನಗೆ ಆಶ್ಚರ್ಯವಾಯಿತು. ಗುರುತೇ ಸಿಗಲಿಲ್ಲ.

"ಬನ್ನಿ ಸಾರ್, ಏನು ದಯಮಾಡಿಸಿದ್ದು?"

"ಏನೂ ಇಲ್ಲ, ಈ ದಿನ ಲಗ್ನಗೊತ್ತಿಟ್ಟಿದ್ದಾರೆ. ಅದಕ್ಕಾಗಿ ಈ ಸೂಟು ಹೊಲಿಸಿದ್ದೇನೆ. ಐವತ್ತು ರೂಪಾಯಿ ಬಿತ್ತು. ಉಳಿದ ಬಟ್ಟೆ, ರಿಂಗ್, ಹಣ್ಣು ಇವುಗಳಿಂದ ಐವತ್ತು, ಅಂತು ಒಟ್ಟು ಒಂದು ನೋಟಾಯಿತು. ಅಂಗಡಿಗೆ ಇನ್ನೂ ಸ್ವಲ್ಪ ಕೊಡಬೇಕು. ಬಂಗಲೆಗೆ ಹೋಗಿದ್ದೆ; ಯಾರೂ ಇಲ್ಲ! ಬಟ್ಟೆಬರೆ ಒಂದೂ ಇಲ್ಲ...

"ನಾನು ಮೊದಲೇ ಹೇಳಲಿಲ್ವೇ ಅವರದು ಬೂಟಾಟಿಕೆ" ಎಂತ.

ನಾಣಿಯ ಪ್ರಫುಲ್ಲಿತ ವದನವು ಬಾಡಿ ಕಂದಿಹೋಯಿತು. ಹ್ಯಾಟನ್ನು ತೆಗೆದು ಗಾಳಿಹಾಕಿಕೊಳ್ಳುತ್ತಾ—"ಇಲ್ಲ. ಅಂದ್ರೆ ಬಹುಶಃ ಅವರು ಚರ್ಚಿಗೆ ಹೋಗಿರಬೇಕು ನೋಡುತ್ತೇನೆ" ಎಂದು ಹೊರಟುಹೋದ.

ನಾನಿನ್ನು ಅಲ್ಲಿ ನಿಲ್ಲಲಾಗಲಿಲ್ಲ. ಬಂಗಲೆ ಹತ್ತಿರವಿದ್ದವರನ್ನು ವಿಚಾರಿಸಿದೆ. ಅವರಿಗೆ ಇಲ್ಲಿಂದ ವರ್ಗವಾದುದರಿಂದ ನಿನ್ನೆ ರಾತ್ರಿ 11ಗಂಟೆ ರೈಲಿಗೇ ಹೊರಟುಹೋದರೆಂದು ತಿಳಿದುಬಂದಿತು. ನಾಣಿಯ ಮನೆ ಹಾಳಾಗಿಯೇ ಹೋಯಿತು ಒಂದು ಹೆಣ್ಣಿಗಾಗಿ; ಒಂದು ಹೆಣ್ಣಿಗಾಗಿ ಎಂಥವನು ಹೇಗಾದ! ಮುಂದೆ ಗತಿಯೇನು? ಮನೆಗೆ ಅದು ಹೇಗೆ ಬಂದೆನೋ ತಿಳಿಯೆ. ನಮ್ಮವಳು ಕರೆದ ಮೇಲೆಯೆ ಗೊತ್ತು.

೦ ೦ ೦ ೦

ಕೆಲವು ದಿನಗಳ ನಂತರ ಬೀದಿಯಲ್ಲಿ ಗಲಾಟೆ ಕೇಳಿಬಂತು. ನೋಡೋಣವೆಂದು ಹೊರಕ್ಕೆ ಬಂದೆ. ಹುಡುಗರೆಲ್ಲಾ ಒಬ್ಬ ಹುಚ್ಚನನ್ನ ಗೇಲಿಮಾಡುತ್ತಾ ಬರುತ್ತಿದ್ದರು. ನೋಡಿದೆ. ಮಿ। ನಾಯ್ ಸಾಹೇಬರು! ಚಿಂದಿಯನ್ನುಟ್ಟು ಬೀದಿಯ ಆಗುಳನ್ನು ಆಯುತ್ತ-

ಪಾದ್ರಿಮಗಳು ಮಾದ್ರಿಹುಡುಗಿ
ಎನ್ನ ಮನದ ಚಲುವು ಮೂರ್ತಿ
ಅವಳಿಗಾಗಿ ಕಾಯುವೆ
ಅವಳಿಗಾಗಿ ನೋಯುವೆ.

ಎಂದು ಹಾಡುತ್ತಾ ಕೂಗುತ್ತ ಹೋದನು. ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಈಜಿಭೇರಿನ ಮೇಲೆ ಕುಳಿತುಕೊಂಡೆ.

---

50 ವರ್ಷಗಳಿಂದ ಜಗತ್ಪ್ರಸಿದ್ಧ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನ ಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯವನ್ನು ಧಾರಾಳವಾಗಿ ವೃದ್ಧಿಗೊಳಿಸಿ, ದೇಹಕ್ಕೆ ನೂತನ ಶಕ್ತಿ, ಸ್ಫೂರ್ತಿ ಆನಂದ, ಉತ್ಸಾಹಗಳನ್ನು ಉಂಟುಮಾಡುವುವು

ಡಬ್ಬಿ 1ರ ಕ್ರಯ: ರೂ. 1.

ರಮಣಿವಿಲಾಸಿನಿ ವಟಿಕ

ಕಾಮಶಕ್ತಿ ಹೆಚ್ಚಿ ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ನಿಶ್ಚಿತ ಮತ್ತು ನಿರಪಾಯಕರ ಔಷಧಿ. ಡಬ್ಬಿ 1ರ ಕ್ರಯ: ರೂ. 1

ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರ್, ಮದ್ರಾಸು.

ಬೆಂಗಳೂರು:-ಆರ್ಯನ್ ಮೆಡಿಕಲ್ ಸ್ಟೋರ್ಸ್, 72 ಚಿಕ್ಕಪೇಟೆ.

ಮೈಸೂರು ಏಜೆಂಟರು: ಟಿ ಸಿ. ನಟರಾಜಾ & ಕೊ.

# *Let us Help to Ensure Your Child's Future:*

Whether it is a Boy or a Girl, you have to make provisions for the future either for **Education** or for **Marriage;** that can be easily done by going in for a **Children's Endowment Policy** in the **Canara Mutual**

The Canara Mutual Assurance Co., Ltd.,

UDIPI.

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ. ಕೃಷ್ಣರಾಜ ಒಡೆಯರ್ ಬಹದೂರರವರು ಹೃದ್ರೋಗದಿಂದ ವಿಧಿವಶರಾದರೆಂಬ ಸುದ್ದಿಯನ್ನು ಕೇಳಿ ವಿಷಾದಪಡದವರಾರು?

ಆಗೋಸ್ತು ೩ರಂದು ಮಧ್ಯಾಹ್ನ ಒಂದು ತಾಸಿನ ವರೆಗೆ ಸುಖವಾಗಿ ದಿವಾನರೇ ಮೊದಲಾದ ಅಧಿಕಾರಿಗಳೊಡನೆ ಸಂಭಾಷಣೆ ನಡೆಸುತ್ತಿದ್ದ ಮೈಸೂರಿನ ಪ್ರಭುಗಳು ಹಠಾತ್ತಾಗಿ ಅದೇ ದಿನ ರಾತ್ರಿ ೯ ತಾಸಿಗೆ ಕಾಲಾಧೀನರಾಗುವರೆಂದು ಯಾರು ತಾನೇ ಭಾವಿಸಿದ್ದರು?

ಕುಮಾರಿಯವರನ್ನು ವಿವಾಹವಾದರು. ವಿವಾಹವಾದ ಎರಡು ವರ್ಷಗಳ ಬಳಿಕ ಅವರು ಪಟ್ಟವನ್ನೇರಿದರು

### ವಿದ್ಯಾಭ್ಯಾಸ

ಶ್ರೀ ಕೃಷ್ಣರಾಜೇಂದ್ರ ಒಡೆಯರವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಶ್ರೀ. ಪಿ. ರಾಘವೇಂದ್ರ ರಾವ್ ಮತ್ತು ಸೋಸಲೆ ಅಯ್ಯಾಶಾಸ್ತ್ರಿಗಳವರಿಂದ ಪಡೆದರು. ಈಗಿನ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರು ಮಹಾರಾಜರ ಸಹ ವಿದ್ಯಾರ್ಥಿಯಾಗಿದ್ದರು. ಸರಕಾರವನ್ನು ನಡೆಸುವ ವಿಷಯದಲ್ಲಿ ಅವಶ್ಯವಿರುವ ಶಿಕ್ಷಣ



# ಮೈಸೂರಿನ 'ರಾಜ ಋಷಿ'ಗಳ ಅಕಾಲ ಮರಣ

### ಶ್ರೀ. ಕೃಷ್ಣರಾಜ ಒಡೆಯರ ಸಂಕ್ಷಿಪ್ತ ಜೀವನ ಚರಿತ್ರೆ

ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ., ಜಿ. ಬಿ. ಇ.,ಯವರು ೧೮೮೪ನೆಯ ಇಸವಿ ಜೂನ್ ೪ರಂದು ಜನಿಸಿದರು. ಮಹಾರಾಜ ಚಾಮರಾಜೇಂದ್ರ ಒಡೆಯರವರ ಹಿರಿಯ ಪುತ್ರರಾದಿವರು ಮೈನರರಾಗಿ ೧೮೯೪ನೆ ವರ್ಷ ಡಿಸೆಂಬರ್ ೨೮ರಂದು ಗಾದಿಯನ್ನೇರಿದರು. ಇವರು ಪ್ರಾಯಕ್ಕೆ ಬರುವ ವರೆಗೆ ಇವರ ಜನನಿಯವರಾದ ವಾಣೀ ವಿಲಾಸ ಸನ್ನಿಧಾನ, ಸಿ. ಐ.ಯವರು ಮೈಸೂರನ್ನು ಆಳಿದರು. ಆಗ ಸರ್. ಕೆ. ಶೇಷಾದ್ರಿ ಅಯ್ಯರ್‌ರವರು ದಿವಾನರಾಗಿದ್ದರು. ೧೯೦೦ರಲ್ಲಿ ಶ್ರೀ. ಕೃಷ್ಣ ರಾಜೇಂದ್ರರು ಕಾಥಿಯವಾಡದಲ್ಲಿ ರಾಜ ಕುಮಾರಿ ಪ್ರತಾಪ

ವನ್ನು ತಜ್ಞರಿಂದ ಪಡೆದರು. ಈ ಅಭ್ಯಾಸ ಕಾಲದಲ್ಲಿ ಸ್ವಾರಸ್ಯದ ಘಟನೆಯೊಂದು ನಡೆಯಿತು. ಮಹಾರಾಜರು ನ್ಯಾಯಸ್ಥಾನಗಳಿಗೆ ಹೋಗಿ ನ್ಯಾಯಾಧಿಪತಿಗಳ ಬಳಿಯಲ್ಲಿ ಕುಳಿತು ವ್ಯವಹರಣೆಯ ರೀತಿನೀತಿಗಳನ್ನು ತಿಳಿಯುವ ರೂಢಿಯೂ ಇತ್ತು. ಒಮ್ಮೆ ಒಂದು ವ್ಯವಹರಣೆಯ ಕುರಿತು ಮಹಾರಾಜರು ಮುಂದಾಗಿ ತಮ್ಮ ತೀರ್ಮಾನವನ್ನು ಬರೆದರಂತೆ. ಆ ತೀರ್ಮಾನಕ್ಕೂ ನ್ಯಾಯಾಧೀಶರ ತೀರ್ಮಾನಕ್ಕೂ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಈ ಒಂದು ನಿದರ್ಶನದಿಂದಲೆ ಮಹಾರಾಜರು ಎಷ್ಟು ಸಮರ್ಥರಿದ್ದರೆಂದು ವಿಶದವಾಗುತ್ತದೆ.

### ರಾಜ್ಯಾಡಳಿತೆ

೧೯೦೨ನೆ ಇಸವಿ ಆಗಸ್ಟ್ ತಾರೀಕು ೮ರಂದು ಕೃಷ್ಣರಾಜ ಒಡೆಯರವರು ಆಗಿನ ವೈಸರಾಯರಾಗಿದ್ದ ಲಾರ್ಡ್ ಕರ್ಜನ್‌ರವರಿಂದ ತಮ್ಮ ಸಂಸ್ಥಾನವನ್ನಾಳುವ ಹಕ್ಕನ್ನು ಪಡೆದರು.

ಅವರು ಪಟ್ಟವೇರಿದೊಡನೆಯೆ ಕೌನ್ಸಿಲ್ ಆಫ್ ರೀಜೆನ್ಸಿಯ ಬದಲು ದಿವಾನರೇ ಪ್ರಥಮ ಸದಸ್ಯರಾಗಿರುವ ಒಂದು ಕನ್ಸಲ್ಟೇಟಿವ್ ಕೌನ್ಸಿಲನ್ನು ರಚಿಸಿದರು. ಇದರಿಂದಾಗಿ ಕಾರ್ಯಕಾರೀ ಅಧಿಕಾರವು ಮಹಾರಾಜರ ಕೈಯಲ್ಲೇ ಇರುವಂತಾಯಿತು. ಆ ಕಾಲದಲ್ಲಿ ಮಹಾರಾಜರು ಆಡಳಿತದಲ್ಲಿ

ಪ್ರಶಂಸನೀಯವಾದ ಅಭಿರುಚಿಯನ್ನು ತೋರಿಸಿದರು. ರಾಜರು ಕೇವಲ ಸಹಿ ಹಾಕುವವರೆಂಬ ರೂಢಿಯು ಮಾತಿರುವುದಿದ್ದರೂ ಮೈಸೂರು ಮಹಾರಾಜರು ಹಾಗಿರದೆ ನಿಜವಾಗಿಯೂ ರಾಜ್ಯಾಡಳಿತದಲ್ಲಿ ಪ್ರಮುಖ ಭಾಗವಹಿಸುತ್ತಿದ್ದರು. ೧೯೦೨ರಿಂದ ೧೯೧೨ರ ವರೆಗೆ ಶ್ರೀ ಮನ್ಮಹಾರಾಜರು ಬಹುಮುಖದ ರಾಜಕೀಯ ಸುಧಾರಣೆಗಳನ್ನು ಮಾಡಿದರು. ಸರ್ ಪಿ. ಎನ್. ಕೃಷ್ಣಮೂರ್ತಿಯವರ ಬಳಿಕ ಮಿ| ವಿ. ಪಿ ಮಾಧವ ರಾಯರು ದಿವಾನರಾದರು. ಅವರ ಕಾಲದಲ್ಲಾದ ಪ್ರಾಮುಖ್ಯ ಘಟನೆಯೆಂದರೆ ಲೆಜಿಸ್ಲೇಟಿವ್ ಕೌನ್ಸಿಲಿನ ಸ್ಥಾಪನೆ. ೧೯೦೭ನೆ ಇಸವಿ ಜೂನ್ ೨೨ರಂದು ಸ್ಥಾಪನೆಯಾದ ಈ ಕೌನ್ಸಿಲಿಗೆ ದಿವಾನರೇ ಅಧ್ಯಕ್ಷರಾಗಿದ್ದರು. ಈ ಕೌನ್ಸಿಲಿನಲ್ಲಿ ಹತ್ತಕ್ಕಿಂತ ಕಡಿಮೆಯಾಗದಷ್ಟು ಹದಿನೈದಕ್ಕಿಂತ ಮಿಕ್ಕದಷ್ಟು ಸದಸ್ಯರಿದ್ದರು. ಈ ಸದಸ್ಯರ ಪೈಕಿ ಐದರಲ್ಲಿ ಎರಡಂಶದಷ್ಟು ಮಂದಿ ಅಧಿಕಾರಿ ವರ್ಗಕ್ಕೆ ಸೇರದ ಸದಸ್ಯರಾಗಬೇಕೆಂಬ ನಿಯಮವಿತ್ತು.

**ಸಂಸ್ಥಾನದ ಆರ್ಥಿಕ ಸುಧಾರಣೆ.**

೧೯೧೧ನೆ ಇಸವಿಯಲ್ಲಿ ಶ್ರೀಮನ್ಮಹಾರಾಜರು ತಮ್ಮ ದೃಷ್ಟಿಯನ್ನು ಸಂಸ್ಥಾನದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯೆಡೆಗೆ ಹರಿಸಿದರು. ವಿವಿಧ ದೇಶಗಳ ಜನರ ಸಾಂಪತ್ತಿಕ ಪರಿಸ್ಥಿತಿಯನ್ನು ಮೈಸೂರಿನ ಪ್ರಜೆಗಳೊಡನೆ ಹೋಲಿಸಿ ತಮ್ಮ ಸಂಸ್ಥಾನದಲ್ಲಿನ ದಾರಿದ್ರ್ಯ, ದುಃಸ್ಥಿತಿ ಎಷ್ಟಿದೆಯೆಂದು ಮನಗಂಡು- "ಯಾವ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಅತ್ಯಂತ ಕಡಿಮೆಯಾಗಿರುತ್ತದೋ ಅದೇ ಉತ್ತಮ ದೇಶ. ಎಲ್ಲಾ ಆರ್ಥಿಕ ದೋಷಗಳಿಗೆ ವಿದ್ಯೆಯೇ ಮಹಾ ಔಷಧ"ವೆಂದು ಹೇಳಿದರು.

**ಸರ್. ಯಂ. ವಿಶ್ವೇಶ್ವರಯ್ಯನವರು**

ಶ್ರೀ ಮಾಧವರಾಯರ ಬಳಿಕ ಆನಂದರಾಯರು ದಿವಾನರಾದರು. ಅವರ ಬಳಿಕ ಜಗತ್ಪ್ರಸಿದ್ಧರಾದ ಸರ್. ಯಂ. ವಿಶ್ವೇಶ್ವರಯ್ಯನವರನ್ನು ಮಹಾರಾಜರು ದಿವಾನರಾಗಿ ನೇಮಿಸಿದರು. ೧೯೧೨ ರಿಂದ '೧೮ರ ವರೆಗಿನ ಮೈಸೂರಿನ ಚರಿತ್ರೆಯು ಗಣನೀಯವಾಗಿರುವುದಕ್ಕೆ ಈ ಮಹನೀಯರೇ ಕಾರಣವಾಗಿದ್ದಾರೆ. ಸರ್ ವಿಶ್ವೇಶ್ವರಯ್ಯನವರು ಪ್ರತಿಯೊಂದು ಇಲಾಖೆಯಲ್ಲಿಯೂ ಪ್ರಚಂಡ ಸುಧಾರಣೆಗಳನ್ನು ಜಾರಿಗೆ ತಂದರು. ಸಾಬೂನಿನ


WHEN IN BOMBAY STAY AT

SHARADA BHAVAN

[HIGH CLASS VEGETARIAN BOARDING & LODGING]



Opp. G. I. P. Ry. STATION.

MATUNGA

BOMBAY 19.

OFFERS ALL CONVENIENCES
AMIDST A HOMELY ATMOSPHERE
AT MODERATE TERMS

ಬೊಂಬೈಯಲ್ಲಿ ಶ್ರೇಷ್ಠ ವರ್ಗದ
—ವಸತಿ ಗೃಹ—

ಶಾರದಾ ಭವನ

ಊಟ ವಸತಿಗಳ ಸರ್ವ ಆಧುನಿಕ ಸೌಕರ್ಯಗಳಿಂದ ಕೂಡಿದ ಹೋಟೆಲ್

B. RAGHAVENDRA RAO,
*PROPRIETOR.*

ಕಾರಖಾನೆ, ಗಂಧದ ಫ್ಯಾಕ್ಟರಿ, ಭದ್ರಾವತಿ ಕಬ್ಬಿಣದ ಕೆಲಸ, ಕೃಷ್ಣರಾಜ ಸಾಗರ ಪವರ್ ಮತ್ತು ಇರಿಗೇಶನ್ ಪ್ರಾಜೆಕ್ಟ್- ಇವೇ ಮೊದಲಾದುವುಗಳಿಗೆ ಸರ್ ಯಂ. ವಿಶ್ವೇಶ್ವರಯ್ಯನವರೇ ಜವಾಬ್ದಾರರು. ಇದೇ ಕಾಲದಲ್ಲಿ ಬ್ಯಾಂಕ್ ಆಫ್ ಮೈಸೂರು, ಯುನಿವರ್ಸಿಟಿ ಆಫ್ ಮೈಸೂರು ಮತ್ತು ಮೈಸೂರು ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು. ಸರ್ ವಿಶ್ವೇಶ್ವರಯ್ಯನವರ ಪ್ರಗತಿಪರ ದೃಷ್ಟಿಯಿಂದಾಗಿ ಅವರು ಹಲವು ವಿಧದ ವಿಮರ್ಶೆಗಳಿಗೆ ಪಾತ್ರರಾಗಬೇಕಾದರೂ ಅವರಾನಂತರದ ಘಟನೆಗಳು ಅವರ ಮೇಧಾವಿತ್ವಕ್ಕೆ ಸಾಕ್ಷಿಯಾದುವು.

## ರಾಜಕೀಯ ಸುಧಾರಣೆಗಳು

ವಿಶ್ವೇಶ್ವರಯ್ಯನವರ ಬಳಿಕ ಸರ್ ಎಂ. ಕಾಂತರಾಜ ಅರಸ್ ರವರು ದಿವಾನರಾದರು. ಅವರ ನಂತರ ಸರ್ ಆಲ್ಬಿಯನ್ ಬ್ಯಾನರ್ಜಿ, ಐ.ಸಿ.ಎಸ್. ರವರು ದಿವಾನರಾದರು. ಆ ಕಾಲದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಮಾಂಟ್ ಫರ್ಡ್ ಸುಧಾರಣೆಗಳ ಪ್ರಭಾವವು ಎಲ್ಲೆಲ್ಲೂ ಹಬ್ಬಿತ್ತು. ಸ್ವಾಭಾವಿಕವಾಗಿ ಮೈಸೂರು ಪ್ರಜೆಗಳು ಕೂಡಾ ಜವಾಬ್ದಾರೀ ಸರಕಾರದ ಕೇಳಿಕೆಗಳನ್ನು ಸರಕಾರದ ಮುಂದಿಟ್ಟರು. ಪ್ರಜೆಗಳ ಅಭಿಪ್ರಾಯವನ್ನು ಸದಾ ಗೌರವಿಸುತ್ತಿದ್ದ ಶ್ರೀಮನ್ಮಹಾರಾಜರು ಆಗಿನ ಮೈಸೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಸರ್ ಬ್ರಜೇಂದ್ರನಾಥ ಸೀಲ್ ರವರ ಅಧ್ಯಕ್ಷತೆಯಲ್ಲಿ ರಾಜಕೀಯ ಸುಧಾರಣೆಗಳ ಪ್ರಶ್ನೆಯನ್ನು ಪರಿಶೀಲಿಸಲು ಒಂದು ವಿಚಾರಣಾ ಸಮಿತಿಯ ನೇಮಕಮಾಡಿದರು. ಈ ಸಮಿತಿಯವರ ವರದಿಯ ಪರಿಣಾಮವಾಗಿ ೧೯೨೩ನೆ ಅಕ್ಟೋಬರ ೨೭ರಂದು ಒಂದು ಉದ್ಘೋಷಣೆಯು ಮಾಡಲ್ಪಟ್ಟಿತು. ಅದರಿಂದಾಗಿ ಮತದಾರರಾಗುವ ಹಕ್ಕು ಹೆಚ್ಚಿನವರಿಗೆ ದೊರಕಿತು. ಸ್ತ್ರೀಯರಿಗೆ ಮತದಾನ ಹಕ್ಕು ದೊರಕಿತು, ಮತದಾನ ಕ್ಷೇತ್ರಗಳು ಹೆಚ್ಚಿಸಲ್ಪಟ್ಟುವು. ಚಿಕ್ಕದಾಗಿ ಹೇಳುವುದಿದ್ದರೆ ಮೊದಲು ೨೮,೦೦೦ ಮಂದಿ ಮತದಾರರಿದ್ದರೆ ಈ ಉದ್ಘೋಷಣೆಯಿಂದಾಗಿ ಅವರ ಸಂಖ್ಯೆ ೧,೦೦,೦೦೦ಕ್ಕೇರಿತು. ಪ್ರಜಾಪ್ರತಿನಿಧಿಸಭೆಗೆ ಸ್ವಲ್ಪ ಮಟ್ಟಿನ ಪ್ರಾಮುಖ್ಯತೆ ದೊರಕಿತು. "ನನ್ನ ಸಂಸ್ಥಾನದ ಪ್ರಜೆಗಳು ಎಲ್ಲಾ ಪ್ರಾಗತಿಕ ಚಟುವಟಿಕೆಗಳಲ್ಲಿ ಪ್ರಥಮ ಸ್ಥಾನವನ್ನು ಪಡೆಯಬೇಕೆಂಬುದೇ ನನ್ನ ಮಹತ್ವದ ಆಶೆ"ಯೆಂದು ಮಹಾರಾಜರು ಹೇಳಿದರು.

## ಸರ್. ಮಿರ್ಜಾರವರು

೧೯೨೬ರಲ್ಲಿ ಸರ್. ಮಿರ್ಜಾ ಯಂ. ಇಸ್ಮಾಯಿಲ್ ರವರು ದಿವಾನರಾದರು. ಇವರ ಕಾಲದಲ್ಲಿ ಮೈಸೂರಿನ ಸಾಂಸ್ಕೃತಿಕ, ಔದ್ಯೋಗಿಕ ಮತ್ತು ಸಾರ್ವತ್ರಿಕ ಪ್ರಗತಿ ಹೇಗಾಯಿತೆಂದು ಹೇಳಬೇಕಾಗಿಯೇ ಇಲ್ಲ.

## ಸಂಗೀತಾಭಿಮಾನಿ

ವಿಧಿವಶರಾದ ಮಹಾರಾಜರು ಮಹಾ ಸಂಗೀತಾಭಿಮಾನಿಗಳಾಗಿದ್ದರು. ಕನ್ನಡದಲ್ಲಿ ಅವರಿಗಿದ್ದ ಪ್ರೇಮವು ಅಷ್ಟಿಷ್ಟಲ್ಲ. ಸಂಸ್ಕೃತವೆಂದರೆ ಅವರಿಗೆ ತುಂಬಾ ಪ್ರೇಮ. ತನ್ನ ಪ್ರಜೆಗಳು ಬಂಧು ಭಾವದಿಂದಿರಬೇಕೆಂಬುದು ಅವರ ಮಹತ್ವದ ಆಶೆಯಾಗಿತ್ತು. ದೇವಾಲಯ ಮಸೀದಿ ಮತ್ತು ಇಗರ್ಜಿಗಳಿಗೆ ಅವರ ಏಕ ರೀತಿಯ ಗೌರವವು ಸಲ್ಲುತ್ತಿತ್ತು.

## ಅಪಾರ ನಷ್ಟ.

ಇಂತಹ ಮಹಾರಾಜರ ನಿಧನದಿಂದ ಮೈಸೂರಿಗೆ ಅಪಾರ ನಷ್ಟವಾಗಿದೆ. ಭಾರತವು 'ರಾಜರ್ಷಿ'ಯ ನಷ್ಟಕ್ಕಾಗಿ ಮರುಗುತ್ತಿದೆ. ಕನ್ನಡಾಂಬೆಯು ತನ್ನ ಮಮತೆಯ ನರೇಂದ್ರನ ಅಗಲುವಿಕೆಗಾಗಿ ಕಣ್ಣೀರಿಡುತ್ತಿದ್ದಾಳೆ. ತನ್ನ ೫೭ನೆಯ ವಯಸ್ಸಿನಲ್ಲಿ ವಿಧಿವಶರಾದ ಶ್ರೀ ಕೃಷ್ಣರಾಜ ಒಡೆಯರ ಆತ್ಮಕ್ಕೆ ಚಿರಶಾಂತಿ ದೊರಕಲಿ.


"COLD KILL" (REGD.)

The latest unrivalled and unfailing alopathic remedy to cure colds. Daily use prevents colds and other Respiratory diseases.

**Annas Twele Only.**

THREE POSTAGE FREE.
SAMPLE AS. FOUR

"COLD-KILL" HOUSE
UDIPI, (India.)


**ಗೆಳೆಯರ ತಂಡಕ್ಕೆ ಸದಸ್ಯರಾಗಿ ಪ್ರೋತ್ಸಾಹಿಸಿರಿ.**

# ಮುಂಬಯಿಯ ★ ಪಾಪಕೂಪ!

## 'ವಿದೇಶೀಯ ವೇಶ್ಯೆ'

ಬರೆದವರು:- ಶ್ರೀ. ರಾಜಶೇಖರ. [ಲೇಖಾಂಕ: ಹನ್ನೆರಡು]

ನಾನು ಮುಂಬಯಿಯ ಮುಖ್ಯವಾದ ವೇಶ್ಯಾ ವಸತಿಯನ್ನು ನೋಡಿದ ನಂತರ ವಿದೇಶೀಯ ಮತ್ತು ದೇಶ-ವಿದೇಶೀ ಮಿಶ್ರ ಯಾನೆ ಕ್ರಿಶ್ಚಿಯನ್ ಮತ್ತು ಆಂಗ್ಲೋ-ಇಂಡಿಯಾನರಿರುವ ಸ್ಥಳಗಳನ್ನು ನೋಡಲಿಕ್ಕಾಗಿ ಹೊರಟೆನು.

ತಕ್ಕುಮಟ್ಟಿಗೆ ವಿಶಾಲವಾದ ರಸ್ತೆಯ ಮಗ್ಗುಲಲ್ಲಿ ಜಪಾನೀ ಸ್ತ್ರೀಯರ ಒಂದು ಮನೆಯು ಜನಮನವನ್ನು ಆಕರ್ಷಿಸುವಂತೆ ಸುಂದರವಾಗಿರಿಸಲ್ಪಟ್ಟಿತ್ತು. ಆ ಮನೆಯಲ್ಲಿ ಒಬ್ಬಳು ಮಧ್ಯ ವಯಸ್ಸಿನ ಹೆಂಗಸೂ ಮೂವರು ತರುಣಿಯರೂ ಇದ್ದರು. ತಮ್ಮ ದೇಶದಲ್ಲಿ ಉಡುವ ಬಟ್ಟೆಬರೆಗಳನ್ನೇ ಉಟ್ಟಿದ್ದರು. ಅವರು ಸದ್ಗೃಹಸ್ಥರನ್ನು ಮಾತ್ರ ಸೇರಿಸುತ್ತಿದ್ದರು. ಅವರ ಆ ಉದ್ಯೋಗಕ್ಕೆ ಅವಶ್ಯಬೀಳುವಷ್ಟು ಇಂಗ್ಲೀಷನ್ನೂ, ಹಿಂದಿಯನ್ನೂ ಕಲಿತುಕೊಂಡಿದ್ದರು. "Tea, Smoke, Night, Ten Rupees, Five Rupees. One Time" ಮೊದಲಾದ ಅವರಿಗೆ ಅತ್ಯಾವಶ್ಯಕವಾದ ಇಂಗ್ಲೀಷ್ ಶಬ್ದಗಳನ್ನೂ, "ಆವೊ, ಬೈಠೊ, ಅಚ್ಛಾವಾಲ, ದಸ್ ರುಪಿಯಾ" ಮೊದಲಾದ ಹಿಂದೀ ಶಬ್ದಗಳನ್ನೂ, ಚೆನ್ನಾಗಿ ಮಂದಟ್ಟುಮಾಡಿಕೊಂಡಿದ್ದರು. ಅವರ ಮನೆಯಲ್ಲಿ ದೇಶೀ ಹೆಂಗಸೊಬ್ಬಳು ಕೆಲಸಕ್ಕಿದ್ದದ್ದರಿಂದ ಅವರಿಗೆ ಎಲ್ಲದಕ್ಕೂ ಅನುಕೂಲವಾಗಿತ್ತು.

ಅವರ ಮನೆಗೆ ವಿಟಪುರುಷನು ಹೋದರೆ ಬಹಳ ಆದರ ಸತ್ಕಾರಗಳನ್ನು ಮಾಡುತ್ತಾರೆ. ದೇಶೀ ವೇಶ್ಯೆಯರಂತೆ ದುಡ್ಡು ಕೀಳುವ ಉದ್ಯೋಗವನ್ನೇ ಮುಖ್ಯವಾಗಿಟ್ಟುಕೊಂಡು ಗಿರಾಕಿಯನ್ನು ಅನಾದರಣೆಗೆ ಈಡುಮಾಡುವದಿಲ್ಲ. ಅಲ್ಲಿನ ರೀತಿಗೂ ದೇಶೀ ವೇಶ್ಯಾಗೃಹದ ನೀತಿಗೂ ಅಜಗಜಾಂತರ ವ್ಯತ್ಯಾಸ.

ಮೊದಲು ತಮ್ಮ ದೇಹವನ್ನು ಅರ್ಪಿಸಬೇಕಾಗಿದ್ದ ವಿಟಪುರುಷನ ಆರೋಗ್ಯವು ಚೆನ್ನಾಗಿದೆಯೇ ಎಂದು ಗಮನಿಸುತ್ತಾರೆ. ವಿಷಕ್ರಿಮಿನಾಶಕ ಮಿಶ್ರಣದಿಂದ ಆಗಿಂದಾಗ್ಯೆ ತಮ್ಮ ಅಂಗಾಂಗಗಳನ್ನು ತೊಳೆದುಕೊಳ್ಳುತ್ತಾರಲ್ಲದೆ, ವಿಟಪುರುಷನು ಸಹ ತೊಳೆದ ನಂತರವೇ ಕಾರ್ಯವಾಗಬೇಕಾಗಿದೆ. ವಾರಕ್ಕೊಮ್ಮೆ ಡಾಕ್ಟರರ ಹತ್ತಿರ ಹೋಗಿ ತಕ್ಕ ಔಷಧವನ್ನು ಸೇವಿಸುತ್ತಾರಲ್ಲದೆ, ಅವರ ಶರೀರ ಪ್ರಕೃತಿಯು ಒಡಂಬಟ್ಟಷ್ಟು ಮಾತ್ರ ವಿಟಪುರುಷರನ್ನು ಸೇರಿಸಿಕೊಳ್ಳುತ್ತಾರೆ.

ಇಷ್ಟೆಲ್ಲಾ ಮಾಡುತ್ತಿದ್ದರೂ ಅಲ್ಲಿದ್ದ ಮೂವರು ಜಪಾನೀ ತರುಣಿಯರು, ಅಷ್ಟೇನೂ ಆರೋಗ್ಯವಂತರಾಗಿ ತೋರುತ್ತಿರಲಿಲ್ಲ. ಮೂವರು ಆ ಉದ್ಯೋಗಕ್ಕೆ ಬಹು ಹಳಬರಾಗಿದ್ದಂತೆ ತೋರುತ್ತಿತ್ತಾದರೂ ದುಃಖ ಪರಿತಾಪಗಳೇನೂ ಅವರನ್ನು ಬಿಟ್ಟಿರಲಿಲ್ಲ. ಬಂಧಿಸಲ್ಪಟ್ಟ ಜಿಂಕೆಯ ಮರಿಗಳಂತೆ ದೈನ್ಯದಿಂದ ನೋಡುತ್ತಿದ್ದರೆ, ಅವರ ವಿಷಯವಾಗಿ ಎಂಥವರಿಗೂ ದುಃಖವಾಗಬಹುದು. ಅವರು ಆ ಪಾಪಕೂಪದೊಳಗೆ ಧುಮುಕಿದ ರೀತಿಯನ್ನು ತಿಳಿಯುವ ಕುತೂಹಲವು ನನಗೆ ಬಹಳವಿದ್ದರೂ, ಅವರ ಭಾಷೆಯು ತಿಳಿಯದ್ದರಿಂದ ಸಾಧ್ಯವಾಗಲಿಲ್ಲ. ಆ ಮೂವರಲ್ಲಿ ಎಲ್ಲರಿಗಿಂತ

ಚಿಕ್ಕವಳಾಗಿ
ತೋರುತ್ತಿತ್ತ
ಯರು ಹೇಳ
ರೊಂದು ಕಷ
ದೆಂದು ನಾನು
ವಸತಿಯಲ್ಲಿ
ಮನೋಹರವ
ಸ್ತ್ರೀಯ ಗೃಹ
ಆ ಸ್ಥಳ
ತಿಯ ಅಂದರೆ
ಗೋಚರಿಸಿತು.
ಭಾಗವಾಗಿ ವಿ
ಯೊಂದು ಭಾ
ಚಿಕ್ಕ ಪಡಸ
ನಿರ್ಮಿಸಿದ್ದರು.
ಗಳಲ್ಲಿ ನಾಲ್ಕು
ವರೆಗೆ ವೇಶ್ಯೆಂ
ದ್ದರು. ಕೆಲಸ
ಯರೂ ಕೆಲಸ
ಮಾರಿದವರೂ
ರಾಕಿಗಳನ್ನು
ತ್ತಿದ್ದರು.

ಎಲ್ಲರೂ
ಉಟ್ಟು ಇಂಗ್ಲಿ
ಅವರ ಇಂಗ್ಲೀ
ಹೇಳುವಂತೆ "
ಯಲ್ಲಿದ್ದಿತು. ಅ
ರುಗಳೂ ಬರು
ಹೆಚ್ಚಾಗಿ ದುಃ
ತಿಳಿದಿದ್ದರು. ನಾ
ಒಂದು ಮನೆ
ರನಾದರೋ ಆ
ಲೆಯಲ್ಲೇ ಕು
ನು ನಿತ್ಯದ ಗಿ
ಸಲಿಗೆಯಿಂದ
ಕೂತು ಹರಟೆ

ನಾನು
ಅಡ್ಡಾಡಿದ ನ

ಗೃಹಕ್ಕೆ ಹೋಗಬೇಕೆಂದು ಆಲೋಚಿಸುತ್ತಿದ್ದೆನು. ನನ್ನನ್ನೇ ನಿರೀಕ್ಷಿಸುತ್ತಾ ನಿಂತಿದ್ದ ಒಬ್ಬ ಮನುಷ್ಯನು ನನ್ನ ಹತ್ತಿರ ಬಂದು ನನಗೆ ವಂದಿಸಿ, "ಯಾವ ಮನೆಗೆ ಹೋಗಲು ಆಲೋಚಿಸಿದ್ದಿರಿ?" ಎಂದು ದಿಟ್ಟತನದಿಂದ ಪ್ರಶ್ನಿಸಿದನು. ನನಗೆ ಯಾವ ಮನೆಗೂ ಹೋಗಬೇಕಾಗಿಲ್ಲವೆಂದು ಹೇಳಿದೆನು. ಅವನು ನಸುನಗುತ್ತಾ, "ಏನೂ ಚಿಂತಿಸಬೇಡಿ ರಾಯರೇ! ನೋಡಿ ನಾನು ಹೋಗುವದು, ಆ ಮೂರನೆಯ ಮನೆಗೆ, ಅಲ್ಲಿ ಮೊನ್ನೆ ತಾನೇ ಬಂದ ಕ್ರಿಶ್ಚಿಯನ್ನರ ಎಳೆ ಹುಡುಗಿಯೋರ್ವಳು ಇದ್ದಾಳೆ. ಸ್ವಲ್ಪ ಕಪ್ಪಗಿದ್ದರೂ, ರೋಗ ರುಜಿನ



ಭಯವಿಲ್ಲ!" ಎಂದನು. ಅವನ ಆ ಮಾತಿಗೆ ಆಶ್ಚರ್ಯ ಪಡಬೇಕಾದ್ದೇನೂ ಇರಲಿಲ್ಲ. ಅಂತಹ ಸಂಭಾಷಣೆಗಳು ಸರ್ವಸಾಮಾನ್ಯವಾಗಿ ಆ ಪ್ರಪಂಚದಲ್ಲಿನ ದಿನಚರಿಯ ಮಾತಾಗಿತ್ತು.

ನಾವು ಹೀಗೆ ಅಲ್ಲಿ ನಿಂತಿರಲು ಬಹು ಹೊತ್ತಿನಿಂದ ವೇಶ್ಯೆಯರೊಡನೆ ಮಾತನಾಡುತ್ತಾ ಕುಳಿತಿದ್ದ ಆ ಸೋಲ್ಜರನು ಎದ್ದು ಹೊರಗೆ ಬಂದನು. ಅವನು ನಮ್ಮ ಮುಗ್ಗುಲಿಗಾಗಿ ಹಾದು ಹೋದಾಗ ನನ್ನ ಜೊತೆಯಲ್ಲಿದ್ದ ಮನುಷ್ಯನು ಅವನಿಗೆ ವಂದಿಸಿ "ಚೆನ್ನಾಗಿದ್ದೀರಿ?" ಎಂದು ಕೇಳಿದನು. ಸೋಲ್ಜರನು ಪ್ರತಿ ವಂದಿಸಿ ಹುಸಿನಗೆಯನ್ನು ತೋರ್ಪಡಿಸುತ್ತಾ ಹೋದನು.

ನನ್ನ ಜೊತೆಯಲ್ಲಿದ್ದವನು ಗಿರಾಕಿಗಳನ್ನು ಹಿಡಿಯುವ ಏಜೆಂಟನೆಂಬದನ್ನು ಗೊತ್ತುಮಾಡಿಕೊಳ್ಳಲು ನನಗೆ ಕಷ್ಟವಾಗಲಿಲ್ಲ. ಅವನು "ಚಹ ಸೇವಿಸೋಣವೇ!" ಎಂದು ನನ್ನನ್ನು ಚಹಕ್ಕೆ ಸ್ವಾಗತಿಸಿದನು ನಾನು ನಿರಾಕರಿಸಿದ ಮೇಲೆ ಒಂದು ಸಿಗರೇಟನ್ನು ಕೊಟ್ಟೆನು. ಅವನು ಸಿಗರೇಟು ಹಚ್ಚಿಕೊಳ್ಳುತ್ತಾ ಹೇಳಿದನು "ನೀವು ಬಹಳ ಸಂಕೋಚಪಡುವ ಹಾಗೆ ಕಾಣುತ್ತದೆ. ನೀವು ಇಷ್ಟಪಡುವುದಾದರೆ ನಾನೇ ಆ ಹುಡುಗಿಯೊಡನೆ ನಿಮ್ಮನ್ನು ಸೇರಿಸಿಬಿಡುತ್ತೇನೆ. ಕೇವಲ ಸ್ನೇಹಾಚಾರಕ್ಕಾಗಿ, ಅಂದನು." ಅವನ ಅಭಿಪ್ರಾಯಕ್ಕೆ ನಾನು ಏನನ್ನೂ ಹೇಳದೆ ಹುಸಿ ನಗುವನ್ನು ನಕ್ಕು "ಬಹಳ ಥೇಂಕ್ಸ್" ಅಂದೆನು.

ಅವನು ಸ್ವಲ್ಪ ಆಲೋಚಿಸಿದವನಂತೆ ನಟಿಸುತ್ತಾ "ಮಿಸ್ಟರ್! ನಿಮಗೆ ಆರ್ಟಿನಲ್ಲಿ (Art) ಅಭಿರುಚಿ ಇದೆಯೇ?" ಎಂದು ಕೇಳಿದನು. ನಾನು ಹೌದೆಂದು ತಲೆಯಲ್ಲಾಡಿಸಿದೆನು.

ಅದುವರೆಗೂ ಅವನು ಸೂಚಿಸಿದ್ದ ಮೂರನೆಯ ಮನೆಯ ಹೆಂಗಸರು ನನ್ನ ಕಡೆಗೇ ನೋಡುತ್ತಿದ್ದರು. ಏಜಂಟನು ಗಿರಾಕಿ ಹಿಡಿಯುವದರಲ್ಲಿ ಜಯಶೀಲನಾಗುತ್ತಾನೋ ಇಲ್ಲವೋ ಎಂಬುದನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದರು. ನನ್ನೊಡನಿದ್ದಾತನು ನನ್ನನ್ನು ಕರೆದುಕೊಂಡು ಆ ಮನೆಗೆ ಹೋದನು.

ಮನೆಯಲ್ಲಿ ತಂಪಾದ ಗಾಳಿ ಇಲ್ಲದಿದ್ದರೂ, ಮಂಚ, ಕುರ್ಚಿ, ಮೇಜುಗಳೆಲ್ಲಾ ಚೆನ್ನಾಗಿ ಶುಭ್ರವಾಗಿದ್ದುವು. ಅವನು "ಕಂ ಹೀಯರ್ ಮಿಸ್ ರೋಸ್" (Come here, Miss. Rose) ಎಂದು ಒಬ್ಬಳನ್ನು ಕರೆದನು. ಅವಳು ಬಂದ ಮೇಲೆ, "ಮಿಸ್ ಮೇರಿ, ಯು ಕಂ ಹೀಯರ್. ವಾಟ್ ಆರ್ ಯು ಡೂಯಿಂಗ್, ಮಿಸ್ ಲಿಲ್ಲೀ" (Miss Mary, you come here, What are you doing? Miss Lilly!) ಎಂದು ಅಲ್ಲಿದ್ದ ಹುಡುಗಿಯರನ್ನೆಲ್ಲಾ ಕರೆದನು. ಹೆಚ್ಚು ಕಮ್ಮಿ ಪ್ರಪಂಚದಲ್ಲಿ ಅತ್ಯಂತ ಸುಂದರವಾಗಿಯೂ, ಕಿವಿಗಿಂಪಾಗಿಯೂ, ಇರುವ "ಮೇರೀ", "ರೋಸ್", "ಲಿಲ್ಲೀ", ಎಂಬ ಹೆಸರುಗಳು ಮಾತ್ರ ಅಲ್ಲಿ ಬಳಕೆಯಲ್ಲಿದ್ದವು.

ಅವರೆಲ್ಲಾ ಬಂದು ನನ್ನನ್ನು ನೋಡಿ ನಾನು ಅವರನ್ನು ನೋಡಿದ ನಂತರ ಅಲ್ಲಿ ತಿಳಿಯಬೇಕಾದ ವಿಚಾರವು ಇನ್ನೇನೂ ಉಳಿದಿರಲಿಲ್ಲ. ಆ ಹುಡುಗಿ

ಯರು ಪಾಪಕೂಪದಲ್ಲಿಳಿವ ವಿಚಾರ ಮಾತನಾಡಿಸಿದರೆ ಅವರು ಸುಳ್ಳನ್ನೇ ಹೇಳಬಹುದು. ನಿಜ ಹೇಳಿದರೂ ಕೂಡ ಇದುವರೆವಿಗೆ ವೇಶ್ಯೆಯರು ಹೇಳಿದ ಕತೆಯಂತೆಯೇ ಇರಬಹುದೆಂದು ಊಹಿಸಿ, ನನ್ನ ಜೊತೆಯಲ್ಲಿ ಗಂಟುಬಿದ್ದವನಿಂದ ತಪ್ಪಿಸಿಕೊಳ್ಳಲು ಉಪಾಯವನ್ನು ಆಲೋಚಿಸಿದೆನು. ನಾನು ಬಹು ಸುಸ್ತಾದವನಂತೆ ನಟಿಸುತ್ತಾ "ನನಗೆ ಬಹಳ ತಲೆನೋಯುತ್ತಿದೆ! ಏನೋ ನೀವು ಕರೆದಿರಲ್ಲಾ ಎಂದು ಬಂದೆ ಅಷ್ಟೆ! ನಾನು ಹೋಗುತ್ತೇನೆ, ಈ ರೂಪಾಯಿಯನ್ನು ಹುಡುಗಿಯರಿಗೆ ಕೊಟ್ಟುಬಿಡಿ" ಎಂದು ಮೇಜಿನ ಮೇಲೆ ಎಸೆದೆನು. ರೂಪಾಯಿಯ ಸದ್ದಾಗುತ್ತಲೇ ವೇಶ್ಯೆಯು ಅಲ್ಲಿಗೆ ಬಂದು "ಏನು! ಏನು! ಎಷ್ಟು" ಎಂದು ಕೇಳತೊಡಗಿದಳು. ನನ್ನ ಜೊತೆಯಲ್ಲಿದ್ದವನು ಪರಿಸ್ಥಿತಿಯನ್ನು ಅವಳಿಗೆ ವಿವರಿಸಿ "ನಾಳೆ ಬರುತ್ತಾರೆ!" ಎಂದು ಹೇಳಿ ಕೊಟ್ಟಿದ್ದ ರೂಪಾಯಿಯನ್ನು ಅವಳಿಗಿತ್ತನು. ನಾನು ಆ ಮನೆಯಿಂದ ಹೊರಬಿದ್ದಾಗ ಅವನೂ ನನ್ನೊಡನೆ ಬರುತ್ತಿರುವದನ್ನು ಕಂಡು "ನೀವು ಎಲ್ಲಿಯವರೆಗೆ ಬಂದು, ಅನವಶ್ಯಕವಾದ ತೊಂದರೆಯನ್ನು ತೆಗೆದುಕೊಳ್ಳಬೇಕೆಂದಿದ್ದೀರಿ? ನಿಮಗೆ ಕಷ್ಟಕೊಡಲು ನನಗೆ ಇಷ್ಟವಿಲ್ಲ" ಎಂದು ಹೇಳಿದೆನು. ನನ್ನ ಪ್ರಶ್ನೆಯನ್ನು ಕೇಳಿ ಅವನು ಪೇಚಾಡಿಕೊಂಡರೂ, "ಹಾಗೇನೂ ಇಲ್ಲ! ನಿಮಗೆ ಆರ್ಟನಲ್ಲಿ ಅಭಿರುಚಿ ಇದೆಯೆಂದಿರಲ್ಲವೆ? ನನ್ನಲ್ಲಿ ಅತ್ಯುತ್ತಮವಾದ ಪ್ಯಾರೀಸಿನ ಚಿತ್ರಗಳಿವೆ! ನೀವು ನೋಡಲು ಬಯಸುವದಾದರೆ, ನಾಳೆ ತರುತ್ತೇನೆ. ಅಷ್ಟೇನು ದುಬಾರಿಯ ಬೆಲೆಯುಳ್ಳವುಗಳಲ್ಲ!" ಎಂದು ಹೇಳಿದನು.

ಅವನಲ್ಲಿ ಯಾವದೋ ಒಂದು ವಿಚಿತ್ರ ವಸ್ತುವಿದೆ ಎಂಬುದೇನೋ ನಿಜವಿದ್ದಂತೆ ತೋರುತ್ತಿತ್ತು. "ಈಗಲೇ ಕೊಡುವದು ಸಾಧ್ಯವಾಗಲಾರದೇ" ಎಂದು ಕೇಳಿದೆನು.

ಅವನು ತನ್ನ ಕಿಸೆಯಿಂದ ಒಂದು ಕಟ್ಟನ್ನು ಹೊರತೆಗೆದು, "ನೋಡಿ, ಈ ಚಿತ್ರಗಳು ಕೇವಲ ಸಾಮಾನ್ಯತರದ್ದು, ಇದನ್ನು ನೀವು ನೋಡಲೂ ಬಹುದು. ಆದರೆ ನಾನು ಹೇಳುವದು ಬೇರೆಯೇ ಇದೆ. ಅದನ್ನು ಇಂಥ ಸ್ಥಳದಲ್ಲಿ ತೋರಿಸುವದು ಸ್ವಲ್ಪ ಕಷ್ಟವೇ!" ಎಂದು ಆ ಕಟ್ಟನ್ನು ನನ್ನ ಕೈಗೆ ಕೊಟ್ಟನು. ಆ ಕಟ್ಟಿನಲ್ಲಿ ಪ್ಯಾರೀಸಿನ ಸಾಮಾನ್ಯವಾದ ಪ್ರಣಯ ಚಿತ್ರಗಳೂ, ಅರೆನಗ್ನದ ಚಿತ್ರಗಳೂ ಇದ್ದವು.

"ಹಾಗಾದರೆ, ಆ ಬೇರೆ ಚಿತ್ರವನ್ನು ಇಂಥ ಸ್ಥಳಗಳಲ್ಲೇಕೆ ನೋಡಬಾರದು?" ಎಂದು ಕೇಳಿದೆನು.

"ಅಯ್ಯೋ! ಪೋಲೀಸರಿಗೆ ಸಿಕ್ಕಿದರೇ...ಸಜೆಯಾದೀತು!"

"ಹಾಗಾದರೆ, ಎಲ್ಲಿ ನೋಡುವ?" ಎಂದು ಕೇಳಿದೆನು. ಅವನು ಹಿಂದುಮುಂದು ನೋಡಿ ನನ್ನನ್ನು ಒಂದು ಚಿಕ್ಕ ಹೋಟೇಲಿನೊಳಗೆ ಕರೆದೊಯ್ದನು. ಮೂಲೆಯೊಂದರಲ್ಲಿ ಕುಳಿತು ಎದುರಿಗಿದ್ದ ಮೇಜನ್ನು ಮರೆಯಾಗಿ ಮಾಡಿಕೊಂಡು ನಾಲ್ಕು ಚಿತ್ರಗಳನ್ನು ನನ್ನ ಕೈಗೆ ಕೊಟ್ಟನು.

ಅಬ್ಬ! ವಿಪರೀತವಾದ ಅಶ್ಲೀಲ ನಗ್ನ ಚಿತ್ರಗಳು. ಒಂದು ಗಂಡಸು ಮೂರು ಹೆಂಗಸರು, ಕೂಡಿ ಮಾನವನ ಮೆದುಳಿಗೆ ನಿಲುಕದಂತಹ ಅಶ್ಲೀಲವನ್ನೆಲ್ಲಾ ಮಾಡಿಕೊಂಡು ತೆಗೆಸಿದ ಆ ಚಿತ್ರಗಳನ್ನು ನೋಡಿ ನನ್ನ ಮೈಕೈಗಳು ನಡುಗಲು ಪ್ರಾರಂಭಿಸಿದವು. ಒಂದನ್ನೊಂದು ಮೀರಿಸುತ್ತಿದ್ದ ಆ ಚಿತ್ರಗಳನ್ನು ಉಪ್ಪುಕಾರತಿನ್ನುವ ಯಾವ ಪ್ರಾಣಿಯೇ ಆಗಲಿ, ನೋಡಿದ ತಕ್ಷಣವೇ ಮನವೆಲ್ಲಾ ಮರ್ಕಟವಾಗಿ ಕಾಮವು ಮೆದುಳಿಗೇರಿ ಹುಚ್ಚನಾಗಬಹುದೆಂದು ಮಾತ್ರ ನನಗೆ ಬರೆಯಲಿಕ್ಕೆ ಸಾಧ್ಯ. ಒಂದು ಚಿತ್ರದಲ್ಲಿ ಒಬ್ಬ ಗಂಡಸು ಇಬ್ಬರು ಹೆಂಗಸರು ಮಾಡುತ್ತಿದ್ದ ಕೃತ್ಯವಾದರೋ ವಿಪರೀತ ಅಶ್ಲೀಲವಾಗಿತ್ತು. ಆ ನನ್ನ ಚಿತ್ರಗಳಿಗೆ ಒಂದೊಂದು ರೂಪಾಯಿ ಕೊಡಬೇಕೆಂದು ಹೇಳಿದನು.

ಈ ಚಿತ್ರಗಳನ್ನು ಹ್ಯಾಗೆ ಸಂಪಾದಿಸಿದೆಯೆಂದು ಕೇಳಿದಾಗ "ನನಗೆ ನನ್ನ ಮಿತ್ರನೊಬ್ಬನು ಕೊಟ್ಟ ಸಾರ್, ಇವೆಲ್ಲಾ ಪ್ಯಾರೀಸಿನ ಚಿತ್ರಗಳು! ಆದರೆ...ಹುಷಾರ್–ಎಲ್ಲಾದರೂ ಸಿ. ಐ. ಡಿ. ಗಳ ಕೈಗೆ ಸಿಕ್ಕಿಬಿದ್ದೀರಿ!" ಎಂದು ಎಚ್ಚರಿಸಿದನು. ಅವು ಪ್ಯಾರೀಸಿನ ಚಿತ್ರಗಳೇ ಆಗಿದ್ದಲ್ಲಿ ಯಾವ ರೀತಿಯಿಂದ ನಮ್ಮ ಹಿಂದೂಸ್ಥಾನಕ್ಕೆ ಪ್ರಭುತ್ವದ ಕಣ್ಣು ತಪ್ಪಿಸಿ ಬರುತ್ತಿವೆ ಎಂಬ ಸಮಸ್ಯೆಯನ್ನು ಬಗೆಹರಿಸಲಾಗಲಿಲ್ಲ. ಅಂತೂ ಪ್ರಪಂಚದಲ್ಲಿ ಇಂಥದ್ದನ್ನೇ ಮಾಡಬೇಕು, ಇಂಥದ್ದನ್ನು ಮಾಡಬಾರದು ಎಂಬ ಯಾವ ನಿಯಮ ನಿಷೇಧವೂ ಇಲ್ಲದೆ ಎಲ್ಲವನ್ನೂ ಮಾಡಬಹುದು, ಮಾಡುತ್ತಿದ್ದಾರೆಂಬ ಹೊಸ ವಿಷಯವೊಂದನ್ನು ಆ ಚಿತ್ರಗಳಿಂದ ಕಲಿತುಕೊಂಡೆನು. ನಾನು ಆ ಮನುಷ್ಯನ ಪ್ರಯತ್ನಕ್ಕೆ ಪರಿಹಾರವನ್ನು ಕೊಟ್ಟು ಅವನಿಂದ ಬೀಳ್ಕೊಂಡೆನು.

ಅಂತರಂಗದ
ಸ್ಪರ್ಧೆ ಬಿಡಿಸಿ
ಬಹುಮಾನ ಪಡೆಯಿರಿ

# ಯುರೋಪಿನ ಕಳ್ಳರೊಳಗೆ ಕಾದಾಟ!



ಹಿಟ್ಲರ್ ಮಹಾಶಯನು ಯುರೋ.ನ ರಂಗಭೂಮಿಯಲ್ಲಿ ಅಭಿನಯಿಸಿ.ಳಿದ ಬಳಿಕ ಮಾನವಜಾತಿಯು "ಹೊಸ ಪ್ರಪಂಚ"ವೊಂದನ್ನು ಕಾಣು

ಗವಿಲ್ಲ. ತುಂಟ ಮಕ್ಕಳಂತಿರುವ ಐರೋಪ್ಯ ರಾಷ್ಟ್ರಗಳು ಜಗಳಾಡದೆ ಸುಮ್ಮನಿದ್ದುವೆಂದರೆ ಸಮಸ್ತ ಪ್ರಪಂಚದಲ್ಲಿಯೇ ಶಾಂತಿಯು ಸ್ಥಾಪನೆಯಾದಂತೆ! ಜಗತ್ತಿನಲ್ಲಿ ಬಹು ದೊಡ್ಡ ಭೂಖಂಡಗಳಾಗಿರುವ ಏಸ್ಯಾ ಮತ್ತು

ನರು ತಮ್ಮ ಮಧ್ಯಕಾಲೀನ ವಸ್ಯಸ್ಥಿತಿಯಿಂದ ದೂರನಾದಂದಿನಿಂದ ಅವರು ವ್ಯಾಪಾರ ಮತ್ತು ಸುಲಿಗೆಯನ್ನು ಸಾಧಿಸುವುದಕ್ಕಾಗಿ ಏಸ್ಯಾ, ಆಫ್ರಿಕಾ ಮತ್ತು ಅಮೇರಿಕದ ತೀರಗಳಿಗೆ ಹೋಗಲಾರಂಭಿಸಿದರು. ಈ ಯುರೋಪಿಯನರು ಎಲ್ಲಿಯೂ ನಾಗರಿಕ ವ್ಯಾ

## ಸಂಭಾವಿತರಂತೆ ನಟಿಸುವ ಪರಿಶುದ್ಧ ಪುಂಡರು

### ಏಸ್ಯಾ ಆಫ್ರಿಕಗಳನ್ನು ತನ್ನ ದಾಸರ ನಾಡಿನಂತೆ ಕಾಣುತ್ತಿರುವ ಸ್ವಾರ್ಥಿಗಳು.

ವುದೆಂದು ಎದೆಷ್ಟು ಮಂದಿ ರಾಜಕಾರಣಿಗಳು ಹೇಳುತ್ತಿಲ್ಲ? ಶವದ ಪೆಟ್ಟಿಗೆಯನ್ನು ವಿಕ್ರಯಿಸುವ ವ್ಯಾಪಾರಿಯು ಜನರ ಸಾವಿನಿಂದ ಲಾಭ ಪಡೆಯುವಂತೆ ಅನ್ಯರಾಷ್ಟ್ರಗಳು ತಮ್ಮೊಳಗೆ ಹೋರಾಡಿಕೊಳ್ಳುವಾಗ ಯುದ್ಧ ಸಾಧನಗಳನ್ನು ಮಾರಿ ಹಣ ಮಾಡುವ ಅಮೇರಿಕನರು ಕೂಡಾ "ಹೊಸ ಪ್ರಪಂಚ"ವೊಂದು ಯುದ್ಧಾನಂತರ ಕಾಣಿಸಿಕೊಳ್ಳಲಿದೆಯೆಂದು ಸಕ್ಕರೆಯಂತಹ ಮಾತುಗಳಲ್ಲಿ ಹೇಳುತ್ತಿದ್ದಾರಲ್ಲವೆ? ಇವರಾಡುವ ಮಾತಿನ ನಿಜವಾದ ಅರ್ಥವಾವುದು?

**ಯುರೋಪೇ ಅವರ ಪ್ರಪಂಚ!**

ಈ ರಾಜಕಾರಣಿಗಳ ದೃಷ್ಟಿಯಲ್ಲಿ ಯುರೋಪೇ ಒಂದು ಪ್ರಪಂಚ. ಮಿಕ್ಕುಳಿದ ಖಂಡಗಳು ಜೀವಿಸಿಕೊಂಡರೂ ಇಲ್ಲದಿದ್ದರೂ ಅವರಿಗೆ ಎಳ್ಳನಿತು ಬೇಸ

ಆಫ್ರಿಕಗಳನ್ನವರು ಲೆಕ್ಕಿಸುವುದೇ ಇಲ್ಲ. ಈ ನಿರ್ಭಾಗ್ಯ ಖಂಡಗಳಿಗೆ ಆತ್ಮವೇ ಇಲ್ಲ! ಅವುಗಳು ಯುರೋಪಿನ ನೆಳಲಿನಂತೆ. ಯುರೋಪು ಯಾವ ರೀತಿಯಲ್ಲಿ ತನ್ನ ವಿವಿಧ ಧೋರಣೆಗಳನ್ನು ಬದಲಾಯಿಸುತ್ತದೋ ಅದಕ್ಕನುಸಾರವಾಗಿ ಏಸ್ಯಾಫ್ರಿಕಾ ಖಂಡದವರು ಅತ್ಯಂತ ವಿಧೇಯತೆಯಿಂದ ವರ್ತಿಸಬೇಕು.

**ಶುದ್ಧ ಕಳ್ಳರ ಪ್ರಚಂಡ ಪುಂಡಾಟಿಕೆ**

ಈ ವರೆಗೆ ಇಂತಹ ಭಾವನೆಯು ಪ್ರಚಾರದಲ್ಲಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲವೆನ್ನಿ. ಯುರೋಪಿಯಾ

ಪಾರಿಗಳಂತೆ ವರ್ತಿಸಲಿಲ್ಲ. ಸುಲಿಗೆ, ಕಳ್ಳಾಟಿಕೆ, ಪುಂಡತನ ಈ–ದುರ್ಗುಣಗಳೇ ಅವರ ಪಾಲಿನ ಸದ್ಗುಣಗಳಾಗಿದ್ದುವು. ಕತ್ತಿಯ ಬಲದಿಂದ ಶಾಂತಮಯ ಜೀವನವನ್ನು ನಡೆಸುವ ಜನರ ಮೇಲೆ ಅಧಿಕಾರ ನಡೆಸಿ, ಅನ್ಯಾಯದ ತಳಹದಿಯ ಮೇಲೆ ಸಾಮ್ರಾಜ್ಯವನ್ನು ಕಟ್ಟಿ ಬದುಕಿ ಬಾಳುತ್ತಿರುವ ಮಕ್ಕಳವರು.

**ಅನ್ಯಾಯದ ಕರುಣ ಕಥೆ**

ಯುರೋಪಿನ ಜನರು ಅಮೇರಿಕಕ್ಕೆ ತೆರಳಿ ಅಲ್ಲಿಯ ಮೂಲನಿವಾಸಿಗಳನ್ನು ಸದೆಬಡಿದು ಅವರ ಪುರಾತನ ನಾಗರಿ

ಕತೆಯನ್ನೇ ಅಳಿಸಿಬಿಟ್ಟರು. ಆಫ್ರಿಕಕ್ಕೆ ತೆರಳಿ ತಮ್ಮೊಳಗೆ ಜಗಳ ಮಾಡಿಕೊಂಡು ಆ ಭೇದಭಾವವನ್ನು ಅಲ್ಲಿಯ ಜನರಲ್ಲಿಯೂ ಬಿತ್ತಿದರು. ಏಸ್ಯಾದಲ್ಲಿ ರಷ್ಯನರು ಟರ್ಕಿಸ್ಥಾನ, ಟಾರ್ಟರಿ ಮತ್ತು ಮಂಗೋಲಿಯವನ್ನು ಕೈವಶಪಡಿಸಿ ಶಾಂತಸಾಗರದ ವರೆಗೆ ಮುನ್ನಡೆದರು. ಬ್ರಿಟಿಷರೂ, ಫ್ರೆಂಚರೂ ಮತ್ತು ಡಚ್ಚರೂ ಹಿಂದೂಸ್ಥಾನ ಮತ್ತು ಇನ್ನಿತರ ದೇಶಗಳನ್ನು ಕೈವಶಪಡಿಸಿಕೊಂಡು ಹೆಚ್ಚುಕಡಿಮೆ ದಕ್ಷಿಣ ಏಸ್ಯಾ ಖಂಡವನ್ನು ತಮ್ಮಾಧೀನಪಡಿಸಿಕೊಂಡರು ಭಾಗ್ಯವಶಾತ್ ಚೀನವು ಅವರ ಕೈಸೇರಲಿಲ್ಲ. ಆಫ್ರಿಕದಲ್ಲಿ ಪರಸ್ಪರ ಮತ್ಸರಿಗಳಾದ ಯುರೋಪಿಯನರು ಹೇಗೆ ಹೋರಾಡಿಕೊಂಡರೋ ಅದೇ ರೀತಿಯಲ್ಲಿ ಚೀನದಲ್ಲಿಯೂ ಅವರು ಸೆಣಸಾಡಿ ಯಾರಿಗೂ ಇಲ್ಲದಂತೆ ಮಾಡಿಕೊಂಡರು. ಹೀಗೆ ಚೀನದಲ್ಲಿ ಪ್ರತ್ಯಕ್ಷವಾಗಿ ಆಳುವಂತಹ ಸ್ಥಳಗಳು ಅವರಿಗೆ ದೊರಕಲೇ ಇಲ್ಲ. ಯುರೋಪೆಂದರೆ ಸುಲಿಗೆ ಮಾಡುವವರ ನೆಲೆವೀಡೆಂದು ಬೇರೆ ಹೇಳಬೇಕೆ?



"ನಮ್ಮಷ್ಟು ಸಂಘಾತಿತರು ಬೇರಾರೂ ಇಲ್ಲವೆನ್ನುವ ತಕ್ಕಂಗ.೧ ಡಾ। ಗೋಬೆಲ್ಸ್"

## ಅಧಿಕಾರಕ್ಕಾಗಿ ಹೋರಾಟ.

ಯುರೋಪಿನ ಇಂದಿನ ಪರಿಸ್ಥಿತಿಯ ಕುರಿತು ಕೂಲಂಕಷವಾಗಿ ಯೋಚಿಸುವವರು ಪ್ರಜಾಸತ್ತೆ, ಏಕಸತ್ತೆ–ಎಂಬೀ ದೃಷ್ಟಿಯಲ್ಲಿ ವಿಚಾರ ಮಾಡಿ ಪ್ರಯೋಜನವಿಲ್ಲ. ಶತಮಾನ ಶತಮಾನಗಳಿಂದ ಯುರೋಪಿನಲ್ಲಿ ನೆಲೆಸಿದ ವಿವಿಧ ಪಂಗಡವವರು ತಮ್ಮೊಳಗೆ ಅಧಿಕಾರಕ್ಕಾಗಿ ಹೋರಾಡುತ್ತಾ ಬಂದಿದ್ದಾರೆ. ಆ ಹೋರಾಟವು ವಿವಿಧ ಕಾಲಗಳಲ್ಲಿ ವಿವಿಧ ರೂಪಗಳನ್ನು ಹೊಂದಿದೆ. ಆದರೆ ಬೆಕ್ಕು ನಾಯಿಗಳಂತೆ ಹೋರಾಡುವ ಆ ಬುದ್ಧಿಯು ಮಾತ್ರ ಇನ್ನೂ ಹೋಗಲಿಲ್ಲ. ಅವರು ತಮ್ಮೊಳಗೆ ಒಂದು ವಿಧದ ಐಕ್ಯವನ್ನು ಸ್ಥಾಪಿಸಲಿಕ್ಕಾಗಿ ಯತ್ನಿಸಿದ್ದಾರೆ. ಜನಾಂಗಸಭೆಗೆ ಅಧಿಕಾರದ ತಾಂಡವ ನೃತ್ಯವನ್ನು ಕಂಡು ಸಹಿಸಿಕೊಳ್ಳಲಾಗಲಿಲ್ಲ. ಹಾಗೆಯೇ ಆ ಸಭೆಯು ನೈಸರ್ಗಿಕ ಸಾವಿಗೆ ಗುರಿಯಾಯಿತು. ಈಗ ನಡೆಯುತ್ತಿರುವ ಯುದ್ಧವು ಅಂತಹ ವಿವಿಧ ಪಕ್ಷಗಳೊಳಗಣ ಹೋರಾಟ. ಯುರೋಪಿನ ಆ ಪುಂಡರ ಯುದ್ಧದೊಂದಿಗೆ ಏಸ್ಯಾ ಮತ್ತು ಆಫ್ರಿಕಾ ಖಂಡಗಳೂ ಸೇರಬೇಕಾಗುವಂತಹ ಒಂದು ಪರಿಸ್ಥಿತಿಯು ಬಂದೊದಗಿದೆ.

## ನಮ್ಮ ಐರೋಪ್ಯ ದೃಷ್ಟಿ

ಬಂಧನದಲ್ಲಿರುವವರಾದ ನಾವು ಅನೇಕೋ ಜಗತ್ತಿನ ಘಟನೆಗಳನ್ನು ಐರೋಪ್ಯದೃಷ್ಟಿಯಿಂದ ಕಾಣುತ್ತಿದ್ದೇವೆ ಎಂತಲೆ ನಾವು ಐರೋಪ್ಯ ಘಟನೆಗಳಿಗೆ ಅನವಶ್ಯಕವಾಗಿ ಭಾವನಾತ್ಮಕ ಪ್ರಾಮುಖ್ಯತೆಯನ್ನು ಕೊಡುವ ಹವ್ಯಾಸಕ್ಕೆ ಬಲಿಬಿದ್ದಿದ್ದೇವೆ. ಬ್ರಿಟನ್ ಮತ್ತು ಫ್ರಾನ್ಸು ಇಂದಿನ ದೊಡ್ಡಸ್ತಿಕೆಯನ್ನು ಪಡೆದಿರುವುದು ಚಿಕ್ಕ ಚಿಕ್ಕ ಇತರ ರಾಷ್ಟ್ರಗಳನ್ನು ನುಂಗಿದುದರಿಂದ. ಸ್ಕಾಟ್ಲೇಂಡ್, ವೇಲ್ಸ್, ಕಾರ್ನ್‌ವಾಲ್ ಮೊದಲಾದ ದೇಶಗಳ ಸ್ವಾತಂತ್ರ್ಯ ಚಳವಳವು ಈಗ ನಡೆಯುತ್ತಿತ್ತು; ಆದರೆ ಕತ್ತಿಯ ಬಲದಿಂದ ಆ ದೇಶಗಳನ್ನು ಅವುಗಳ ನೆರೆಹೊರೆಯ ರಾಷ್ಟ್ರವು ತನ್ನಾಧೀನಪಡಿಸಿಕೊಂಡದ್ದರಿಂದ ಆ ಕುರಿತು ಯಾರೂ ಈಗ ಬೇಸರಪಡದಂತಾಗಿದೆ. ಇಂಗ್ಲೆಂಡು ಹೇಗೆ ಚಿಕ್ಕ ರಾಷ್ಟ್ರಗಳನ್ನು ನುಂಗಿ ತನ್ನ ಶರೀರದ ಅಂಗಗಳನ್ನಾಗಿ ಮಾಡಿಕೊಂಡಿತೋ ಅದೇ ರೀತಿಯಲ್ಲಿ ಯುರೋಪಿನಲ್ಲಿಯೂ ಜೀರ್ಣಿಸಿಕೊಳ್ಳುವ ಯತ್ನವು ಜರ್ಮನಿಯಿಂದ ಮಾಡ

(೨೭ನೇ ಪುಟ ನೋಡಿರಿ)

# ವಾರದ ಭವಿಷ್ಯ

ತಾರೀಖು ೧೧-೮-೧೯೪೮ರಿಂದ ೧೭-೮-೧೯೪೮ರ ವರೆಗೆ.

ಜ್ಯೋತಿಷ್ಕರು:-
**ಬಾಲಭಾಸ್ಕರರು.**

## ಮೇಷ:

ಸಾಮಾಜಿಕ ಮತ್ತು ರಾಜಕೀಯ ಕಾರ್ಯಗಳಲ್ಲಿ ಮನಸ್ಸಿಗೆ ಅಸಮಾಧಾನವೇ ಹೆಚ್ಚುತ್ತಿರುವುದು. ಅತ್ಯಾವಶ್ಯಕವಾಗಿದ್ದ ವಸ್ತುವು ಅತಿ ದೂರವಾಗುವುದು. ಇಂತಹ ಸಂದರ್ಭಗಳಲ್ಲಿ ದುಃಖವೂ ಭಯವೂ ಒಮ್ಮೆಲೇ ನಿಮ್ಮನ್ನು ಆವರಿಸಿಕೊಳ್ಳುವುದು. ಆಯಕ್ಕಿಂತಲೂ ವ್ಯಯವು ದ್ವಿಗುಣವಾಗಿ ಪರಿವರ್ತಿಸುವುದರಿಂದ ಅಡಚಣೆಯು ನಿಮಗೆ ತಪ್ಪಲೊಲ್ಲದು. ಮಕ್ಕಳುಮರಿಗಳಿಂದಾಗಿ ಸದಾ ಶೋಕವೇ ಅಧಿಕವಾಗಲಿದೆ. ಆರೋಗ್ಯವೂ ತೃಪ್ತಿಕರವಿರದು. ಸ್ಥಾನಮಾನಗಳಿಗೆ ಕೊರತೆಯಾದೀತು. ಬಂಧುಗಳ ವಿಯೋಗ ದೇಶಾಂತರ ಪ್ರವಾಸಾದಿಗಳೂ ಕೂಡ ಸಂಘಟಿಸಲಿವೆ. ಕುಟುಂಬಿಕರ ಮತ್ತು ಬಂಧುಗಳ ಸಹಕಾರವು ತಕ್ಕಮಟ್ಟಿಗೆ ಉತ್ತಮವಿರುವುದರಿಂದ ತಾ. ೧೫-೧೬-೧೭ ಈ ದಿನವನ್ನು ಹೆಚ್ಚಿನ ಶ್ರಮವಿಲ್ಲದೆ ಕಳೆಯುವಿರಿ. ಮುಂದಿನ ವಾರದಲ್ಲಿ ಕೆಲವೊಂದು ಬದಲಾವಣೆಗಳಾಗುವ ಚಿಹ್ನೆಗಳು ಕಾಣಿಸುತ್ತಿವೆ.

## ವೃಷಭ:

ಏಳೂವರೆ ಶನಿಯ ಕಾಟವಾರಂಭವಾದಂದಿನಿಂದ ನೀವು ಗುರ್ವನುಗ್ರಹದಿಂದಲೂ ಮುಕ್ತರಾಗಿರುವಿರಿ. ಸದ್ಯ ಕುಜ ಬುಧರೂ ಪ್ರತಿಕೂಲ ಸ್ಥಾನಾಪನ್ನರಾಗಿರುವುದರಿಂದ ನಾನಾ ತರದ ಕಷ್ಟ ನಷ್ಟಗಳಿಗೂ ವ್ಯಸನಕ್ಕೂ ಈಡಾಗುವಿರಿ. ಪುಣ್ಯಕ್ಷೇತ್ರ ತೀರ್ಥಯಾತ್ರಾದಿಗಳ ಸಂದರ್ಶನ ಪ್ರಸಕ್ತಿಯೊದಗಿದರೂ ಮಾರ್ಗದಲ್ಲಿ ದೇಹಪೀಡೆ ಮತ್ತು ಧನ ನಾಶಾದಿ ಕಷ್ಟಗಳಿಗೆ ತುತ್ತಾಗುವಿರಿ. ಕುಜನರ ಮೈತ್ರಿಯಿಂದ ಯಾವ ಸಮಯಕ್ಕೆ ಕೇಡು ಸಂಭವಿಸುವುದೆಂದೂ ಊಹಿಸಲಾಗದು. ವಿದ್ಯಾ ಮೂಲಕವಾಗಿಯೂ ವ್ಯಾಪಾರ ವಿನಿಮಯಾದಿಗಳಿಂದಲೂ ತಕ್ಕಮಟ್ಟಿನ ದ್ರವ್ಯ ಸಂಪಾದಿಸುವಿರಾದರೂ ಖರ್ಚಿನ ಭಾಗಗಳು ದಿನೇದಿನೇ ವೃದ್ಧಿಗೊಳ್ಳುತ್ತಿರುವುದರಿಂದ ಕೈಯಲ್ಲೊಂದು ಕಾಸೂ ಉಳಿಯಲಾರದು. ವಾರಾದಿಯ ೨ದಿನಗಳು ಕಿಂಚಿತ್ಸುಖಪ್ರದಗಳಾದಾವು. ಬರುವ ವಾರವಿನ್ನೂ ಅನಿಷ್ಟ ಹೆಚ್ಚಲಿದೆ.

## ಮಿಥುನ:

ಚಿಲ್ಲರೆ ಕಾರಣಗಳಿಂದ ಮಾತುಮಾತಿಗೆ ಕಲಹವಾಗಿ ಮಾನ ಹಾನಿಯ ಸಂಭವವಿರುವುದರಿಂದ ವ್ಯವಹಾರದಲ್ಲಿ ಬಹಳ ಮಿತವಾಗಿಯೂ ಜಾಗರೂಕರಾಗಿಯೂ ಇರಬೇಕಾಗಿದೆ. ಬೇಕಾದ ಸಾಧನ ಸಂಪತ್ತುಗಳಿದ್ದರೂ ಮಾನಸಿಕ ಧೈರ್ಯವು ಕಡಿಮೆಯಿರುವುದರಿಂದ ಯಾವ ಉದ್ಯಮಕ್ಕೂ ಮುಂದಾಗಲು ಹೆದರುವಿರಿ. ಅಂತಹ ಅಂಜುಬುರುಕತನವನ್ನು ಕಿತ್ತೊಗೆದು ಕಾರ್ಯದಲ್ಲಿ ಮುನ್ನಡೆವಿರಾದರೆ ನಿಮಗಾವತರದ ಅಡ್ಡಿ ಆತಂಕಗಳೂ ಬರಲಾರವು. ಗುರುಹಿರಿಯರ ಅನುಗ್ರಹವೂ ಬಂಧು ಬಳಗದವರ ಸಹಕಾರವೂ ತುಂಬಾ ಇರುವುದರಿಂದ ಸಕಲ ಕಾರ್ಯಗಳಲ್ಲೂ ವಿಜಯಿಗಳಾಗಿ ನಿಮ್ಮ ಗುರಿಯನ್ನು ಮುಟ್ಟಲು ಸಮರ್ಥರಿರುವಿರಿ. ತಾ. ೧೧ರಿಂದ ೧೪ರವರೆಗಿನ ದಿನಗಳು ಅತ್ಯನುಕೂಲಗಳಾಗಿವೆ. ಮೇಲಿನ ವಾರದಲ್ಲಿ ಇನ್ನೂ ಉತ್ತಮ ರೀತಿಗೆ ಬರಲಿರುವಿರಿ.

## ಕರ್ಕಾಟಕ:

ಒಂದೆಡೆಯಲ್ಲಿ ಶತ್ರುಗಳ ಪೀಡೆ ಇನ್ನೊಂದೆಡೆಯಲ್ಲಿ ರಾಜಕೀಯದ ಭಯ ಹೀಗಾಗಿ ನಿಮ್ಮ ಮನಸ್ಸಿಗೆ ಈ ಷತ್ತೂ ಶಾಂತಿಯಿರಲಾರದು. ಒಂದು ವಿಧದಿಂದ ಧನ ಸಿಗುವುದಾದರೆ 5 ವಿಧಾನದಲ್ಲಿ ಖರ್ಚುಗಳೇ ಕಂಡುಬರುವುದರಿಂದ ಆರ್ಥಿಕ ಬಿಕ್ಕಟ್ಟು ಹೇಳಿ ತೀರಲೊಲ್ಲದು. ಈ ಚಿಂತಾಸಮೂಹಗಳಿಂದ ನಿದ್ರಾಹಾರಗಳೂ ಕೂಡ ಕ್ರಮವಾಗಿ ದೊರೆಯದೆ ಅನಾರೋಗ್ಯಕ್ಕೆಡೆಯುಂಟಾಗುವುದು. ವಿದ್ಯಾರ್ಥಿಗಳಿಗೆ ಅಧ್ಯಯನಭಾಗಕ್ಕೆ ತುಂಬಾ ತಡೆಯುಂಟಾಗುವದು. ಜನತೆಯಲ್ಲಿ ಕಲಹ ನಿಂದೆಗ


ವಿದ್ಯೆದ ತಾದಿ

**ಹಳ್ಳಿಯ ಟೊಳ್ಳು ಜೀವನವನ್ನು ಮನಸ್ಸಿಗೆ ನಾಟುವಂತೆ ಚಿತ್ರಿಸಿದ**

**ತುಳು ನಾಟಕ**

**ಬೆಲೆ: ೦-೬-೦**

ತುಳುನಾಡ್ ಪ್ರೆಸ್

ಉಡುಪಿ.

ಳಿಗೆ ಗುರಿಯಾಗುವಿರಿ. ಆದರೂ ವಾರಾಂತ್ಯದ ೫ ದಿನಗಳಲ್ಲಿ ಸ್ತ್ರೀ ಮೂಲಕವಾಗಿ ಕೊಂಚ ಧನಲಾಭವಾಗಲಿದೆ. ಮನಶ್ಶಾಂತಿಯೂ ಉಂಟಾಗುವದು. ಮೇಲಿನ ವಾರದಲ್ಲೂ ಸುಧಾರಿಸುವಂತಿಲ್ಲ.

## ಸಿಂಹ:—

ಯುಕ್ತಾಯುಕ್ತ ವಿಚಾರಶಕ್ತಿಯೂ ಮಿತ್ರವರ್ಗದವರ ಕೊಡುಗೈ ಸಹಾಯವೂ ನಿಮಗೆ ಬೇಕಾದಷ್ಟಿರುವುದರಿಂದ ನ್ಯಾಯವನ್ನತಿಕ್ರಮಿಸದೆ ಮುಂದರಿವ ವರೆಗೆ ಸ್ವೀಕೃತ ಕಾರ್ಯಗಳಲ್ಲಿ ಬಹ್ವಂಶ ವಿಜಯವಾಗಲಿದೆ. ಸಾಮಾಜಿಕ ರಾಜಿಕೀಯ ಕಾರ್ಯಗಳಲ್ಲಿ ಸದ್ಯ ಪ್ರವರ್ತಿಸದಿರುವುದೊಳ್ಳಿತು. ಪ್ರವಾಸಾದಿಗಳಿಗೂ ಈ ಸಮಯವು ತಕ್ಕುದಲ್ಲ. ಆಯವ್ಯಯಗಳು ಸಮನಾಗಿರುವುದರಿಂದ ಹಣದ ಅಡಚಣೆಯುಂಟಾಗದು. ಆಕಸ್ಮಿಕವಾಗಿ ಅಪಘಾತಾದಿಗಳು ಸಂಭವಿಸುವಂತಿರುವುದರಿಂದ ಬಹಳ ಜಾಗರೂಕರಾಗಿರಿ. ತಾ. ೧೧ರಿಂದ ೧೪ರವರೆಗಿನ ದಿನಗಳು ಚನ್ನಾಗಿಲ್ಲದಿರುವುದರಿಂದ ಆಪ್ತರಲ್ಲಿ ಮನಸ್ತಾಪ ಉದರರೋಗ ಶೋಕಾದಿಗಳು ಪ್ರಾಪ್ತವಾಗಬಹುದು. ಬರುವ ವಾರದಲ್ಲೂ ಪರಿಸ್ಥಿತಿಯು ಉತ್ತಮವಾಗುವಂತಿಲ್ಲ.

## ಕನ್ಯಾ:—

ನಿಮ್ಮ ದುರ್ದೈವದ ಪರಿಣಾಮವಾಗಿ ಅನೇಕ ದಿನಗಳಿಂದ ಮಾತನಾಡಿದವರೊಡನೆ ಜಗಳವೇ ಫಲರೂಪವಾಗಿ ನಿಮಗೆ ದೊರೆಯುತ್ತಿತ್ತು. ಇನ್ನೂ ಒಂದೆರಡು ವಾರ ಅಂತಹ ದುರ್ಘಟನೆಯಿಂದ ಪಾರಾಗಲಾರಿರಿ. ಮನೆಯವರಲ್ಲೀ ಪರಸ್ಪರ ಕಲಹವಾಗಲಿದೆ. ಹಿರಿಯರ ಪ್ರಕೋಪಕ್ಕೆ ಬಲಿಯಾದ ನಿಮಗೆ ವಿಶೇಷವಾದ ದೇಹಪೀಡೆಯೂ ಶೋಕವೂ ಸಂಭವಿಸಲಿದೆ. ಹೆಂಡಿರು ಮಕ್ಕಳಿಂದಲೂ ಕೂಡ ವಿಯೋಗವುಂಟಾದೀತು. ಆದರೂ ವಿದ್ಯೋಪಜೀವಿಗಳಿಗೂ ವೈದ್ಯ ಜನರಿಗೂ ದಿನನಿತ್ಯದ ಖರ್ಚಿಗೆ ಕೊರತೆಯುಂಟಾಗದು. ತಾ. ೧೧-೧೨ ಇದ್ದುದರಲ್ಲಿ ಉತ್ತಮವಾಗಿವೆ. ಮುಂದಿನ ವಾರವಿನ್ನೂ ಕಷ್ಟಪ್ರದಾಯಕವಾಗಲಿದೆ.

## ತುಲಾ:—

ಇತರ ಎಲ್ಲಾ ಗ್ರಹರ ಅನುಗ್ರಹಕ್ಕೆ ನೀವು ಪಾತ್ರರಾಗಿದ್ದರೂ ಶನಿ ಮತ್ತು ರಾಹು ಇವರ ಆಗ್ರಹದಿಂದ ಮುಕ್ತರಾಗಿಲ್ಲವಾದ ಕಾರಣ ಪರ್ಯಟನವೂ


**ಜಾಗ್ರತೆ!** **ಜಾಗ್ರತೆ!**

ದೇಶವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವುದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಪ್ರಸನ್ನ ನೋಡಿ ತೆಗೆದುಕೊಳ್ಳಿರಿ.

**ನಕಲಿ ಮಾಲಿಗೆ ಮೋಸಹೋಗಬೇಡಿರಿ!**

# ದ್ರಾಕ್ಷಾಮೃತ

**ಪಂಡಿತ್ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟು, ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ**

ಒಂದೇ ಸವನೆ ೫೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

**ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್**

ಇದರ ಸೇವನೆಯಿಂದ ರಕ್ತಶುದ್ಧಿಯಾಗುವುದು. ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವುದು, ಕಣ್ಣು ಕೈ ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ತ ವಿಕಾರಗಳು ನಾಶವಾಗುವವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವ ರೋಗ ನಿವಾರಣೆಯಾಗಿ ಸಂತತಿ ಧಾರಕವಾಗುವುದು. ಅಂತೂ ಇದು ಬಾಲ-ವೃದ್ಧ-ಸ್ತ್ರೀ ಪುರುಷರಿಗೆ ಅತಿ ಉಪಯುಕ್ತವಾಗಿದೆ.

**ಕ್ರಯ ೧ ಬಾಟ್ಲಿ ರೂ. ೧-೪-೦**

ಮಾನೇಜರ್:— **ದ್ರಾಕ್ಷಾಮೃತ ಡಿಪೊ, ಪೋಸ್ಟ್-ನಿಪ್ಪಾಣಿ, ಜಿಲ್ಲಾ ಬೆಳಗಾಂವ.**

ಮಂಗಳೂರು ಸ್ಟೋಕಿಸ್ಟರು:— **ಕೆನರಾ ಮೆಡಿಕಲ್ ಸಪ್ಲೈಸ್ ಲಿಮಿಟೆಡ್**

ಉಡುಪಿ ಸ್ಟೋಕಿಸ್ಟರು:- **ಪೈ ಫಾರ್ಮಸಿ, ಉಡುಪಿ.** ಬೆಂಗಳೂರು:-**ಸೀತಾರಾಮ ಪೈ ಬ್ರದರ್.**

ಮೈಸೂರು:- **ಟಿ. ಸಿ ನಟರಾಜ, ಮತ್ತು ಮೋಡರ್ನ್ ಫಾರ್ಮಸಿ.**

ನಾನಾ ಅಶುಭಗಳೂ ಸಕಲ ಭಾಗಕ್ಕೂ ನಾಶವೂ ಪ್ರಾಪ್ತವಾಗಬಹುದು. ಆದರೂ ಮಿಕ್ಕುಳಿದ ಗ್ರಹಬಲವಧಿಕವಿರುವುದರಿಂದ ಈ ಅಪಾಯಗಳಿಂದ ಮುಕ್ತರಾಗುವಿರಿ. ಕರ್ಮದಲ್ಲಿ ರವಿ ಬುಧರೂ ಲಾಭದಲ್ಲಿ ಕುಜನೂ ನಿಂತಿರುವುದರಿಂದ ವಿಚಾರಪೂರ್ಣವಾಗಿ ಮಾಡಲ್ಪಟ್ಟ ಕಾರ್ಯಗಳು ಅತ್ಯಲ್ಪ ಕಾಲದಲ್ಲೇ ಮಹತ್ತಾದ ಫಲವನ್ನು ಕೊಡಲಿವೆ. ನಾನಾ ರೀತಿಯಿಂದ ಧನಾಗಮವಾಗುವುದರಿಂದ ಹಣದ ಬಿಕ್ಕಟ್ಟೆಂಬುದುಳಿಯಲಾರದು. ಜನತೆಯಲ್ಲಿ ಗೌರವಾದರಗಳನ್ನು ಹೊಂದುವಿರಿ. ತಾ. ೧೩. ೧೪. ಇವೆರಡು ದಿನಗಳುತ್ಯುತ್ತಮವಾಗಿವೆ. ಬರುವ ವಾರದಲ್ಲೂ ಉತ್ತಮವೇ ಆದೀತು.

## ವೃಶ್ಚಿಕ:—

ಸ್ವಯಂ ನೀವು ಯಾವ ಕಾರ್ಯವನ್ನು ಮಾಡಲೂ ಶಕ್ತರಿರುವಿರಾದರೂ ದೈವಬಲದಿಂದ ವಂಚಿತರಾಗಿರುವುದರಿಂದ ನಿಮ್ಮಿಚ್ಛೆಯಂತೇ ಫಲ ಪ್ರಾಪ್ತಿಯಾಗಲೊಲ್ಲದು. ಹಗೆ ಜನರ ಪೀಡೆಯು ಅತ್ಯಧಿಕವಾಗಿರುವುದು. ಮನೋವ್ಯಾಧಿಯು ಬಲಿಯುತ್ತಲೇ ಹೋಗುವುದು. ಖರ್ಚಿಗೆ ಸಾಕಷ್ಟು ಉತ್ಪತ್ತಿಯೂ ಇರದ ಕಾರಣ ಹಣದ ತೊಂದರೆಯೂ ಉಂಟಾಗುವದು. ಅಂತೂ ಈ ತರದ ನಾನಾ ಚಿಂತೆಗಳಿಂದ ಸದಾ ವ್ಯಥಿತಾಂತಃಕರಣರಾಗಿರುವ ನಿಮ್ಮ ಆರೋಗ್ಯವೂ ಕೆಡಲಿದೆ. ನೌಕರಿ ವರ್ಗದವರಿಗೆ ದಿನ ಯಾಪನೆಯು ಕಷ್ಟತರವಾದೀತು. ಶ್ರಮಜೀವಿ ವ್ಯಾಪಾರಿ ಇವರುಗಳಿಗೆ ಇಷ್ಟಸಿದ್ಧಿಯ ಯೋಗವಿದೆ. ತಾ. ೧೩. ೧೪. ಬಿಟ್ಟು ಇತರ ದಿನಗಳು ಶ್ರೇಯಸ್ಕರವಿವೆ. ಮೇಲಿನ ವಾರ ಕೊಂಚ ಸುಧಾರಿಸುವಿರಿ.

## ಧನು:—

ನಾರೀ ಪ್ರತ್ಯಕ್ಷ ರಾಕ್ಷಸೀ ಎಂಬ ನಾಡಾಡಿಗರ ಮಾತು ಅಕ್ಷರಶಃ ನಿಜವೆಂದು ನಿಮ್ಮ ಅನುಭವದಿಂದ ನೀವು ದೃಢಪಡಿಸಲು ಶಕ್ತರಿರುವಿರಿ. ಅನೇಕ ಸಮಯದಿಂದ ಸಂಭವಿಸಿದ ಸಂಭವಿಸುತ್ತಿರುವ ಇವರ ಉಪಟಳವೇ ಇದಕ್ಕೆ ನಿದರ್ಶನವೆನ್ನಬಹುದು. ವಿರೋಧಿ ಜನರ ಕೈವಾಡವು ಎಲ್ಲೆಲ್ಲೂ ಅಧಿಕವಾಗಿರುವುದರಿಂದ ಹಲವು ಕಾರ್ಯಗಳಲ್ಲಿ ಪರಾಜಿತರಾಗುವಿರಿ. ದೇಹದಲ್ಲಿ ಧಾತುಕ್ಷಯದಿಂದಾಗಿ ಅಶಕ್ತಿಯು ಹೆಚ್ಚಲಿದೆ. ಸಂಸಾರ ರಥವು ಸೂತ್ರವಾಗಿ ಮುಂದರಿಯಲಾರದು. ನೌಕರಿ ಮೂಲಕವಾಗಿ ಕೊಂಚ ಧನ ಸಂಪಾದಿಸುವಿರಿ. ವಿದ್ಯಾರ್ಥಿಗಳು ಕೃತಕೃತ್ಯರಾಗುವರು. ತಾ. ೧೩. ೧೪. ಇದ್ದುದರಲ್ಲಿ ತೃಪ್ತಿಕರವಿದೆ. ಮುಂದಿನ ವಾರ ಹೆಚ್ಚಿನ ವಿಶೇಷವುಂಟಾಗದು.

## ಮಕರ:—

"ದುರ್ದೈವಃ ಪುರುಷೋ ಯತ್ರ ಯಾತಿ ತತ್ರೈವ ಚಾಪದಃ" ಅದೃಷ್ಟಹೀನನಾದ ನರನು ಎಲ್ಲಿಗೆ ಹೋದರೂ ಕೂಡ ಅವನಿಗೆ ಸಂಬಂಧಪಟ್ಟ ಆಪತ್ಪರಂಪರೆಗಳೂ ಅವನನ್ನು ಹಿಂಬಾಲಿಸುವವು. ಉದಾಹರಣೆಗಾಗಿ ಬಿಸಿಲಿನ ಬೇನೆಯನ್ನು ತಾಳಲಾರದ ಓರ್ವನು ತೆಂಗಿನ ಮರದಡಿ ನಿಲ್ಲಲು ಅದರ ಕಾಯಿಯು ತಲೆಯ ಮೇಲೆ ಬಿತ್ತಂತೆ. ಅಂತೆಯೇ ನಿಮ್ಮ ಅವಸ್ಥೆಯೂ ಕೂಡ ಸದ್ಯ ಅದೇ ರೀತಿಗೆ ಬಂದಿದೆ. ಸಕಲ ಗ್ರಹರೂ ವಿಮುಖರಾಗಿರುವ ಈ ಕಾಲದಲ್ಲಿ ಸಕಲ ಜನ ವೃಂದದಿಂದಲೂ ನೀವು ತ್ಯಕ್ತರಾಗುವಿರಿ. ಪತ್ನೀ ಪುತ್ರರಿಂದಲೂ ವಿಯೋಗವಾಗುವುದೆಂದರೂ ತಪ್ಪಾಗದು. ಅನಾರೋಗ್ಯ ಆರ್ಥಿಕ ಬಿಕ್ಕಟ್ಟು ವಿಶೇಷವಾಗುವದು. ತಾ. ೧೩. ೧೪. ಈ ಎರಡು ದಿನಗಳು ಬಹಳ ಕಠಿಣಗಳಾಗಿವೆ. ಬರುವ ವಾರವೂ ಕಷ್ಟಕರವಾದದ್ದೇ.

## ಕುಂಭ:—

ಇತ್ತೀಚೆಗೆ ನಿಮಗೆ ಸಾಂಸಾರಿಕ ಸಂಬಂಧವಾದ ಕೆಲವು ತಾಪತ್ರಯಗಳು ಗಂಟುಬಿದ್ದಿವೆ. ಸ್ವದೇಹಾಲಸ್ಯ ಅರ್ಧಾಂಗಿಯ ಅನಾರೋಗ್ಯ ಇವುಗಳಿಂದಾಗಿ ವ್ಯರ್ಥ ಖರ್ಚುಗಳು ಹೆಚ್ಚುವವು. ಮನೆಯಲ್ಲಿ ನಿತ್ಯ ಜಗಳಕ್ಕೆಡೆಯುಂಟಾಗುವುದು. ಆದರೂ


ಸಚಿತ್ರ] **ಪೌರುಷ** [ಸಚಿತ್ರ

**ಪ್ರೇಮಕಲಾ, ಕಾಮದ ಗುಟ್ಟು ಮೊದಲಾದ ಪುಸ್ತಕಗಳನ್ನು ಬರೆದ ಡಾ|| ಗೋಪಾಲಕೃಷ್ಣರ ಹೊಸ ಪುಸ್ತಕ!**

ಕಾಮವೆಂದರೇನು? ಪೌರುಷವೆಂದರೇನು? ದುಶ್ಚಟಗಳಿಂದ ನಪುಂಸಕರಾಗಿದ್ದರೆ ಏನು ಮಾಡಬೇಕು? ಪೌರುಷ ನಾಶದ ಕಾರಣಗಳು, ಲಕ್ಷಣಗಳು, ವಿವಿಧ ಔಷಧೋಪಚಾರಗಳು, ಮಾನಸೋಪಚಾರಗಳು, ಕಳೆದುಕೊಂಡ ಪೌರುಷವನ್ನು ಮತ್ತೆ ತಂದುಕೊಳ್ಳಲು ಅನೇಕ ಚಿಕಿತ್ಸೆಗಳು ಇತ್ಯಾದಿ.......

ಪ್ರತಿಯೊಬ್ಬ ಪುರುಷನು ಅವಶ್ಯ ಓದಬೇಕಾದ ಪುಸ್ತಕ!

**ಬೆಲೆ: ೧ ರೂಪಾಯಿ. (ವಿ. ಪಿ. ವೆಚ್ಚ ಬೇರೆ)**

ವಿಳಾಸ:- **ಸಮಾಜ ಪುಸ್ತಕಮಾಲೆ, ಧಾರವಾಡ.**

ನೀವು ಹಿಡಿದ ಕಾರ್ಯವನ್ನು ಕೊನೆಗೊಳಿಸದೆ ಬಿಡಲಾರಿರಿ. ಈ ವಾರದಲ್ಲದನ್ನು ಪೂರೈಸಿದ್ದರೆ ಮುಂದೆ ಅದು ಥಕ್ಕನೆ ತೀರಲೊಲ್ಲದು. ಖರ್ಚಿಗಿಂತ ದ್ವಿಗುಣವಾಗಿ ಆದಾಯವಿರುವುದರಿಂದ ಕಾಲಯಾಪನೆಯು ಕಷ್ಟವಾಗಲಾರದು. ಗೃಹಸುಖವು ತಕ್ಕಮಟ್ಟಿಗೆ ಉತ್ತಮವಾಗಿಯೇ ಇದ್ದೀತು. ತಾ. ೧೧ರಿಂದ ೧೪ರ ವರೆಗೂ ಇಷ್ಟಾರ್ಥಸಿದ್ಧಿ ಮಿತ್ರ ಸಮಾಗಮದಿಂದ ಸಂತೋಷ. ಬರುವ ವಾರ ಸ್ವಲ್ಪ ಹೀನಸ್ಥಿತಿಗೆ ಬರುವಿರಿ.

## ಮೀನ.

ಪತಿ ಪತ್ನಿಗಳಲ್ಲೂ ತಂದೆ ಮಕ್ಕಳಲ್ಲೂ ಪರಸ್ಪರ ಭಿನ್ನಾಭಿಪ್ರಾಯದಿಂದ ಮನಸ್ಸಮಾಧಾನವಿರದು. ಇದರಿಂದ ಇಬ್ಬರ ನ್ಯಾಯ ಮೂರನೆಯವನಿಗಾದಾಯ ಎಂಬಂತೆ ಇತರ ಹಗೆಯವರ ಪ್ರವೇಶಕ್ಕೆಡೆದೊರೆತಂತಾಗುವುದು. ಆದರೂ ವಿರೋಧಿಗಳ ಬೆದರಿಕೆಯು ನಿಮಗೆಳ್ಳಷ್ಟೂ ಇಲ್ಲವು. ಉದ್ಯೋಗ ವ್ಯಾಪಾರಾದಿಗಳಲ್ಲಿ ನ್ಯಾಯವಾದ ಫಲವನ್ನು ಹೊಂದುವಿರಿ. ಸಂಪದ್ಭಾಗವು ಸುಧಾರಿಸುವುದು. ಆರೋಗ್ಯವೂ ತಕ್ಕಮಟ್ಟಿಗೆ ಉತ್ತಮವಾಗಿಯೇ ಇದ್ದೀತು. ಶಿಲ್ಪಕಲೆ, ಕೈಗಾರಿಕೆ, ಲೇಖನ ಇತ್ಯಾದಿಗಳಲ್ಲಿರುವವರಿಗೆ ದಿನಗಳು ಸುಗಮವಾಗುವವು. ತಾ. ೧೧, ೧೨. ಚೆನ್ನಾಗಿಲ್ಲ. ಮೇಲಿನ ವಾರವಿನ್ನೂ ಸುಧಾರಿಸಲಿದೆ.

---

# ಶ್ರೀ. ಚಂದ್ರಕಲಾ ಸ್ಪರ್ಧೆ ನಂ. 44ರ

**ಕೆನರಾ ಬ್ಯಾಂಕಿನಲ್ಲಿ ಮೋಹರಾಗಿದ್ದ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರು.**

**ಎಡದಿಂದ ಬಲಕ್ಕೆ:—1. ವಿಶ್ವಕರ್ಮ. 3. ವಧು. 4. ಧ್ಯಾನ. 6. ನವರತ್ನ. 7. ರಿಕ್ತ. 10. ಮಾನ. 11. ಭೂಪಾಲ. 12. ಸೈರಣೆ.**

**ಮೇಲಿನಿಂದ ಕೆಳಕ್ಕೆ:—1. ವಿಪ್ರ. 2. ಕಷ್ಟ. 5. ಮೋಹ. 8. ವಿಜಯ. 9. ನೀತಿಯು.**

## ಬಹುಮಾನ ಪಡೆದವರು.

ಸರಿಯಾದ ಮತ್ತು ಒಂದು ತಪ್ಪಿನ ಉತ್ತರವನ್ನು ಕಳುಹಿಸಿದವರು ಯಾರೂ ಇಲ್ಲವಾದ್ದರಿಂದ ಎರಡು ತಪ್ಪಿನ ಉತ್ತರವನ್ನು ಕಳುಹಿಸಿದ ಆರು ಜನರಿಗೆ ತಲಾ ರೂ. 16—0—0ರಂತೆ ಕೊಟ್ಟಿರುತ್ತೇ. C. K. ರಾಮಚಂದ್ರ ರಾವ್, ಬೆಂಗಳೂರು. M. ಶ್ರೀನಿವಾಸ ರಾವ್, ಮೈಸೂರು. ಶ್ರೀ. ಶಕುಂತಳಾ ಬಾಯಿ, ತುಂಕೂರು, H. ಭಾಸ್ಕರಯ್ಯ, ಕೋಲಾರ. M. S. ನಾರಾಯಣ ರಾವ್, ದಾವಣಗೆರೆ. ಎಲ್ಲರಿಗಿಂತಲೂ ಹೆಚ್ಚಿಗೆ ಕೂಪನ್ನು (50) ಕಳುಹಿಸಿದ್ದ D. S. ಸಿದ್ದಬಸಪ್ಪ ದಾವಣಗೆರೆ, ಇವರಿಗೆ ಸ್ಪೆಷಲ್ ಬಹುಮಾನ ಕೊಡಲಾಗಿದೆ.

ಮೂರು ತಪ್ಪಿನ ಉತ್ತರವನ್ನು ಕಳುಹಿಸಿದ್ದ 12 ಜನರಿಗೆ ತಲಾ ರೂ. 4ರಂತೆ. B. ರಾಜಾರಾವ್, ಬೆಂಗಳೂರು. M. ರಾಮಯ್ಯ. ಶ್ರೀ. ಕಾವೇರಮ್ಮ, ಮೈಸೂರು. S. ಕೋದಂಡರಾಮಯ್ಯ, ಮಂಗಳೂರು. B. K. ಭರದ್ವಾಜ್, ಬಳ್ಳಾರಿ. ಶ್ರೀ. ಅಲಮೇಲಮ್ಮ, ಮದ್ರಾಸು. N K. ಶ್ರೀನಿವಾಸರಾವ್, ತಾಡಪತ್ರಿ. B. S. ಭಟ್ಟ, ಹಾವೇರಿ. S. ತಾಂಡವೇಶ್ವರ, ಚಿಕ್ಕಮಗಳೂರು M. ರಾಮಮೂರ್ತಿ, ಶಿವಮೊಗ್ಗ. S. ರಾಮಣ್ಣ. C. ಕೆಂಪಯ್ಯ, ಕಡೂರು.

ನಾಲ್ಕು ತಪ್ಪಿನ ಉತ್ತರವನ್ನು ಕಳುಹಿಸಿದ್ದ 32 ಜನರಿಗೆ ತಲಾ ರೂ. 1ರಂತೆ. P. ರಂಗಾಚಾರ್. T. U. ರಾಮದಾಸ್. G, T. ರಾಮಾನುಜ ಅಯ್ಯಂಗಾರ್. ಶ್ರೀ ರಾಜಮ್ಮ. S. ನರಸಿಂಹಯ್ಯ. B ರಾಜಣ್ಣ. ಶ್ರೀ ಕನ್ನಾಂಬ. M. ನರಸಿಂಹಮೂರ್ತಿ. S. ರಾಮಕೃಷ್ಣ, ಬೆಂಗಳೂರು. M. ಶ್ರೀಪತಿರಾವ್. S. ನರಹರಿ ರಾವ್. ಶ್ರೀ. ಕೃಷ್ಣವೇಣಿ. M. ರಾಜಾರಾವ್. C. K. ನಾಗರಾಜು. ಶ್ರೀ. ಶಾರದಮ್ಮ. M. ಸರೋಜಮ್ಮ. P. ಪಾರ್ಶ್ವನಾಥಯ್ಯ. N. ಶಿವರಾಮಯ್ಯ, ಮೈಸೂರು. B. ಸುಬ್ರಮಣ್ಯಂ, ಹರಿಹರಪುರ. A. ಅರಸಪ್ಪ, ಚಿಂತಾಮಣಿ. ಬಸವರಾಧ್ಯ, ಆದೋನಿ. B. ರುದ್ರಪ್ಪ, ಹುಬ್ಬಿ. N. ಹನುಮಂತರಾವ್, ಸಿರಸಿ. K. ಕೃಷ್ಣಪ್ಪ. S. ರಾಮಚಂದ್ರಯ್ಯ, ಶಿವಮೊಗ್ಗ. B. K. ನರಸಯ್ಯ, ಕೋಲಾರ. D. S. ಶಿವರಾಮಯ್ಯ, ಹುನುಗುಂದ. N. ಶ್ರೀಪತಿ ಅರಸೀಕೆರೆ. K. ರಾಮಚಂದ್ರಯ್ಯ, ಭದ್ರಾವತಿ. C. S. ನಾಗಭೂಷಣ ರಾವ್, ಮಂಗಳೂರು. ಶ್ರೀ. ಸುಬ್ಬಲಕ್ಷ್ಮಮ್ಮ, ಮದ್ರಾಸು. ಶ್ರೀ. U. ಸಾವಿತ್ರೀಬಾಯಿ, ಉಡುಪಿ.

ಮೇಲ್ಕಂಡ ಬಹುಮಾನವನ್ನು 18-9-40ರ ನಂತರ ರವಾನಿಸಲಾಗುತ್ತೆ. ಮ್ಯಾ. ಚಂ. ಸ್ಪ.

## ಯುರೋಪಿನ ಕಳ್ಳರೊಳಗೆ ಕಾದಾಟ !

(೨೨ನೇ ಪುಟದಿಂದ ಮುಂದರಿಸಿದ್ದು)

ಲ್ಪಡುತ್ತಿದೆ. ಹೋಲೆಂಡ್ ಮತ್ತು ಬೆಲ್ಜಿಯಮ್ ದೇಶಗಳು ಏಸ್ಯಾ ಮತ್ತು ಯುರೋಪಿನಲ್ಲಿ ವಸಾಹತುಗಳ ಮೇಲೆ ಅಧಿಕಾರನಡೆಸಿಕೊಂಡಿರಬೇಕೋ ಅಥವಾ ಅವುಗಳು ಜರ್ಮನಿಯ ಪ್ರಾಂತ್ಯಗಳಾಗಿ ಸುಮ್ಮನಿರಬೇಕೋ ಎಂಬುದು ಜಗತ್ಪ್ರಸಿದ್ಧ ವಿಷಯವಲ್ಲ. ಯುರೋಪಿಯದ ಅರೆನಾಗರಿಕ ಜನರು ಮತ್ತು ಬಲ್ಗೇರಿಯದ ಅರೆನಗ್ನ ಸ್ಥಿತಿಯವರು ಸೋವಿಯೆಟ್ ರಷ್ಯಕ್ಕೆ ಸೇರಬೇಕೋ ಯಾ ತಮ್ಮೊಳಗೆ ಸದಾ ಸರ್ವದಾ ಹೋರಾಡಿಕೊಂಡಿರಬೇಕೋ ಎಂಬುದು ಕೂಡಾ ಪ್ರಾಮುಖ್ಯ ಪ್ರಶ್ನೆಯಲ್ಲ. ಸ್ವಾತಂತ್ರ್ಯ, ನ್ಯಾಯ ಮತ್ತು ಪ್ರಜಾಸತ್ತೆಗಳ ವಿಷಯವು ಈಗಿನ ಪರಿಸ್ಥಿತಿಗೆ ಅನ್ವಯಿಸುವುದಿಲ್ಲ. ಬೆಲ್ಜಿಯನರಿಗೂ ಡಚ್ಚರಿಗೂ ಸ್ವಾತಂತ್ರ್ಯಬೇಕಾಗಿದ್ದರೆ ನೀಗ್ರೋ, ಕೊಂಗೋ, ಜಾವಾ, ಸುಮಾತ್ರಾ ದ್ವೀಪಗಳ ಜನರಿಗೂ ಬೇಕಾಗಿದೆ. ಬೆಲ್ಜಿಯಂ ಮತ್ತು ಹಾಲೆಂಡಿಗಾಗಿ ಕಣ್ಣೀರಿಳಿಸಿ, ನ್ಯಾಯನೀತಿ ಮತ್ತು ಪ್ರಜಾಸತ್ತೆ ಮೊದಲಾದುವುಗಳ ಕುರಿತು ಮಾತಾಡುವವರು ಅವರ ಕಾಲಡಿಯ ತುಳಿತಕ್ಕೆ ಸಿಲುಕಿ ಬಳಲಿ ಬೆಂಡಾಗಿ ಅಸಹಾಯ ಸ್ಥಿತಿಯಲ್ಲಿರುವವರ ವಿಷಯದಲ್ಲಿ ಕರುಣೆಯನ್ನು ತೋರಿಸದಿರುವುದೇಕೆ? ನ್ಯಾಯನೀತಿಗಳು ಬಿಳಿ ಜನರಿಗಲ್ಲದೆ ಕಪ್ಪು ಜನರಿಗನ್ವಯಿಸುವುದಿಲ್ಲವೆ?

### ಕಳ್ಳರ ಕಲಹ

ಯುರೋಪಿನ ಕುರಿತು ಸ್ವತಂತ್ರವಾಗಿ ಯೋಚಿಸಲೆಡೆಯಿರುವವರಿಗೆ ಈಗಿನ ಯುದ್ಧವು ವಿಶ್ವಸ್ವಾತಂತ್ರ್ಯಕ್ಕಾಗಿ, ಪ್ರಜಾಸತ್ತೆಗಾಗಿ ನಡೆಸಲ್ಪಡುವ ಯುದ್ಧವಲ್ಲ, ಆದರೆ ಹಲವಾರು ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕದ್ದ ಕಳ್ಳರೊಳಗೆ ಯಜಮಾನಿಕೆಗಾಗಿ ನಡೆಯುತ್ತಿರುವ ಕಲಹವೆಂದು ಹೊಳೆಯುವ ವಿಷಯದಲ್ಲಿ ಸಂಶಯವಿಲ್ಲ. ಇತ್ತೀಚೆಗೆ ಲಾರ್ಡ್ ಹೆಲಿಫೇಕ್ಸ್‌ರವರು ಈಗಿನ ಯುದ್ಧವ ಕುರಿತು ಮಾತಾಡುತ್ತಾ ಅದು ಕ್ರಿಸ್ತೀಯರು ವನ್ಯ ಜನರೊಡನೆ ಮಾಡುತ್ತಿರುವ ಯುದ್ಧವೆಂದು ಹೇಳಿದ್ದಾರೆ. ಇದೀಗ ಪರಿಶುದ್ಧ ಸುಳ್ಳು. ನಿಜಸ್ಥಿತಿಯನ್ನರಿತವರು ಈಸುಳ್ಳನ್ನು ಕೇಳಿದೊಡನೆ ಗಕ್ಕೆಂದು ನಗದಿರಲಾರರು. ಈ ಕ್ರಿಸ್ತೀಯ ರಾಷ್ಟ್ರಗಳು ಏಸ್ಯಾ ಮತ್ತು ಆಫ್ರಿಕದಲ್ಲಿ ತಮ್ಮ ಕ್ರಿಸ್ತೀಯ ತತ್ತ್ವಗಳನ್ನು ಹೇಗೆ ಜಾರಿಗೆ ತಂದಿದ್ದಾವೆಂದು ಸ್ಪಷ್ಟವಾಗುತ್ತದೆ. ಬೋಂಬು, ಟ್ಯಾಂಕುಗಳ ಸಹಾಯದಿಂದ ತನ್ನ ತತ್ತ್ವಗಳನ್ನು ಪಾಲಿಸುವ ಕ್ರಿಸ್ತೀಯತೆಯೂ ಒಂದು ಕ್ರಿಸ್ತೀಯತೆಯೆ?



ಭಾರತದ ಮಾತೆತ್ತ ಬೇಡಿ, ನಾವು ಹೋರಾಡುವುದು ಸತ್ಯ, ನೀತಿ ಮತ್ತು ಪ್ರಜಾಸತ್ತೆಗಳ ರಕ್ಷಣೆಗೆನ್ನುವ

**ಸತ್ಯವಾದಿ ಚರ್ಚಿಲ್ಲರು**

### ನಮ್ಮ ಕೊರಳಿನ ಶೃಂಖಲೆ!

ಈಗಿನ ಐರೋಪ್ಯ ಯುದ್ಧವು ನಮಗೆ ಪ್ರಾಮುಖ್ಯವಾಗಿರುವುದು ಯುರೋಪಿನ ಒಳ್ಳೆಯ ಜನರ ಉದಾತ್ತ ತತ್ತ್ವಗಳಿಗೆ ಹಾನಿಯಾಗುತ್ತದೆಂದಲ್ಲ; ಪರಂತು ನಮ್ಮ ಕೊರಳನ್ನು ಬಿಗಿದಿರುವ ದಾಸ್ಯದ ಶೃಂಖಲೆಯು ಆ ಐರೋಪ್ಯ ಕಳ್ಳರ ಕೈಯ್ಯಲ್ಲಿದೆ. ಈಗ ರಾವಣ ಸಂನ್ಯಾಸಿಗಳು ನ್ಯಾಯನೀತಿಗಳ ಕುರಿತು ಮಾಡುತ್ತಿರುವ ಭಾಷಣಗಳನ್ನು ನಾವು ನಂಬಬೇಕಾದರೆ ಅವರಾಧೀನವಿರುವ ದೇಶಗಳಿಗೆ ಸ್ವಾತಂತ್ರ್ಯ ದೊರಕಬೇಕು. ಅವರ ಯಥಾರ್ಥತೆಯನ್ನು ಒರೆಗಲ್ಲಿಗೆ ಹಚ್ಚಿ ನೋಡಲು ಏಸ್ಯಾಖಂಡದಲ್ಲಿರುವ ವಸಾಹತುಗಳಿಗೆ ಸ್ವಾತಂತ್ರ್ಯ ಕೊಡುವ ಒಂದು ನಿದರ್ಶನವೇ ಸಾಕಾಗಿದೆ.

### ಮಹತ್ವದ ಪ್ರಶ್ನೆ

ಐರೋಪ್ಯ ಯುದ್ಧಕ್ಕಿಂತಲೂ ನಮಗೆ ಬಹಳ ಪ್ರಾಮುಖ್ಯವಾಗಿರುವ ವಿಚಾರವೆಂದರೆ ಚೀನ ಮತ್ತು ಭಾರತ ದೇಶಗಳ ಸ್ವಾತಂತ್ರ್ಯ ಚಳವಳ. ಮಾನವ ಜಾತಿಯ ಐದಂಶದಲ್ಲಿ ಎರಡಂಶದಷ್ಟು ಜನರು ಇವೆರಡು ಖಂಡಗಳಲ್ಲಿ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ. ಈ ಜನರ ವಿಷಯದಲ್ಲಿ ಐರೋಪ್ಯ ರಾಜಕಾರಣಿಗಳ ಕಣ್ಣು ಕುರುಡಾಗಿದೆ, ಕಿವಿ ಕಿವುಡಾಗಿದೆ!

## ಒಂದು ಹರಟೆ

# ಭವಿಷ್ಯದ ಬದನೇಕಾಯಿ!

ಜಗತ್ತಿನ ಭವಿಷ್ಯವೇ ನಿರಾಶಾ ಜನಕವಾಗಿರುವಾಗ ಪ್ರತಿಯೊಬ್ಬರೂ ತಮ್ಮ ಭವಿಷ್ಯದ ಕುರಿತು ಯೋಚಿಸುವುದು ಸ್ವಾಭಾವಿಕವೆನ್ನಿ. ಇಂದಿನಷ್ಟು ಕಠಿನ ಕಾಲವು ಇನ್ನೆಂದೂ ಬರುವಂತಿಲ್ಲ; ಇಲ್ಲವೆ ಮುಂದೆ ನಮ್ಮೆಲ್ಲರ ಪಾಡು ಅತ್ಯಂತ ಕಠಿನವಾಗಲಿದೆಯೆಂಬ ಮಾತು ಎಲ್ಲೆಡೆಗಳಲ್ಲಿಯೂ ಕೇಳಿಬರುತ್ತಿರುವ ಈ ಕಾಲದಲ್ಲಿ ಒಂದು ವಿಧದ ಮಾನಸಿಕ ಅಸ್ವಸ್ಥವು ಜನರಲ್ಲಿರುವುದರಲ್ಲಿ ಆಶ್ಚರ್ಯವಿಲ್ಲ. ನಾನಿದನ್ನೆಲ್ಲಾ ಬರೆಯುತ್ತಿರುವುದೇಕೆ? ನಾನೂ ಆ ಭವಿಷ್ಯದ ಅಂಧಕಾರಮಯ ಗುಹೆಯೊಳಗೆ ಪ್ರವೇಶಿಸುವುದರಲ್ಲಿದ್ದೇನೆ. ನನ್ನ ಭವಿಷ್ಯವೇನು? ನನ್ನ ಕುಟುಂಬದ ಭವಿಷ್ಯ ಹೇಗಾಗಬಹುದು. ನನ್ನ ದೇಶ, ನನ್ನ ಭೂಖಂಡ, ಹೆಚ್ಚೇಕೆ? ಪ್ರಪಂಚದ ಭವಿಷ್ಯವೇನಾಗಬಹುದು?

ಒಂದು ಪ್ರಶ್ನೆಯನ್ನು ಸರಿಯಾಗಿ ಕೇಳಲರಿಯುವಷ್ಟು ಶಕ್ತಿಯು ಒಬ್ಬನಲ್ಲಿದ್ದರೆ ಅವನು ಆ ಪ್ರಶ್ನೆಯ ಉತ್ತರವನ್ನು ಕೆಲಮಟ್ಟಿಗೆ ತಿಳಿದಂತೆಯೆ ಎಂದು ಯಾರೋ ಒಬ್ಬ ನಿರುದ್ಯೋಗೀ ಮಾನಸಿಕ ತಜ್ಞನು ಹೇಳಿದ್ದಾನಂತೆ. ಆದರೆ ಈ ಭಾವನೆಯು ಎಲ್ಲ ವಿಷಯಗಳಿಗೂ ಅನ್ವಯಿಸುವುದಿಲ್ಲ. ಉದಾಹರಣೆಗಾಗಿ ನನ್ನ ಭವಿಷ್ಯ ಹೇಗಿರಬಹುದು ಎಂದು ನಾನು ಕೆಳಬಲ್ಲೆನಾದರೆ ನನಗೆ ನನ್ನ ಭವಿಷ್ಯವು ಹೇಗಿದೆಯೆಂದು ಸ್ವಲ್ಪ ಮಟ್ಟಿಗೂ ತಿಳಿದಿಲ್ಲ. ಹಾಗಾದರೆ ಈ ಪ್ರಶ್ನೆಯನ್ನು ಕೇಳುವುದಾದರೂ ಯಾರೊಡನೆ?

ಪರಮಾತ್ಮ ಸೃಷ್ಟಿಸಿರುವನೆಂದು ನಾವು ನಂಬುವಂತಹ ಈ ಪ್ರಪಂಚದಲ್ಲಿ ಪ್ರತಿಯೊಂದು ವಿಷಯದ ಕುರಿತು ತಜ್ಞರಂತೆ ನಟಿಸುವ ಪುಣ್ಯಾತ್ಮರೂ ಇದ್ದೇ ಇದ್ದಾರೆನ್ನಿ. ಸಾಲದುದಕ್ಕೆ ಕೆಲಸವಿಲ್ಲದಿದ್ದ ಪುರಾತನ ಜನರು ನಿಸರ್ಗದ ರೀತಿನೀತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಎಂದೋ ಯಾಕೋ ಬರೆದಿಟ್ಟ ಜ್ಯೋತಿಶ್ಶಾಸ್ತ್ರವೂ ಇದೆಯೆನ್ನಿ.

ಯುದ್ಧ ಪ್ರಾರಂಭಿಸಿದಂದಿನಿಂದ ಜಗತ್ತಿನಲ್ಲಿ ಹೆಚ್ಚಿರುವ ವಸ್ತುವಾವುದೆಂದು ಯಾರಾದರೂ ಕೇಳುವದಿದ್ದರೆ "ಜ್ಯೋತಿಷಿ"ಗಳು ಎಂದು ಹೇಳಲೇ ಬೇಕಾಗುತ್ತಿದೆ. ಇದು ಅಕ್ಷರಶಃ ನಿಜವೆನ್ನಿ. ಯುದ್ಧದಿಂದಾಗಿ ಸಾಧನಗಳ ಕ್ರಯ ಹೆಚ್ಚಿದಂತೆಯೇ ಸ್ವಾಭಾವಿಕವಾಗಿ ಜೇಬಿನ ಭಾರವೂ ಕಡಿಮೆಯಾಗುತ್ತದೆ. ಅದನ್ನು ಸರಿಪಡಿಸಬೇಕಾದರೆ ಅದಕ್ಕೊಂದು ದಾರಿ ಬೇಕೇ ಬೇಕು. ಯಾವ ಗತಿಯೂ ಇಲ್ಲದೆ ಸಿಕ್ಕಸಿಕ್ಕಲ್ಲಿ ಅಲೆದು ಬಸವಳಿದವರಿಗೆ ಕೆಲಸವನ್ನು ಒದಗಿಸುವಂತಹ ವಿಜ್ಞಾನವೊಂದು ಜಗತ್ತಿನಲ್ಲಿರುವುದಿದ್ದರೆ ಅದೇ 'ಜ್ಯೋತಿಷ್ಯ'. ಹೀಗೆಂದೊಡನೆಯೇ ಇದೊಂದು ಹರಟೆಯೆಂದು ಭಾವಿಸಿ ಈ ವಿಷಯವನ್ನು ತಿಳಿಯುವುದರಲ್ಲಿ ತಮಗಿರುವ ಆಸಕ್ತಿಯನ್ನು ಕಡಿಮೆಮಾಡಬೇಡಿ. ಭವಿಷ್ಯವಾಡುವ ವ್ಯಾಪಾರದಿಂದ ಮಾನವ ಜಾತಿಗೆ ಎಂತಹ ಪರಿಣಾಮವಾಗಿದೆ, ಅದರಿಂದಾಗಿ ಎಂತೆಂತಹ ಘಟನೆಗಳು ನಡೆದಿವೆಯೆಂಬುದನ್ನು ನೀವು ತಿಳಿಯಲೆತ್ನಿಸಿದಿರೆಂದರೆ ನಿಮ್ಮ ಅನಾಪತ್ತಿಯು ಅಳಿದು ಹೋಗದಿರಲಾರದು.

ಪತ್ರಿಕೆಯ ಪುಟಗಳನ್ನು ನೋಡಿರಿ. ಬೀದಿಯ ಮೂಲೆಗಳಲ್ಲಿ ಹುಡುಕಿರಿ, ಹಳ್ಳಿಪಳ್ಳಿಗಳಿಗೊಮ್ಮೊಮ್ಮೆ ಸಂಚರಿಸಿರಿ. ಈ ಸ್ಥಳಗಳಲ್ಲೆಲ್ಲಾ ಹಸ್ತಸಾಮುದ್ರಿಕ ಪುಸ್ತಕಗಳ ಜಾಹಿರಾತಾಗಲೀ, ಕೈನೋಡುವ ಮೇಧಾವಿಗಳಾಗಲಿ ತಮಗೆ ಕಾಣಸಿಗದಿರಲಿಕ್ಕಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ಈ ಭವಿಷ್ಯವಾಡುವವರು ಸರ್ವಾಂತರ್ಯಾಮಿಗಳಾಗಿದ್ದಾರೆ. ಪರಮಾತ್ಮನೇ ಜಗತ್ತಿನ ಲಯಕ್ಕಾಗಿ ಈ ಅವತಾರವನ್ನು ಧರಿಸಿ ಬಂದಿರುವನೋ ಎಂಬ ಶಂಕೆಗೆ ಎಡೆಗೊಟ್ಟರೂ ನಮಗೆ ಕುಂಭಿನೀ ನರಕದ ಗತಿಯಾಗಲಾರದೆಂದು ನನ್ನೆಣಿಕೆ.

ಈ ಭವಿಷ್ಯವಾಚಕರು ಮಾನವ ಜಾತಿಯ ಭವಿಷ್ಯದಲ್ಲೊಂದು ವಿಧದ ಮಾರ್ಪಾಟನ್ನು ಮಾಡುತ್ತಿದ್ದಾರೆಂದು ಹೇಳಿದೆನಲ್ಲಾ. ಹೇಗೆಂದು ತಿಳಿಯಲು ನೀವಾಶಿಸಬಹುದು. ಹೇಳುತ್ತೇನೆ—

ಳಿ, ಜಗತ್ತಿನಲ್ಲಿರುವ ಪ್ರತಿಯೊಂದು ಪ್ರಾಣಿಗೂ ಪ್ರತಿನಿಮಿಷವೂ ತಾನು ಇದ್ದುದಕ್ಕಿಂತ ಉತ್ತಮ ಸ್ಥಿತಿಯನ್ನೈದಬೇಕೆಂಬ ಆಶೆಯು ಇದ್ದೇ ಇರುತ್ತದೆ. ಮಂಗನಿಗೆ ಮಾನವನಾಗಬೇಕೆಂಬ ಆಶೆ, ಗಂಡಸಿಗೆ ಹೆಂಗಸಾಗಬೇಕೆಂಬ ಆತುರ, ಗೋಪಾಲನಿಗೆ ಭೂಪಾಲನಾಗಬೇಕೆಂಬ ಲವಲವಿಕೆ ಎಲ್ಲೆಲ್ಲಿಗಳಲ್ಲಿಯೂ ಇದ್ದೇ ಇದೆ ಎನ್ನಿ. ಮಾನವನ ಸ್ವಭಾವವೇ ಹೀಗಾಗಿರುವಾಗ ಅವನು ಆ ಮಹತ್ವಾಕಾಂಕ್ಷೆಯ ಮೆಟ್ಟಿಲನ್ನೇರಲು ತನ್ನ ಭವಿಷ್ಯವನ್ನು ತಿಳಿಯಲಾಶಿಸುತ್ತಾನೆ. ಈ ಹಕ್ಕನ್ನು ಅವನಿಂದ ಸೆಳೆದೊಯ್ಯಲು ಯಾರಿಗೂ ಶಕ್ತಿಯಿಲ್ಲ. ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕೆಂದು ಪ್ರತಿಯೊಬ್ಬರೂ ಭಾವಿಸುತ್ತಾರೆ. ಈ ಆಶೆಯನ್ನು ಈಡೇರಿಸುವುದಕ್ಕಾಗಿಯೇ ಎಂಬಂತೆ ಜನಜೀವನದ ದರ್ಪಣದಂತಿರುವ ಪತ್ರಿಕೆಗಳು ಯುದ್ಧದ ದೆಸೆಯಿಂದಾಗಿ ಕಾಗದದ ಕ್ರಯವೇರಿದ್ದರೂ ವಾರದ ಭವಿಷ್ಯಕ್ಕಾಗಿ ಮೀಸಲಾಗಿರಿಸುವ ಪುಟಸಂಖ್ಯೆಗಳನ್ನು ಕಡಿಮೆಮಾಡುವ ಅಲ್ಪಸಾಹಸಕ್ಕೆ ಕೈಹಾಕದಿರುವುದು ಮಾನವಜಾತಿಯ ಪುಣ್ಯವೆಂದರೆ ಅಲ್ಲವೆನ್ನುವವರಾರಾದರೂ ಇರುವರೆ? ಪತ್ರಿಕೆಗಳ ಸುದ್ದಿ ಮಾತಾಡುವಾಗ ಒಂದು ಸೂಚನೆಯನ್ನು ಕೊಟ್ಟುಬಿಡೋಣವೆಂಬ ಸ್ಫೂರ್ತಿಯು ಅದೇಕೋ ನನ್ನನ್ನು ಬಾಧಿಸತೊಡಗಿದೆ. ಭವಿಷ್ಯಕ್ಕಾಗಿಯೇ ಒಂದು ವಾರಪತ್ರಿಕೆಯನ್ನು ಯಾವನಾದರೊಬ್ಬ ಜ್ಯೋತಿಷಿಯು ಹೊರಡಿಸಿದರೆ ಹಣಮಾಡಲಿಕ್ಕೇನಾದರೂ ತೊಂದರೆಯಾಗಬಹುದೆ? ಇರಲಿ. ಈ ವಿಚಾರಕ್ಕೂ ಬದನೇಕಾಯಿಗೂ ಯಾವ ಸಂಬಂಧವೂ ಇಲ್ಲ.

ಭವಿಷ್ಯವು ಅನುದಿನದ ಜೀವನದಲ್ಲಿ ಎಂತಹ ಪರಿಣಾಮವನ್ನುಂಟುಮಾಡುತ್ತದೆಂಬುದಕ್ಕೆ ನಿಮಗೊಂದು ಉದಾಹರಣೆಯನ್ನು ಕೊಟ್ಟು ವಿವರಣೆಯ ಬಲೆಯನ್ನು ನಿಮ್ಮ ಮೇಲೆ ಬೀಸುವ ಹೊಣೆಗಾರಿಕೆಯಿಂದ ನಾನು ತಪ್ಪಿಸಿಕೊಳ್ಳುತ್ತೇನೆ. ನನಗೊಬ್ಬ ಮಿತ್ರನಿದ್ದಾನೆ. ಅರೆಬೆಂದ ನಾಗರಿಕ ಯುವಕನವನು. ಅದೇಕೋ ಅವನಿಗೆ ಭವಿಷ್ಯದಲ್ಲಿ ಪ್ರಚಂಡ ವಿಶ್ವಾಸ. ಸುಪ್ರಸಿದ್ಧ ಜ್ಯೋತಿಷಿಗಳೊಬ್ಬರನ್ನು ಕಂಡು ಸಾಲ ಮಾಡಿ ತಂದ ಹತ್ತಾರು ರೂಪಾಯಿಗಳನ್ನು ಅವರಿಗೆ ಕೊಟ್ಟು ಆ ಮಹಾಶಯರು ನೂರಾರು ಪುಟಗಳನ್ನೊಳಗೊಂಡ ಪುಸ್ತಕವೊಂದರಲ್ಲಿ ತನ್ನ ಭವಿಷ್ಯವನ್ನು ಬರೆಸಿಕೊಂಡಿದ್ದಾನೆ. ಪಾಪ, ಆ ಪುಸ್ತಕವು ಅವನ ಕೈಸೇರಿದಂದಿನಿಂದ ಅವನು ತನ್ನ ಬುದ್ಧಿ ಶಕ್ತಿಯನ್ನು ಉಪಯೋಗಿಸುವುದನ್ನೇ ಬಿಟ್ಟುಬಿಟ್ಟಿರುತ್ತಾನೆ. ಭವಿಷ್ಯದ ಪುಸ್ತಕವೇ ಅವನ ಸರ್ವಸ್ವ. ಅದರಲ್ಲಿ ಬರೆದಂತೆಯೇ ಅವನ ಜೀವನದ ರೀತಿನೀತಿಗಳು ಸಾಗಬೇಕು. ಗುರುವಾರ ದಿವಸ ಮುಟ್ಟಿದ ಕೆಲಸಗಳ ಪರಿಣಾಮವು ನಿಮಗೆ ಅಪಾಯಕರವಾಗಬಹುದೆಂದು ಆ 'ಭವಿಷ್ಯೋಪನಿಷತ್ತಿ'ನಲ್ಲಿ ಬರೆದಿರುವುದರಿಂದ ಅವನು ಆ ದಿವಸ ಯಾವುದನ್ನು ಮಾಡಲಾರ. ಕ್ಷೌರ ಮಾಡಿಸಲಿಕ್ಕೆಂದು ಕ್ಷೌರ ಕತ್ತಿಯನ್ನು ತೆಗೆದರೆ ಕೊರಳು ಕೊಯ್ದು ಹೋಗಬಹುದೇ ಎಂಬ ಹೆದರಿಕೆಯಿಂದಾಗಿ ಅಂದು ಕ್ಷೌರವೇ ಇಲ್ಲ. ಸಾಯಂಕಾಲ ತಿರುಗಾಡಲಿಕ್ಕೆ ಹೋಗಲು ಹೊರಟರೆ ಮೋಟಾರು ಬಂಡಿಯಡಿಗೆ ಬಿದ್ದು ಸತ್ತು ಹೋದೇನೆಂಬ ಭೀತಿಯಿಂದ ಮನೆಯೊಳಗೇ ಅಂದು ಬಂಧನ. ಕಾಫಿ ಕುಡಿಯೋಣವೆಂದರೆ ಎಲ್ಲಾದರೂ ಬಿಸಿನೀರಿಗೆ ಚೇಳು ಬಿದ್ದು ನೀರು ವಿಷಮಯವಾಗಿದ್ದರೆ ಪ್ರಾಣಕ್ಕೆ ಸಂಚಕಾರವೆಂದು ಕಾಫಿಗೂ ಆ ದಿವಸ 'ಚಕ್ಕರ್'. ಹೌದು ಭವಿಷ್ಯವೆಂದರೆ ಅವನಿಗೆ ಅಷ್ಟು ವಿಶ್ವಾಸ. ಶೈತ್ಯವಾಗಿ ಸಾಯಬಹುದೆಂದು ಮೀಯಲಾರ, ಹೊಟ್ಟೆ ತುಂಬಾ ಉಂಡರೆ ಅವಸ್ಥೆ ಕಠಿಣವಾದೀತೆಂದು ಉಣ್ಣಲಾರ, ಹೊರಗೆ ಹೋಗಲಾರ. ಕಾರಣ?- ಪ್ರಾರಂಭಿಸಿದ ಕೆಲಸಗಳೆಲ್ಲಾ ಅಪಾಯದಲ್ಲಿ ಕೊನೆಗೊಳ್ಳುವವೆಂಬ ಭೀತಿಯಿಂದಾಗಿ.

ಅವನ ಕುರಿತು ನಿಜವಿದ್ದುದಕ್ಕೆ ಬರೆದರೆ ಬೇಕೆಂದೇ ಉತ್ಪ್ರೇಕ್ಷೆ ಮಾಡಿ ಬರೆದಿದ್ದಾನೆಂದು ನೀವು ಭಾವಿಸುವಿರೆಂಬ ಭೀತಿಯಿಂದ ನಾನು ಹೆಚ್ಚೇನೂ ಬರೆಯಲಾರೆ. ಆದರೆ ನಾನು ಬರೆಯುವುದೆಲ್ಲಾ ನಿಜ. ಈ ದಿನ ಇವನು ತನ್ನ ಊರು ಬಿಟ್ಟು ಓಡಿ ಹೋಗುವನೆಂದು ಆ ಪುಣ್ಯಾತ್ಮ ಬರೆದದ್ದರಿಂದ ಅವನು

*Clean and neat Brahmin preparations!*

**For daily use during your meals**

We prepare and sell best Mango pickles, Udipi saar powder Colambo powder, Masala powder, Vangibath powder, Chutney powder Ananda powder, Shyamige, Happala, Pappada, Sugandhi kashaya powder. (can be used instead of coffee) All healthy and tasty items that will make your meal sumptuous.

**All orders must be accompanied with 50% advance**
**Parcels are sent by V. P. and Railway.**

*For further particulars enclose one anna stamp and write to:-*

**P. R. ACHARYA,** *Proprietor.*

**THE KARNATAK CONDIMENTS STORES**

**UDIPI, S. INDIA.**

ಊರು ಬಿಟ್ಟು ಓಡಿಹೋದ. ಹೋಗದೆ ಇರುವುದಾದರೂ ಹೇಗೆ? ಅವನ ಜೀವನವೆಲ್ಲಾ ಆ ಜ್ಯೋತಿಷಿಯು ಬರೆದ ಮೇಲೆ ಹೊಂದಿಕೊಂಡಿದೆ. ನೀವು ಏನೇ ಹೇಳಿರಿ, ಅದವನ ಹಣೆ ಬರಹ. ಹೌದು, ಬ್ರಹ್ಮನ ಬರೆಹವದು. ಅದನ್ನು ಅವನು ಮೀರಲಾರ. ಮುಂದಿನ ಭವಿಷ್ಯವನ್ನು ತಿಳಿದಿದ್ದ ಅವನು ಬ್ರಹ್ಮ ಲಿಪಿ ತಕ್ಕನುಸಾರವಾಗಿಯೇ ನಡೆದ. ಅವನ ಚಿಂತನಾ ಶಕ್ತಿಯು ಆ ದಾರಿಯಲ್ಲೇ ನಡೆಯಿತು. ಪಾಪ, ಭವಿಷ್ಯದ ಬದನೇ ಕಾಯಿಯಲ್ಲಿ ನಂಬದ ಆ ವ್ಯಕ್ತಿ ಇಂದು ಸುಟ್ಟ ಬದನೇಕಾಯಿಯಂತಾಗಿದ್ದಾನೆ.

ಈ ಕಥೆಯಂತಿರಲಿ. ಭವಿಷ್ಯವೆಲ್ಲಾ ಸುಳ್ಳೆಂದು ನಾನನ್ನುವುದಿಲ್ಲ. ಆದರೆ ಆ ಭವಿಷ್ಯವಾಡುವ ಶಾಸ್ತ್ರವನ್ನು ಯಾರು ಬರೆದರು, ಹೇಗೆ ಬರೆದರು ಎಂಬುದನ್ನಾದರೂ ಕೊಂಚ ತಿಳಿಯಲೆತ್ನಿಸೋಣ. ಹೀಗೆ ಬಹುಕಾಲದ ಹಿಂದೆ, ಶತಮಾನ ಶತಮಾನಗಳ ಹಿಂದೆ, ಕೇವಲ ಚಿಂತಿಸುವುದನ್ನೇ ತಮ್ಮ ಕುಲದ ವೃತ್ತಿಯೆಂದು ತಿಳಿದುಕೊಂಡಿದ್ದ ಒಂದು ವರ್ಗದ ಜನರು ಈ ಭವಿಷ್ಯವಾಡುವ ವಿಜ್ಞಾನವನ್ನು ರಚಿಸಿದರೆಂದು ನಂಬೋಣ. ಆ ಮಹನೀಯರು ಅಂದಿನ ಕಾಲದವರ ಅಂಗೈಗಳಲ್ಲಿರುವ ವಿಧವಿಧದ ರೇಖೆಗಳನ್ನು ನೋಡಿ, ಅವರ ಜೀವನದ ಏರಿಳಿತಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿಶೇಷ ಪರಿಶ್ರಮದಿಂದ ಈ ವಿಜ್ಞಾನವನ್ನು ರಚಿಸಿರಬಹುದೆನ್ನಿ. ಆದರೆ ಆ ಶಾಸ್ತ್ರದ ಆಧಾರದ ಮೇಲೆ ಈ ಕಾಲದಲ್ಲಿ ಈಗಿನ ಜನರಿಗಾಗುವ ಭವಿಷ್ಯಗಳನ್ನು ಹೇಳುವುದು ಶಕ್ಯವೆ? ಮನುಷ್ಯನು ಕಾಲಹೋದಂತೆಯೆ ವಿವಿಧಾವಸ್ಥೆಗಳನ್ನು ಹೊಂದಿದ್ದಾನೆ, ಅವನ ಮೈಗಟ್ಟು, ಅವನ ರೂಪು, ಅವನ ರೀತಿನೀತಿ, ನಂಬಿಕೆ, ವಾತಾವರಣ ಮೊದಲಾದುವುಗಳೆಲ್ಲ ಬದಲಾಗಿವೆ. ಪರಿಸ್ಥಿತಿಯು ಹೀಗಿರುವುದರಿಂದ ಭವಿಷ್ಯವಾಡುವವರು ಈ ಕಲೆಯಲ್ಲಿ ಎಷ್ಟೇ ನುರಿತಿರಲಿ ಅವನು ನಿಜವಾದ ಭವಿಷ್ಯವನ್ನು ಹೇಳಲಾರ. ಕಾರಣ ಅವನ ಅಂದಿನ ಶಾಸ್ತ್ರಕ್ಕೂ ಇಂದಿನ ಪರಿಸ್ಥಿತಿಗೂ ಅಜಗಜಾಂತರವಿದೆ. ಈ ವಿಷಯವನ್ನು ಭವಿಷ್ಯದ ಒದರಾವಣೆಯಲ್ಲಿ ಮಹತ್ವದ ವಿಶ್ವಾಸವನ್ನಿಟ್ಟಿರುವ ಜನರು ಯೋಚಿಸಬೇಕು. ಭವಿಷ್ಯವನ್ನು ಯಾರಾದರೂ ಬರೆದಿಟ್ಟಿಲ್ಲ. ಮುಂದಿನ ಘಟನೆಗಳು ಹೀಗೆಯೇ ಆಗುವವೆಂದು ಅಂಗೈಯಲ್ಲಿರುವ ರೇಖೆಗಳಲ್ಲಾಗಲೀ ಅಥವಾ ಇನ್ನಿತರ ವಿಷಯಗಳಲ್ಲಾಗಲೀ ಇರಲಾರದೆಂದು ಏಕೆ ಭಾವಿಸಬಾರದು. ಒಬ್ಬ ನನ್ನ ಭವಿಷ್ಯವನ್ನು ಬರೆದಿಟ್ಟು ಅವನಿಗದನ್ನು ತಿಳಿಸದಿದ್ದರೆ, ಅವನು ತನ್ನಿಚ್ಛೆಯಂತೆ ನಡೆಯುತ್ತಾ ಹೋದರೆ ಭವಿಷ್ಯದ ಬದನೇ ಕಾಯಿಗೂ ಅವನ ಭಾವೀ ಜೀವನದ ರೀತಿಗೂ ತುಂಬಾ ವ್ಯತ್ಯಾಸವಾಗಲಿದೆ. ಬಹು ಪುರಾತನ ಕಾಲದಿಂದ ವಿಧಿ, ದೈವ, ಅದೃಷ್ಟ ಎಂಬಿವೇ ಮೊದಲಾದ ಕುರುಡು ವಿಶ್ವಾಸಗಳಲ್ಲಿ ನಂಬಿಕೆಯನ್ನಿಟ್ಟಿರುವ ನಮ್ಮ ಹಿರಿಯರಿಂದಾಗಿ ನಾವು ಕೂಡಾ ಅದೇ ದಾರಿಯಲ್ಲಿ ಏಕೋ ಎಲ್ಲಿಗೋ ನಡೆಯುತ್ತಿದ್ದೇವೆ. ಅಂತಹ ವಿಷಯಗಳಲ್ಲಿ ವಿಶ್ವಾಸವನ್ನಿಡದೆ ಸ್ವತಂತ್ರವಾಗಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಯೋಚಿಸಿದರೆ ಅವನ ಧೈರ್ಯ, ವಿಶ್ವಾಸ, ಸಾಮರ್ಥ್ಯ ಮೊದಲಾದುವುಗಳಿಗನುಗುಣವಾದ ಭವಿಷ್ಯವನ್ನು ಕಟ್ಟಬಹುದು. ನಮ್ಮ ಭವಿಷ್ಯವನ್ನು ಬೇರಾರೂ ಮಾಡಿದವರಿಲ್ಲ. ಅವನ್ನು ನಿರ್ಮಿಸುವವರು ನಾವು. ನಿಸರ್ಗದ ನಿಯಮಕ್ಕನುಸಾರವಾಗಿ ಎಷ್ಟರವರೆಗೆ ಜೀವಿಯು ಉಸಿರಾಡಬಲ್ಲನೋ ಅಷ್ಟರ ವರೆಗೆ ಅದು ಅದರ ಭವಿಷ್ಯವನ್ನು ಸ್ವತಃ ನಿರ್ಮಿಸುತ್ತದೆ.

ಇಂದಿನ ವಾರದ ಭವಿಷ್ಯ, ಸಾಮುದ್ರಿಕ ಶಾಸ್ತ್ರ ಎಂಬಿವೇ ಮೊದಲಾದುವುಗಳ ಹೆಸರಲ್ಲಿ ಉದರ ನಿರ್ವಹಣಕ್ಕಾಗಿ ವಿಧವಿಧದ ವೇಷಗಳನ್ನು ಧರಿಸುವ ಜನರು ಎಷ್ಟೋ ಉಜ್ವಲ ಜೀವನಗಳನ್ನು ಹಾಳುಗೈಯುತ್ತಾರೆ. ಧೀರೋದಾತ್ತ ಕೆಲಸಗಳನ್ನು ಮಾಡುವವರನ್ನು ಅದೃಷ್ಟವೆಂಬ ಬಲೆಯಲ್ಲಿ ಸಿಲುಕಿಸಿ ನಿರ್ವೀರ್ಯರನ್ನಾಗಿ ಮಾಡುತ್ತಾರೆ. ಆದುದರಿಂದ ಇಷ್ಟೊಂದು ಸುಂದರವಾದ ಜೀವನವನ್ನು ಸಂಶಯ ಭಯಗಳ ದಾರಿಯಲ್ಲೊಯ್ಯದೆ ಧೀರರ ದಾರಿಯಲ್ಲೊಯ್ಯುವುದು ಬುದ್ಧಿವಂತರ ಲಕ್ಷಣ. ಭವಿಷ್ಯವು ಯಾರಿಂದಲೂ ಬರೆಯಲ್ಪಡಲಿಲ್ಲ. ನಮ್ಮ ಭವಿಷ್ಯವನ್ನು ನಿರ್ಮಿಸಲು ನಮಗಲ್ಲದೆ ಬೇರಾರಿಗೂ ಶಕ್ತಿಯಿಲ್ಲ. ದೃಢ ಮನಸ್ಸು, ಹಿಡಿದ ಕೆಲಸವನ್ನು ಮುಂದರಿಸುವ ಬುದ್ಧಿಯಿದ್ದರೆ ಏನನ್ನೂ ಮಾಡಬಹುದು, ನಮ್ಮನ್ನು ಬಾಧಿಸುವ ಶನಿಗಳೆಂದರೆ ಈ ಭವಿಷ್ಯಹೇಳುವವರು. ಈ ಶನಿಗಳಿಂದ ದೂರವಾದರೆ ಮಾನವ ಜಾತಿಗೆ ಸುಖವಾಗಬಹುದು.

**ನಿಮ್ಮ ಜಾಹೀರಾತವನ್ನು
ಅಂತರಂಗದಲ್ಲಿ
ಕೊಡಿರಿ.**

# ನಗುವವರಿಗೆ -

●

ಮದ್ಯನಿಷೇಧ ಸಭೆಯೊಂದರಲ್ಲಿ ಭಾಷಣಗಾರನೊಬ್ಬನು ಮದ್ಯ ಸೇವಿಸದಿರುವುದರಿಂದ ಅವನ ಜೀವನವು ಹೇಗೆ ಯಶಸ್ವಿಯಾಯಿತೆಂಬುದನ್ನು ವಿವರಿಸುತ್ತಾ ಹೀಗಂದನು:—

“ಸಭಿಕರೆ, ನಾನೀಗ ನಮ್ಮ ಇಲಾಖೆಯ ಮೇಲಧಿಕಾರಿ ಮೂರು ವರ್ಷಗಳ ಹಿಂದೆ ಇಬ್ಬರು ನನಗಿಂತಲೂ ಉಚ್ಚ ಸ್ಥಿತಿಯಲ್ಲಿದ್ದರು. ಒಬ್ಬ ಮದ್ಯಪಾನದಿಂದಾಗಿ ಡಿಸ್‌ಮಿಸ್ ಮಾಡಲ್ಪಟ್ಟ. ಮತ್ತೊಬ್ಬ ದರೋಡೆಯಿಂದಾಗಿ ಕೆಲಸದಿಂದ ದೂರವಾದ. ನಾನೀಗ ನಿಮ್ಮೊಡನೆ ಕೇಳುವುದಿಷ್ಟೆ. ನನ್ನನ್ನು ಈ ಪರಿಸ್ಥಿತಿಗೆ ತಂದ ಗುಣವಾವುದು?”

ಕೂಡಲೆ ಸಭಿಕರ ಪೈಕಿ ಒಬ್ಬನೆದ್ದು ನಿಂತು “ಕುಡಿಕತನ”ವೆಂದುತ್ತರವಿತ್ತ.

೬ ೬ ೬ ೬

“ಹುಡುಗೀ, ನಾವು ಮಾತಾಡುವುದೆಲ್ಲವನ್ನು ನೀನು ಕಿವಿಗೊಟ್ಟು ಕೇಳುವುದರಿಂದ ನಿನ್ನನ್ನು ಕೆಲಸದಿಂದ ತೆಗೆದು ಹಾಕಬೇಕೆಂದಿದ್ದೇವೆ. ಇಗೋ ನಿನ್ನ ಸಂಬಳ. ನೀನು ಮನೆಗೆ ಹೋ...”

ಕೆಲಸದ ಹುಡುಗಿ: (ಮಧ್ಯದಲ್ಲಿ ಬಾಯಿಹಾಕಿ) ನೀವು ಮಾತಾಡುವುದೆಲ್ಲ ನಾನು ಕೇಳಿ ಮೊದಲೇ ಪೆಟ್ಟಿಗೆ ಕಟ್ಟಿಟ್ಟಿದ್ದೇನೆ. ಕೊಡಿ ನನ್ನ ಸಂಬಳ”.

೬ ೬ ೬ ೬

“ಬೀದಿ ವೈದ್ಯರೊಬ್ಬರು ತಮ್ಮ ದಿವ್ಯೌಷಧಿಯನ್ನು ಮಾರಲಿಕ್ಕಾಗಿ ಅದನ್ನು ಸೇವಿಸಿದರೆ ದೀರ್ಘಕಾಲ ಜೀವಿಸುತ್ತಾರೆಂದು ಹೇಳುತ್ತಾ ಹೀಗೆಂದರು.

“ನನ್ನನ್ನು ನೋಡಿ, ನಾನು ೩೦೦ ವರ್ಷದ ಮುದುಕ.”

ಕೂಡಲೆ, ಬೀದಿ ಸಭೆಯಲ್ಲಿರುವವರೊಬ್ಬರು ವೈದ್ಯರ ಸಹ ವೈದ್ಯರೊಡನೆ “ನಿಜವಾಗಿಯೂ ಅವರಿಗಷ್ಟು ಪ್ರಾಯವಾಯಿತೆ?” ಎಂದರು.

“ನನಗೆ ಗೊತ್ತಿಲ್ಲ, ನಾನವರೊಡನೆ ೧೫೦ ವರ್ಷದಿಂದ ಕೆಲಸಮಾಡುತ್ತಿದ್ದೇನೆ.” ಎಂದು ಕೂಡಲೆ ಉತ್ತರ ದೊರಕಿತು.

೦೦೦

ಹೆಂಡತಿ—ಸಿಂಪಿಗನು ಬಿಲ್ ತೆಗೆದುಕೊಂಡು ಬಂದಿದ್ದನು.

ಗಂಡ—ನೀನು ಅವನಿಗೆ ಹೊರಗೆ ಹೋಗಿರುವರೆಂದು ಹೇಳಿರುವಿಯಲ್ಲವೆ?

ಹೆಂಡತಿ—ಅಷ್ಟೇ ಏಕೆ, ಊಟದ ಹೊತ್ತು ಮುಗಿದ ಮೇಲೆಯೆ ತಿರುಗಿ ಬರುವರು ಎಂದು ಹೇಳಿ ಕಳಿಸಿರು ಕಳಿಸಿರುವೆನು.

೦೦೦

ಪ್ರವಾಸಿಕ (ಟ್ಯಾಕ್ಸಿಯವನಿಗೆ(— ಟ್ಯಾಕ್ಸಿಯನ್ನು ವೇಗದಿಂದ ಹೊಡೆಯಬೇಡ.

ಡ್ರಾಯ್ವರ— ನಿಮಗೆ ಬೇಗನೆ ಆಸ್ಪತ್ರೆಸೇರಬೇಕಾಗಿದೆಯಲ್ಲವೆ?

ಪ್ರವಾಸಿಕ—ಅಹುದು. ಆದರೆ ಅಲ್ಲಿ ನನಗೆ ಇರಬೇಕಾಗಿಲ್ಲ.

೦೦೦

ತಾಯಿ—ನನ್ನ ಮಗನ ಪ್ರಕೃತಿಯ ಸಲುವಾಗಿ ನನಗೆ ಕಾಳಜಿ ಹತ್ತಿದೆ.

ನೆರೆಹೊರೆಯವ—ಅವನಿಗೆ ಏನಾಗಿದೆ?

ತಾಯಿ—ಏನೂ ಇಲ್ಲ. ಮೋಟಾರು ಸಾಯಕಲ್ ಕೊಂಡಿದ್ದಾನೆ.

೦೦೦

ಶಿಕ್ಷಕ-ಹಾಲು ಹುಳಿಯಾಗದಂತೆ ನೋಡಿಕೊಳ್ಳಬೇಕಾದರೆ ಏನು ಮಾಡಬೇಕು?

ವಿದ್ಯಾರ್ಥಿನಿ—ಆಗಿಂದಾಗ್ಗೆ ಕುಡಿದು ಬಿಡಬೇಕು.

---

## “ಅಹಿಂಸೆ ಒತ್ತಟ್ಟಿಗಿರಲಿ, ನಾವು ಪ್ರವೇಶಿಸುತ್ತೇವೆ!”

(೮ನೇ ಪುಟದಿಂದ ಮುಂದರಿಸಿದ್ದು)

ಖಂಡಿತ. ಈಗಾಗಲೆ ಗಾಂಧಿಭಕ್ತರಾದ ಗಫಾರ್ ಖಾನ್ ಮೊದಲಾದವರು ಕಾಂಗ್ರೆಸನ್ನು ಬಿಟ್ಟಿದ್ದಾರೆ. ಸ್ವಲ್ಪ ಕಾಲದಲ್ಲೇ ಭಾರತದಲ್ಲಿ ಅಹಿಂಸಾವಾದಿಗಳ ಒಂದು ಪಕ್ಷ ಮತ್ತು ಕಾಯಿದೆ ಮಂಡಲಗಳಲ್ಲಿ ದುಡಿಯುವವರ ಒಂದು ಪಕ್ಷ- ಹೀಗೆ ಎರಡು ಪಕ್ಷಗಳು ತಲೆದೋರುವುದು ಖಂಡಿತ. ಇದನ್ನು ನೋಡುವಾಗ ಕೆಲಕಾಲದ ಹಿಂದೆ ಶ್ರೀ. ಸತ್ಯಮೂರ್ತಿಯವರು ಆರೆವಿನೋದದಲ್ಲಿ- ಮಂತ್ರಿಮಂಡಲಗಳಲ್ಲಿ ದುಡಿಯುವವರದೊಂದು ಪಕ್ಷ, ರಚನಾತ್ಮಕ ಕಾರ್ಯಕ್ರಮವನ್ನು ಜಾರಿಗೆ ತರುವವರದೊಂದು ಪಕ್ಷ- ಹೀಗೆ ಭಾರತದಲ್ಲಿ ಎರಡು ಪಕ್ಷಗಳಿರಬೇಕೆಂದು ಹೇಳಿರುವುದು ಕಟ್ಟಕಡೆಗೆ ಕಾರ್ಯರೂಪಕ್ಕೆ ಬರುವಂತಾಯಿತೆ? ಸತ್ಯಮೂರ್ತಿಗಳು ಸತ್ಯವಲ್ಲದೆ ಎಂದೂ ಮಿಥ್ಯಾಡಲಾರರು.

---

## ಪ್ರಕಟನೆ

ಉಡುಪಿ ತಾಲೂಕು ವಾರ್–ಫಿನಾನ್ಸ್–ಸಬ್ ಕಮಿಟಿಯು “ಗವರ್ನರರ ಯುದ್ಧ ಫಂಡ್ ರೇಫ್ಲ್” ಎಂಬ ಒಂದು ಸೋಡ್ತಿಯೊಂದನ್ನು ನಡೆಸುವ ಏರ್ಪಾಡು ಮಾಡಿರುವುದು. ಸೋಡ್ತಿ ತೆಗೆಯುವ ದಿನ 30–8–40. ಜನತೆಯು ಈ ರೀತಿಯಲ್ಲಿ ಯುದ್ಧಕ್ಕೆ ಸಹಾಯ ಮಾಡುವುದೆಂದು ನಿರೀಕ್ಷಿಸಲಾಗಿದೆ.

# ಗೆಳೆಯರ ತಂಡ

**ಅಖಿಲ ಕರ್ನಾಟಕದಲ್ಲಿ ಹಬ್ಬಿರುವ ಏಕಮಾತ್ರ ಮಿತ್ರಮಂಡಲಿ.**

**ವಾರ ೯೪** **ಸ್ಥಾಪನೆ: ೧೯೩೮** **ಸದಸ್ಯರು ೨೨೦**

ಪ್ರಿಯ ಗೆಳೆಯರೆ,

ಕಳೆದವಾರ ಮುಂಬಯಿಯ ಗೆಳೆಯರೊಬ್ಬರು ನಮ್ಮ ತಂಡದ ಕುರಿತಾಗಿ ಕಟುವಾದ ವಿನೋದ–ವಿಮರ್ಶೆ ಮಾಡಿರುವುದನ್ನು ನೀವು ಓದಿರಬಹುದು.

ಇತರ ಗೆಳೆಯರು ಕೂಡಾ ಅವರಂತೆಯೆ ಬರೆಯುತ್ತಾ ಬಂದರೆ ಅಥವಾ ಯೋಚಿಸ ತೊಡಗಿದರೆ ನಮ್ಮ ತಂಡದ ಅಭಿವೃದ್ಧಿಯಾದಂತೆಯೆ. ಆದರೆ ಅದನ್ನು ಬರೆದಿರುವವರು ಕೂಡಾ ನಿಮ್ಮಂತೆಯೆ ವರ್ತಿಸಿರುವುದರಿಂದ ಅವರದು ಕೇವಲ ಪರೋಪದೇಶ ಪಾಂಡಿತ್ಯವಾಯಿತಲ್ಲದ ಬೇರೇನೂ ಇಲ್ಲ.

ಇನ್ನೊಂದು ವಿಚಾರ, ಇತ್ತೀಚೆಗೆ ಕೆಲವು ಗೆಳೆಯರು ಇತರ ಸದಸ್ಯರ ವಿಳಾಸಗಳನ್ನು ಪತ್ರವ್ಯವಹಾರಕ್ಕಾಗಿ ಬರೆದು ಕೇಳುತ್ತಿದ್ದಾರೆ. ಸದಸ್ಯರಿಗೆ ಇಚ್ಛೆಯಿರುವ ಊರಿನ ಹೆಸರನ್ನು ಸೂಚಿಸಿ ಇಂತಿಂತಹ ವಿಷಯದಲ್ಲಿ ಅಭಿರುಚಿಯಿರುವವರೊಡನೆ ಪತ್ರವ್ಯವಹಾರಮಾಡಲಿಚ್ಛೆಯಿದೆಯೆಂದು ತಿಳಿಸಿದರೆ ಕೂಡಲೆ ಆ ಊರಿನಲ್ಲಿರುವ ಸದಸ್ಯರ ವಿಳಾಸಗಳನ್ನು ಕಳುಹಿಸಲಾಗುವುದು.

ಇತಿ ತಮ್ಮ
**ಗೆಳೆಯ**

---

## ಗೆಳೆಯರ ತಂಡದ ಹೊಸ ಸದಸ್ಯರು

೨೧೮. ಶ್ರೀ. ಸತ್ಯರಾಜ ಎನ್ ಚತಗರ್, c/o ಡಾಕ್ಟರ್ ಎಮ್. ಎಸ್. ಹೊಳ್ಳ, ಎಲ್. ಸಿ. ಪಿ. ಎಸ್. ಬೈಂದೂರು, ದ ಕ.

ತಮ್ಮ ಸದಸ್ಯತನದ ಸಂಖ್ಯೆ ೨೧೮.

೦ ೦ ೦

೨೧೯. ಶ್ರೀ. ಕೆ. ಗೋಪಾಲರಾಜು, ಗೋಲ್ಡ್ ಸ್ಮಿತ್ ಅಂಡ್ ಜ್ಯುವೆಲರ್, ನಂ. 33, ಹರಿಯೋಪೇಟೆ, ಬೆಂಗಳೂರು ಸಿಟಿ.

ತಮ್ಮ ಸದಸ್ಯತನದ ಸಂಖ್ಯೆ ೨೧೯.

೦ ೦ ೦

೨೨೦. ಅಶ್ವತ್ಥನಾರಾಯಣ ಶೆಟ್ಟಿ, ನ್ಯೂಸ್ ಏಜಂಟ್, ನ್ಯೂ ಮಾರ್ಕೆಟ್ ಸ್ಕ್ವಯರ್, ಬೆಂಗಳೂರು ಸಿಟಿ.

ತಮ್ಮ ಸದಸ್ಯತನದ ಸಂಖ್ಯೆ ೨೨೦.

---

**ಗೆಳೆಯರ ತಂಡಕ್ಕೆ**

**ಸದಸ್ಯರಾಗಿ**

**ಪ್ರೋತ್ಸಾಹಿಸಿರಿ.**

Swastik
'ಕಾಂತಿ–
ಚೆಲುವಿನ
ಸಾಬೂನು'



ಭಾರತದ ಅತ್ಯುತ್ತಮ ಮತ್ತು ಅತಿ ಶುದ್ಧ ಸೌಂದರ್ಯ ವರ್ಧಕ ತೈಲಗಳನ್ನು ಘನೀಕರಿಸಿ, ತಯಾರಿಸಿದ "ಕಾಂತಿ" ಟ್ಯಾಲೆಟ್' ಸಾಬೂನು. ಮೈದೊಗಲಿನ ಸರ್ವವಿಧ ಕಶ್ಮಲ ಬೆವರುಗಳನ್ನು ರೋಮಕೂಪದಿಂದೆತ್ತಿ ನಿವಾರಿಸಿ, ಮೃದುತರ, ಸುಂದರತರ ಹಾಗು ಪ್ರಕಾಶಮಾನವನ್ನಾಗಿ ಮಾಡುವುದು.

ಪ್ರಾಣಿಗಳ ಕೊಬ್ಬಿರುವ, ರಸಾಯನ ದ್ರವ್ಯಗಳಿಂದ ಸಿದ್ಧವಾದ ಒರಟು ಸಾಬೂನುಗಳನ್ನು ಪಯೋಗಿಸಿ ನಿಮ್ಮ ಚರ್ಮವನ್ನೇಕೆ ಒರಟಾಗಿಸಿ ಅಂದಗೆಡಿಸಿಕೊಳ್ಳುವಿರಿ? ಹಿಮಮಯ ರಾಜ್ಯಗಳಲ್ಲವು ಪ್ರಯೋಜನಕಾರಿಗಳಾಗಬಹುದು. ಆದರೆ ಉಷ್ಣವಲಯದ ಮೈದೊಗಲಿಗೆ "ಕಾಂತಿ" ಯೊಂದೇ ಕಾಂತಿದಾಯಕ ಆದರ್ಶ ಸಾಬೂನು.

ಮೂರು ತುಂಡುಗಳುಳ್ಳ ಪೆಟ್ಟಿಗೆಯೊಂದನ್ನು ಇಂದೇ ಕೊಂಡು ಉಪಯೋಗಿಸ ತೊಡಗಿರಿ.




84

KANTI SOAP FOR COMPLEXION
SWASTIK OIL MILLS, LTD. BOMBAY 15

# ಚಿತ್ರ ಪ್ರಪಂಚ



ನ್ಯೂ ಥಿಯೇಟರ್ಸನವರ ಸಪೇರಾ ಚಿತ್ರದಲ್ಲಿ
**ನವಾಬ್ ಮತ್ತು ಕಾನನ ಬಾಲೆ**

## ಸೈನಿಕರಿಗೆ ಸಿನೆಮಾ

ಭಾರತೀಯ ಸೈನ್ಯಾಧಿಕಾರಿಗಳು ಭಾರತೀಯ ಚಿತ್ರಗಳನ್ನು ಭಾರತೀಯ ಸೈನಿಕರಿಗೆ ತೋರಿಸುವ ವ್ಯವಸ್ಥೆ ಮಾಡಿರುವುದರಿಂದ ಚಲಚ್ಚಿತ್ರ ಕೈಗಾರಿಕೆಗೆ ವರ್ಷವೊಂದರ ಸುಮಾರು ೫೦,೦೦೦ ರೂಪಾಯಿ ದೊರಕುವುದಂತೆ. ವ್ಯಾಪಾರೀ ದೃಷ್ಟಿಯಂತಿರಲಿ, ಈ ವರೆಗೆ ವಿದೇಶೀ ಚಿತ್ರಗಳನ್ನೇ ನೋಡುತ್ತಿದ್ದ ಸೈನಿಕರು ಭಾರತೀಯ ಚಿತ್ರಗಳನ್ನು ನೋಡುವಂತಾದುದು ಸಂತೋಷದ ಸಂಗತಿ.

೦ ೦ ೦

## ಬೆಳ್ದಿಂಗಳ ರಾತ್ರಿ

ನಿರ್ದೇಶಕ ಪಿ. ಸಿ. ಬರುವಾರವರು 'ಬೆಳ್ದಿಂಗಳ ರಾತ್ರಿ'ಯೆಂಬ ಚಿತ್ರವನ್ನು ಸದ್ಯದಲ್ಲಿಯೇ ತಯಾರಿಸಲಿದ್ದಾರಂತೆ.

೦ ೦ ೦

## ಭರೋಸಾ

ಮಿನರ್ವಾ ಕಂಪೆನಿಯವರ 'ಭರೋಸಾ'ಎಂಬ ಚಿತ್ರವು ಪೂರ್ಣವಾಗಿದೆ. ಇದರಲ್ಲಿ ಚಂದ್ರಮೋಹನ್, ಶೀಲಾ, ಮಾಯಾದೇವಿ, ಸರ್ದಾರ್ ಅಖ್ತರ್, ಮಝಹಾರ್ ಖಾನ್ ಮೊದಲಾದವರು ಅಭಿನಯಿಸಿದ್ದಾರೆ. ಆಫ್ರಿಕದ ನೈಸರ್ಗಿಕ ದೃಶ್ಯಗಳು ಇದರಲ್ಲಿ ಅಡಕವಾಗಿವೆಯಂತೆ.

೦ ೦ ೦

## "ಸಜನೀ"

ಯುವಕರಮುಂದಿರುವ ಪ್ರಶ್ನೆಯೆಂದರೆ ಒಂದು. ಯಾವುದು ಮೇಲು? ಹಣವೋ ಪ್ರೇಮವೋ? ಸಬಿತಾದೇವಿ ಮತ್ತು ಪೃಥ್ವೀರಾಜರು ಈ ಸುಧಾಮ ಚಿತ್ರದಲ್ಲಿ ಯಶಸ್ವಿಯಾಗಿ ಅಭಿನಯಿಸಿದ್ದಾರೆ. ಬಾದಾಮಿಯವರ ನಿರ್ದೇಶಕತ್ವದಲ್ಲಿ ತಯಾರಾದ ಚಿತ್ರವಿದು.

೦ ೦ ೦

## ಬಂಧನ

ಬೊಂಬೇ ಟಾಕೀಸಿನವರ 'ಬಂಧನ'ವೆಂಬ ಹೊಸ ಚಿತ್ರದಲ್ಲಿ ಲೀಲಾ ಚಿಟ್ನೀಸ್, ಅಶೋಕ ಕುಮಾರ, ದೇಸಾಯಿ, ಹೀಗವರಲ್ಲದೆ ಹೊಸ ನಟರಾದ ಸುರೇಶ್, ಶಹಾ ನವಾಜ್, ಪೂರ್ಣಿಮಾ ದೇಸಾಯಿ, ಮೊದಲಾದವರು ಅಭಿನಯಿಸಿದ್ದಾರೆ. ಈ ಚಿತ್ರವು ಮುಂಬಯಿಯಲ್ಲಿ ಈ ವಾರ ಪ್ರದರ್ಶಿಸಲ್ಪಡುತ್ತಿದೆ.

## "ಲಪಾಂಡವ"

ನವಯುಗ ಚಿತ್ರಪಟದವರ "ಲಪಾಂಡವ" ಎಂಬ ನೂತನ ಚಿತ್ರವು ಪೂರ್ಣವಾಗಿದೆ. ಪ್ರೊ. ಅತ್ರೆಯವರಿಂದ ಬರೆಯಲ್ಪಟ್ಟ ಈ ಕಥೆಯಲ್ಲಿ ಬಾಬೂರಾವ್ ಪೆಂಡಾರ್ಕರ್, ವಿನಾಯಕ, ಸಾಲ್ವಿ, ಮೀನಾಕ್ಷಿ ಮೊದಲಾದವರು ಭಾಗವಹಿಸಿದ್ದಾರೆ. ಮೊದಲು 'ಪ್ರಭಾತ'ದಲ್ಲಿದ್ದ ಕೆ. ನಾರಾಯಣ ಕಾಳೆಯವರೇ ಇದರ ನಿರ್ದೇಶಕರು.

೦ ೦ ೦

## ಕಲಾ ಕೇಂದ್ರಗಳು

ಭಾರತದಲ್ಲಿ ಕಲಾಕೇಂದ್ರಗಳು ಒಂದೇ ಸವನೆ ಹೆಚ್ಚತೊಡಗಿವೆ. ಉದ



ಸಪೇರಾ ಚಿತ್ರದ ಇನ್ನೊಂದು ದೃಶ್ಯ

ಯ ಶಂಕರರು ಆಲ್ಮೋರದಲ್ಲಿ ತನ್ನ ಸಂಸ್ಥೆಯನ್ನು ಸ್ಥಾಪಿಸುತ್ತಿರುವಾಗ ಶ್ರೀ. ರುಕ್ಮಿಣಿ ದೇವಿಯವರು ಅಡ್ಯಾರಿನಲ್ಲೊಂದನ್ನು ಪ್ರಾರಂಭಿಸಿದ್ದಾರೆ. ಮುಂಬಯಿಯಲ್ಲೊಂದು ಕೇಂದ್ರವನ್ನು ತೆರೆಯುವುದಕ್ಕಾಗಿ ಮೇನಕಾರವರು ದಕ್ಷಿಣ ಭಾರತದಲ್ಲಿ ಸಂಚರಿಸುತ್ತಿದ್ದಾರೆ. ಶ್ರೀ. ಹರೀಂದ್ರನಾಥ ಚಟ್ಟೋಪಾಧ್ಯಾಯರವರು ಮುಂಬಯಿ ಟಾಕೀಸಿನ ನೃತ್ಯ ಕಲಾಕೋವಿದೆ ಸುನೀತಾ ದೇವಿಯರರೊಂದಿಗೆ ಮೈಲಾಪುರ, ಮದ್ರಾಸಿನಲ್ಲಿ ಹೊಸ ಕಲಾಕ್ಷೇತ್ರವೊಂದನ್ನು ತೆರೆದಿದ್ದಾರೆ. ಈ ಕೇಂದ್ರಗಳು ನೃತ್ಯ ಮತ್ತು ಅಭಿನಯ ಕಲೆಯಲ್ಲಿ ತರುಣ ತರುಣಿಯರಿಗೆ ತರಬೇತಿಯನ್ನು ಯಶಸ್ವಿಯಾಗಿತ್ತರೆ ಅದೆಷ್ಟು ಚೆನ್ನಾಗಬಹುದು.

೦ ೦ ೦

## ಕೃಷಿಗಾಗಿ ಚಲಚ್ಚಿತ್ರ ಸಂಸ್ಥೆಯ ಸ್ಥಾಪನೆ

ಶ್ರೀ. ಕೆ. ಎಸ್. ದರಿಯಾನಿಯವರು "ಕೃಷಿನ್ ಮೂವಿಟೋನ್" ಎಂಬೊಂದು ಸಂಸ್ಥೆಯನ್ನು ಸ್ಥಾಪಿಸಿ, ಕೃಷಿಯ ನಾಡಾದ ಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ತಯಾರಿಸುವ ವ್ಯವಸ್ಥೆ ಮಾಡಿದ್ದಾರೆ.

## ಸಿನೆಮಾ ಶಬ್ದಕೋಶ

(ವಿನೋದದಲ್ಲಿ)

ಫಿಲ್ಮ್— ಜನತೆಯ ಕಣ್ಣಿಗೆ ಧೂಳೆರಚುವುದಕ್ಕಾಗಿ ಹಾಡುವ



"ಸಪೇರಾ" ಚಿತ್ರದಲ್ಲಿ ಸನ್ಯಾಲ್

ಸುಂದರಿಯರನ್ನು ಒಂದುಗೂಡಿಸಿ ಹಲವಾರು ಹಾಡುಗಳನ್ನು ಬೆರೆಸಿ ತಯಾರಿಸುವ ಒಂದು ಪಂಚಕಜ್ಜಾಯ.

೦ ೦ ೦

ಕಲಾವಿದ— ಮುಖಕ್ಕೆ ಬಣ್ಣ ಹಚ್ಚಿಕೊಂಡು ಮಂಗಲಗ್ರಹದ ಜನರಂತೆ ಅಭಿನಯಿಸಲು ಪ್ರಯತ್ನಿಸುವವರು.

೦ ೦ ೦

ನಟಿ—ಲಟ್ವಾದ ಹುಡುಗಿ, ಅಭಿನಯ ಹಾಡು ನೃತ್ಯ ಇವಾವುದೂ ಈಕೆಗೆ ತಿಳಿದಿರಬೇಕಾಗಿಲ್ಲ. ಫಿಲ್ಮ್ ಡೈರೆಕ್ಟರನ ದೃಷ್ಟಿಯಲ್ಲಿ ಸುಂದರಿಯಾದರೆ ಸಾಕು.

೦ ೦ ೦

ಕಥೆ—ಪ್ರಣಯ, ವೇಶ್ಯಾಗ್ರಹ, ಕುದುರೆಸವಾರಿ, ಹೊಡೆದಾಟ, ಬಡಿದಾಟ ರೈಲ್ವೇ ದೃಶ್ಯ ಮೊದಲಾದ ದೃಶ್ಯಗಳನ್ನೊಳಗೊಂಡ ಹಲವಾರು ಕಥೆಗಳಿಂದ ಕದ್ದು ಒಂದು ಕಥೆಯನ್ನಾಗಿ ಮಾಡಿದ ಕಥೆಯೆಂಬ ಕಥೆ.

೦ ೦ ೦

ನಿರ್ದೇಶಕ— ಕಲೆ, ಸಂಗೀತ ಸಾಹಿತ್ಯ, ನೃತ್ಯ, ಶಿಲ್ಪಿ ಮೊದಲಾದ ಕಲೆಗಳೆಲ್ಲಾ ತನಗೆ ತಿಳಿದಿದೆಯೆಂದು ಇತರರನ್ನು ನಂಬಿಸಿ ಕಂಪೆನಿಯ ಪ್ರೊಪ್ರೈಟರನ ಮುಂದೆ ಬಾಲಾಡಿಸಿ, ನಟನಟಿಯರನ್ನು ಕಂಡೊಡನೆ ಬಗುಳಿ, ಸಾಧ್ಯವಾದರೆ ಕಚ್ಚಿ, ಕಂಪೆನಿಯ ಶೀಘ್ರಪತನಕ್ಕಾಗಿ ದುಡಿಯುವ ವ್ಯಕ್ತಿ.

೦ ೦ ೦

ಚಿತ್ರ ತಯಾರಿಸುವವ—ಸಂಸ್ಕೃತಿಯ ಗಂ[illegible]ಯಿಲ್ಲದ, ನ್ಯಾಯನೀತಿಗಳನ್ನು ಲೆಕ್ಕಿಸದ ಬಾತುಹೋದ ಹಣದ ಚೀಲದ ಒಡೆಯ.

**S. S. Rubber Stamp mfg. Co, Chikmagalur**



ತಮಗೆ ಅಗತ್ಯ ಬೇಕಾಗುತ್ತಿರುವ ಉತ್ತಮ ತರತರದ ರಬ್ಬರ್ ಮೊಹರುಗಳು, ಅರಗಿನ ಶೀಲುಗಳು, ಬ್ಲಾಕುಗಳೇ ಮುಂತಾದ ಸಾಮಾನುಗಳು ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶ್ರೀ. ಸುಬ್ರಮಣ್ಯ ರಬ್ಬರ್ ಸ್ಟ್ಯಾಂಪ್ ಕಂಪೆನಿ, ಚಿಕ್ಕಮಗಳೂರು.**

Printed & Published by P. Venkataramanacharya at Manipal Power Press, Udipi.

# ಅಂತರಂಗದ ಇಪ್ಪತ್ತೆರಡನೆಯ ಸ್ಪರ್ಧೆ

## ಸ್ಪರ್ಧೆಯ ಬಾಬ್ತು ಜಮೆಯಾದ ಮೊಬಲಗಿನಲ್ಲಿ ಈ ರೀತಿ ಬಹುಮಾನವು ಹಂಚಲ್ಪಡುವುದು.

| | | |
|---|---|---|
| ಪ್ರಥಮ ಬಹುಮಾನ: | | ರೂ. ೪೦/ |
| ದ್ವಿತೀಯ | ,, | ರೂ. ೨೦% |
| ತೃತೀಯ | ,, | ರೂ ೧೦% |

ಎಲ್ಲರಿಗಿಂತಲೂ ಹೆಚ್ಚು ಉತ್ತರಗಳನ್ನು ಕಳುಹಿಸುವವರಿಗೆ ರೂ. ೫%

| | | | | | | | | |
|---|---|---|---|---|---|---|---|---|
| ಶ | | ೨ ನ | ■ | ೩ ಮಾ | | ೪ ಹ | ೫ | ■ |
| | ■ | ೬ | ೭ | | ■ | ೮ | | ೯ ಬ |
| ಪ | ಡಿ | ಸ | ನ | ಕಿ | ■ | | ■ | |
| | ■ | ೧೧ | | ■ | ೧೨ ಷು | ■ | ೧೩ | |
| ■ | ೧೪ | | ಯ | ■ | ೧೫ | ೧೬ ಜ | | ■ |
| ೧೭ | | ■ | ೧೮ ರು | | | | ■ | ೧೯ ಗ |
| ೨೦ | ಪ | ೨೧ | ■ | ಳ | ■ | ೨೨ | ೨೩ ರ | |
| ■ | ೨೪ | | ಡಿ | ■ | ೨೫ | ■ | | |
| ೨೬ | | ರಿ | ■ | ೨೭ ಧ | | | ■ | |

### ಡದಿಂದ ಬಲಕ್ಕೆ

೧. ಗಂಧದ ಹೆಸರು. ೩. ಶಿವನನಾಮಗಳಲ್ಲೊಂದು. ೬. ...ರ್ಯ. ೮. ವೃಷಭದ (ತಪ್ಪಾದ) ೧೦. ಪೇರಿಸಿದ ಹೆಣ್ಣಾನೆ. ... ಮನ್ಮಥನ ಮಡದಿಯ ಹೆಸರು. ೧೩. ಗೃಹಗಳಲ್ಲೊಂದು. ... ಯುಗಾಂತ್ಯದಲ್ಲಿ—ಆಗುವುದು ಎಂದು ಪುರಾಣದ ಸೂಚನೆ. ... ನಕ್ಷತ್ರ. ೧೭. ತಾಯಿ. ೧೮. ಕಾಲಗೆಜ್ಜೆ ಪಾಗಡದ ಹೆಸ... ೨೦. ತಗೆ ಅಥವಾ ಅಪಹರಿಸು. ೨೨. ತುಂಬಾ ರೋಮವಿರುವ ಕಾಡುಪ್ರಾಣಿ. ೨೪. ಬಿಲ್ಲು ೨೬. ವಿಷ್ಣು ೨೭. —ವಸ್ತ್ರವನ್ನು ...ಟ್ಟಾಗಿ ಎಲ್ಲರೂ ಉಡುವರು.

### ಮೇಲಿಂದ ಕೆಳಕ್ಕೆ

೧. ಇದು ಒಂದು ಶಿಲೆಯ ಹೆಸರು. ೨ ಕೃಷ್ಣನ ಮಗನ ...ರು. ೩. ಅಂಜನೇಯನ ಮಗನ ಹೆಸರು. ೪ ಜಂಕೆ. ೫ — ...ವಿಲ್ಲದ ಮಾತಿಗೆ ಬೆಲೆ ಇಲ್ಲ. ೭ ಒಬ್ಬನಿಗೆ ಹಲವು ಮಂದಿ ಸತಿಯರಿದ್ದರೆ ಅವರು ಒಬ್ಬರಿಗೆ ಒಬ್ಬರು—ರಾಗುತ್ತಾರೆ. ೯ ಹೊದಿಯುವ ಒಂದು ವಸ್ತ್ರದ ಹೆಸರು. ೧೨ ಮರಣವಿಲ್ಲದವರು. ೧೪ ಕ್ರಿ. ಶ. 1580ರಲ್ಲಿ ಮೇವಾಡದ ರಾಜನ ಹೆಸರು. ೧೫ ಸ್ನಾನದ ಹೆಸರು. ೧೯ ಸಮಯ ಸೂಚಿಸುವ ಒಂದು ವಸ್ತುವಿನ ಹೆಸರು. ೨೧ ಮರ್ದನ ಉಪಕರಣಗಳಲ್ಲೊಂದು. ೨೩ ಸೂರ್ಯ. ೨೪ ಮೃಗರಾಜನ ಹೆಸರು. ೨೫ ೭ನೇ ಸಂವತ್ಸರದ ಹೆಸರು.

### — ಸ್ಪರ್ಧೆಯ ನಿಯಮಗಳು —

ಈ ಸ್ಪರ್ಧೆಯ ಉತ್ತರವು ಅಂತರಂಗದ ಪ್ರಧಾನಸಂಪಾದಕರ **ಬಳಿ** ಮೊಹರು ಮಾಡಿಡಲಾಗಿದೆ. ಅದಕ್ಕೆ ಸಂಪೂರ್ಣ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವವು. ಸರಿಹೋಲುವ ಉತ್ತರಗಳಿಲ್ಲದಿದ್ದಲ್ಲಿ ಒಂದು ತಪ್ಪು ಇರುವವರಿಗೆ ಪ್ರಥಮ ಬಹುಮಾನ ಕೊಡಲ್ಪಡುವುದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವವು. ಬಹುಮಾನವನ್ನು ಹಂಚುವ ವಿಧಾನದಲ್ಲಿ ಸ್ಪರ್ಧೆಯ ಮೆನೇಜರರ ನಿಷ್ಕರ್ಷೆಯೇ ಕೊನೆಯದು. ಪ್ರತಿ ಉತ್ತರಕ್ಕೂ ಪ್ರವೇಶ ಧನ ನಾಲ್ಕಾಣೆ. ಒಬ್ಬನು ಎಷ್ಟೂ ಉತ್ತರಗಳನ್ನು ಕಳುಹಿಸಬಹುದು. ಎಂಟಾಣೆಗೆ ಮೂರು ಉತ್ತರಗಳನ್ನು ಕಳುಹಿಸಬಹುದಾಗಿದೆ. ಆದರೆ ಒಬ್ಬನಿಗೆ ಒಂದಕ್ಕಿಂತ ಹೆಚ್ಚು ಬಹುಮಾನ ಕೊಡಲ್ಪಡುವುದಿಲ್ಲ. ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪ್, ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರವನ್ನು ಸ್ವೀಕರಿಸುವ ಕಡೇ ದಿನ ಆಗೋಸ್ತು ೩೧. ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸ್ಪರ್ಧೆಗೆ ಉತ್ತರ ಕೊಟ್ಟವರ ಹೆಸರನ್ನೂ ಸರಿಯಾದ ಉತ್ತರವನ್ನೂ ಸಪ್ಟಂಬರ ೧೫ರ "ಅಂತರಂಗ"ದಲ್ಲಿ ಪ್ರಕಟಿಸಲಾಗುತ್ತದೆ. ಸ್ಪರ್ಧೆಯ ವಿಷಯದಲ್ಲಿ ಅನಾವಶ್ಯಕ ಪತ್ರವ್ಯವಹಾರವನ್ನು ಮಾಡಲಾಗುವುದಿಲ್ಲ. ಸ್ಪರ್ಧೆಯ ಉತ್ತರಗಳನ್ನು ಕೂಪನಿನಲ್ಲಿ ಯಾ ಖಾಲಿ ಕಾಗದದಲ್ಲಿ ಬರೆದು ಕಳುಹಿಸಬಹುದು.

—ಮೆನೇಜರ್, ಅಂತರಂಗ ಸ್ಪರ್ಧೆ, ಉಡುಪಿ.

**ಅಂತರಂಗ ಸ್ಪರ್ಧೆಗೆ ಎಲ್ಲಿಯೂ ಏಜಂಟರಿರುವುದಿಲ್ಲ.**

# Yes!

YOU CAN ENTRUST
ALL PRINTING
WORKS TO THE
FAMOUS FIRM

# General Supplies, Ltd.,

UDIPI